(SRI C. J. MUCKANNAPPA)

your Chambers about the majority of the legislators not having been invited for the State banquet. A discrimination has been made. I brought it to your notice the other day and you promised to look into it.

Mr. SPEAKER.—About that, I made enquiries with the Chief Secretary. He told me that there are certain rules in this respect and only ex-Ministers, Ministers, Deputy Ministers, Presiding Officers are invited and not others.

Sri C. J. MUCKANNAPPA.—Many legislators are invited.

Mr. SPEAKER.—He told me that all legislators are not invited. Only certain legislators are given invitation.

Sri C. J. MUCKANNAPPA.—When the Assembly is in Session, can such a discrimination be made by the Chief Secretary or the Government? We are not cringing for an invitation. But why should such discrimination be made, Sir?

Mr. SPEAKER.—Instead of wasting much time over a question like this in this Assembly, I would like to suggest that if information is given to me, I will make further enquiries with the Chief Secretary. I had a talk with the Chief Secretary and he told me that Members are invited under certain rules.

REPORT OF THE MYSORE TENANCY AND AGRICULTURAL LAND LAWS COMMITTEE.

(Debate continued)

ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಸ್ವಾಮಿ, ಈ ಸಭೆಯ ಮುಂದೆ ಜತ್ತಿ ಸಮಿತಿಯವರ ವರದಿ ಈಗಾಗಲೇ ಸುಮಾರು ಐದಾರು ದಿವಸಗಳು ಚರ್ಚೆಯಾಗಿ ಅನೇಕ ಮಾನ್ಯ ಸದಸ್ಯರು ಸಲಹೆ ನೀಡಿದ್ದಾರೆ. ಈ ವರದಿಯಲ್ಲಿ ಮುಖ್ಯವಾದ ವಿಷಯಗಳನ್ನು ನಮ್ಮ ಮಾನ್ಯ ಸದಸ್ಯರು ಮತ್ತು ದೇಶದ ಜನಗಳು ನೋಡಬೇಕಾಗಿದೆ. ಮೊದಲನೆಯದಾಗಿ ನಮ್ಮ ಭಾರತ ದೇಶಕ್ಕೆ ಪ್ರಜಾಪ್ರಭುತ್ವ ಬಂದಮೇಲೆ, ಪ್ಲಾನಿಂಗ್ ಕಮೀಶನ್‌ನವರು ಮೊದಲನೆಯದಾಗಿ ಭೂ ಸುಧಾರಣೆ ಆಗಬೇಕು ಎಂದು ಹೇಳಿದರು ಆದರೆ ಪ್ಲಾನಿಂಗ್ ಕಮೀಷನ್ನಿನವರು ಹಿಂದಿನದಿವಸ ಬಹು ಮುಖ್ಯವಾದ ಒಂದು ವಿಷಯವನ್ನು ಮರೆತಿದ್ದಾರೆ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇಂಡಿಯಾ ಸರ್ಕಾರದವರು ಯಾವರೀತಿ ಹೆಜ್ಜೆ ಇಡುತ್ತಾ ಇದ್ದಾರೆ ಮತ್ತು ಅವರ ನೀತಿಯಿಂದ ಇಂಡಿಯಾ ದೇಶದ ಪ್ರಜೆಗಳಮೇಲೆ ಆಗತಕ್ಕಂಥ ಧಕ್ಕೆ ಏನು ಎಂಬ ವಿಷಯವನ್ನು ನಾವು ಬಹಳ ಸೂಕ್ಷ್ಮವಾಗಿ ನೋಡಬೇಕಾಗಿದೆ. ಮೊದಲು ಭೂ ಸುಧಾರಣೆ ನಿಜವಾಗಿಯೂ ಆಗಬೇಕು. ಆದರೆ ಭೂ ಸುಧಾರಣೆ ಆಗುವುದಕ್ಕೆ ಮುಂಚೆ ಯಾವುದನ್ನು ಮಾಡಬೇಕಾಗಿತ್ತು ಅನ್ನುವುದನ್ನು ಪ್ಲಾನಿಂಗ್ ಕಮಿಷನ್ನಿನವರು ಯೋಚನೆ ಮಾಡಬೇಕಾಗಿತ್ತು. ಈಗ ಭೂ ಸುಧಾರಣೆಯಿಂದ ಹಳ್ಳಿಗಾಡಿನಲ್ಲಿರತಕ್ಕಂಥ ರೈತರಮೇಲೆ ಸರ್ಕಾರದ ವ್ಯಾಪ್ತಿಯನ್ನು ಉಪಯೋಗಿಸಿ ಜಮೀನು ಇಲ್ಲದೇ ಇರುವವರಿಗೆ ಜಮೀನು ಕೊಟ್ಟು ಸುಧಾರಿಸಬೇಕೆಂದು ಆಶೆಇದೆ. ಇದಕ್ಕಿಂತ ಮುಂಚೆ ನಮ್ಮ ದೇಶದ ಆರ್ಥಿಕ ವಿಷಯದಲ್ಲಿ ಯೋಚನೆ ಮಾಡುವುದಾದರೆ, ಇತರೇ ವಿಷಯಗಳಲ್ಲಿ ಸೀಲಿಂಗ್ ಹಾಕತಕ್ಕಂಥ ಯೋಜನೆಯನ್ನು ಇಂಡಿಯಾ ಸರ್ಕಾರ ಆಲೋಚನೆ ಮಾಡಬೇಕಾಗಿತ್ತು. ಅನೇಕ ಸಂದರ್ಭದಲ್ಲಿ ನೆಹರೂರವರು ಕೂಡ ಹೇಳಿದ್ದಾರೆ. "ಭೂಸುಧಾರಣೆಗಿಂತ ಮುಂಚೆ ಇತರೆ ಕ್ಷೇತ್ರಗಳಲ್ಲಿ ಸೀಲಿಂಗ್ ಮಾಡಿ," ಅನಂತರ ಲ್ಯಾಂಡ್ ಸೀಲಿಂಗ್ ಅನ್ನು ಪರ್ಯಾಲೋಚಿಸಬೇಕೆಂದು. ನಮ್ಮ ಆರ್ಥಿಕಮಟ್ಟ ಹೇಗಿದೆ? ನಮ್ಮ ಇಂಡಿಯಾ ಸರ್ಕಾರದ ಬಡ್ಜೆಟ್ಟು ಸುಮಾರು ಆರುನೂರು ಕೋಟಿ ರೂಪಾಯಿ ಇದೆ. ಹೊರದೇಶಗಳ ಬಡ್ಜೆಟ್ಟಿನೊಡನೆ ನಮ್ಮ ಇಂಡಿಯಾ ದೇಶದ ಬಡ್ಜೆಟ್ಟನ್ನು ಹೋಲಿಸಿದರೆ ನಮಗೆ ಗಾಬರಿಯಾಗುತ್ತದೆ. ನಮ್ಮ ಬಡ್ಜೆಟ್ಟಿನಲ್ಲಿ ಸುಮಾರು ನಲವತ್ತೈದು ಪರ್ಸೆಂಟಿಗೆ ಹೆಚ್ಚಿಗೆ ಭಾಗವನ್ನು ಮಿಲಿಟರಿಗೋಸ್ಕರವಾಗಿ ಉಪಯೋಗಿಸಿ ಸುಮಾರು 55 ಪರ್ಸೆಂಟು ಭಾಗವನ್ನು ಸಾರ್ವಜನಿಕರಿಗೋಸ್ಕರವಾಗಿ ಉಪಯೋಗ ಮಾಡಬೇಕಾಗಿದೆ. ಈ ಸಮಯದಲ್ಲಿ ನಮ್ಮ ಮುಂದೆ ಐಶ್ವರ್ಯವಂತರೂ ವ್ಯಾಪಾರಸ್ಥರೂ ಬಂಡವಾಳ ಶಾಹಿಗಳು ಬರುತ್ತಾರೆ. ನಮ್ಮ ಮೈಸೂರಿನಲ್ಲಿಯೇ ಎರಡುಕೋಟಿ ಪ್ರಜಾ ಸಂಖ್ಯೆಯಲ್ಲಿ ವರ್ಷಕ್ಕೆ ಒಂದುಕೋಟಿ ರೂಪಾಯಿ ಉತ್ಪತ್ತಿ ಇರತಕ್ಕ ಜನಗಳಿದ್ದಾರೆ. ಮನೆ ಬಾಡಿಗೆಯಿಂದಲೇ ವರ್ಷಕ್ಕೆ ಸುಮಾರು ಎರಡುಲಕ್ಷ ರೂಪಾಯಿ ಉತ್ಪತ್ತಿ ಹೊಂದತಕ್ಕ ಜನಗಳಿದ್ದಾರೆ. ನಮ್ಮ ಸರ್ಕಾರಿ ನೌಕರರುಗಳಲ್ಲಿ ವರ್ಷಕ್ಕೆ ಸುಮಾರು 36 ಸಾವಿರ ರೂಪಾಯಿ ತೆಗೆದುಕೊಳ್ಳುತ್ತಾ ಇರತಕ್ಕಂಥ ಅಧಿಕಾರಿ ವರ್ಗದವರಿದ್ದಾರೆ. ಪ್ಲಾನಿಂಗ್ ಕಮಿಷನ್ನಿನವರು ಈ ಭೂಸುಧಾರಣೆ ಮಾಡತಕ್ಕಂಥ ಸಂದರ್ಭದಲ್ಲಿ ಈ ಬಾಕಿ ಎಲ್ಲಾ ಸುಧಾರಣೆಯನ್ನು ಮಾಡಬೇಕಾಗಿತ್ತು. ರೈತರಿಗೂ ಮತ್ತು ಇತರ ವರ್ಗಗಳಿಗೂ ಇರುವ ತಾರತಮ್ಯವನ್ನು ಯೋಚನೆಮಾಡದೆ ಈ ಭೂಸುಧಾರಣೆಯನ್ನು ಮಾತ್ರ ತಂದಿರತಕ್ಕಂಥಾದ್ದು ಒಂದು ದೃಷ್ಟಿಯಿಂದ ವಿಷಾದಕರವಾಗಿದೆ. ನಿಜವಾಗಿಯೂ ನಾವು ಬಹಳ ವರ್ಷ ಇದನ್ನು ಯೋಚನೆ ಮಾಡಬೇಕಾಗಿದೆ. ಸೀಲಿಂಗ್ ಮತ್ತು ಇತರ ಸುಧಾರಣೆಗಳನ್ನು ನೋಡುವುದಾದರೆ, ಅಂಕಿ ಅಂಶಗಳನ್ನು ಪರಿಶೀಲಿಸುವುದಾದರೆ, ಮೈಸೂರು ದೇಶದಲ್ಲಿ ನಮ್ಮ ಆರ್ಥಿಕಮಟ್ಟ ಸ್ವಲ್ಪಮಟ್ಟಿಗೆ ಕುಗ್ಗಿದೆ ಎಂದು ಹೇಳುವುದಕ್ಕೆ ನಾನು ಹಿಂಜರಿಯುವುದಿಲ್ಲ. ಇದನ್ನು ಪ್ಲಾನಿಂಗ್ ಕಮಿಶನ್ನಿನವರೂ ಸಹ ನೋಡುತ್ತಾ ಇಲ್ಲ. ಇವತ್ತಿನದಿವಸ ಕಾಂಗ್ರೆಸ್ ಸರ್ಕಾರ ಬಂಡವಾಳ ಶಾಹಿಗಳಿಗೆ ಬೆಂಬಲ ನೀಡುತ್ತಿದೆ ಎಂದು ಸ್ವಲ್ಪವೂ ಸಂದೇಹವಿಲ್ಲದೆ ಹೇಳಬಹುದು. ನಮ್ಮ ಸುಧಾರಣೆಗಳನ್ನು ಹೊರಗಿನವರು ನೋಡುತ್ತಾ

ಇದ್ದಾರೆ. ಈ ಪ್ಲಾನಿಂಗ್ ಕಮೀಷನ್ನಿನವರು ಹಳ್ಳಿ ಗಾಡಿನ ರೈತರಮೇಲೆ ಸೀಲಿಂಗ್ ಇಡಿ ಎಂಬ ಒಂದು ಅಭಿಪ್ರಾಯವನ್ನು ರಾಜ್ಯ ಸರ್ಕಾರಗಳಿಗೆ ಕೊಡುವುದಕ್ಕೆ ಇದು ಸುಸಮಯವಲ್ಲ. ಆದರೂ ಕೂಡ ನಮಗೆ ಭೂಸುಧಾರಣೆ ಆಗಬೇಕಾಗಿದೆ. ಪ್ಲಾನಿಂಗ್ ಕಮೀಷನ್ನಿನವರು ಈ ಭೂಸುಧಾರಣೆ ಮಾಡುವಾಗ ಬಹುಶಃ ಒಂದು ವಿಷಯವನ್ನು ಮರೆತು ಬಿಟ್ಟಿದ್ದಾರೆ. ಜತ್ತಿ ಸಮಿತಿ ವರದಿಯಲ್ಲಿ ಈ ಮೂಲಭೂತ ಹಕ್ಕುಗಳಿಗೆ ಧಕ್ಕೆ ಬರತಕ್ಕಂಥ ನಿಯಮವನ್ನು ಬಿಟ್ಟಿದ್ದಾರೆ. ಹಿಂದೂಲಾ ತಿದ್ದುಪಡಿ ಮಾಡದಿದ್ದರೆ, ಈ ಜತ್ತಿ ಸಮಿತಿ ವರದಿಯನ್ನು ಈ ಸಭೆಯಲ್ಲಿರುವ 209 ಜನರು ಪಾಸ್ ಮಾಡಿದರೂ ಕೂಡ ಅದು ಜಾರಿಗೆ ಬರುವುದಿಲ್ಲ.

ಪ್ರತಿ ಹೆಣ್ಣುಮಕ್ಕಳಿಗೂ ಭಾಗ ಕೊಡಬೇಕು. ಈ ಹಕ್ಕುಭಾದ್ಯತೆಗಳು ಅವರಿಗೆ ಇರತಕ್ಕಂಥಾದ್ದು ಕಾನ್‌ಸ್ಟಿಟ್ಯೂಷನ್ ಪ್ರಕಾರ. ಅವರಿಗೆ ಸ್ಥಿರ ಭೂಸ್ವತ್ತನ್ನು ಹೊಂದಲು ಹಿಂದು ಲಾ ಪ್ರಕಾರ ಅವಕಾಶ ಇದೆ. ಆದ್ದರಿಂದ ಜತ್ತಿ ಸಮಿತಿ ವರದಿಯ ವ್ಯಾಪ್ತಿ ಅಷ್ಟಾಗಿ ಅವರ ಮೇಲೆ ಪರಿಗಣಿಸಲಾಗುವುದಿಲ್ಲ. ಅದೇ ರೀತಿಯಲ್ಲಿ ಮಹಮಡನ್ ಲಾ ಪ್ರಕಾರವೂ ಪ್ರತಿಯೊಬ್ಬ ಮಹಮದೀಯನಿಗೂ ಈ ದಿವಸ ಅವಕಾಶವಿದೆ ಜತ್ತಿ ಸಮಿತಿಯವರು ಪ್ಲಾನಿಂಗ್ ಕಮಿಷನ್ನಿನವರು ಹಿಂದೂ ಲಾ ಅಮೆಂಡ್‌ಮೆಂಟ್ ಮಾಡತಕ್ಕಂಥಾದ್ದನ್ನು ಸರ್ಕಾರದ ಮುಂದೆ ಇಟ್ಟು ಅನಂತರ ಈ ವಿಷಯ ಯೋಚನೆ ಮಾಡಬೇಕಾಗಿತ್ತು.

Sri B. D. JATTI (Jamkandi).—How does the Hindu Law or the Mohammedan Law affect the implementation of tenancy reform ?

ಶ್ರೀ ಎಚ್. ಜಿ. ನರಸಿಂಹೇಗೌಡ —ಹಿಂದೂ ಲಾ ಡಿಟೇಲ್ಸ್ ನೋಡಿದರೆ ಗೊತ್ತಾಗುತ್ತದೆ. ನಮಗೆ ಹಕ್ಕು ಇದೆಯೋ ಇಲ್ಲವೋ ಅನ್ನುವುದನ್ನು ಯೋಚನೆ ಮಾಡಬೇಕು. ಜತ್ತಿ ಸಮಿತಿ ವರದಿಯನ್ನು ಜಾರಿಗೆ ತರುವುದಾದರೆ, ಕುಟುಂಬಗಳನ್ನು ಭಾಗಗಳಾಗಿ ವಿಂಗಡಿಸಿದರೆ, ಹಿಂದೂ ಲಾ ಪ್ರಕಾರ ಐದು ಜನಕ್ಕೆ ಇರತಕ್ಕಂಥ ನಿಯಮ ಕುಗ್ಗಿಹೋಗುತ್ತದೆ.

2-30 P.M.

ಜಾರಿಯಲ್ಲಿ ಬರಲಿಕ್ಕೆ ಅವಕಾಶವಿಲ್ಲ. ಆದ್ದರಿಂದ ಈ ವಿಷಯವನ್ನು ನಮ್ಮ ಮುಂದೆ ಬಿಲ್ ಇಡುವಾಗ ಹಿಂದೂ ಲಾ, ಮಹಮ್ಮಡೀಯ ಲಾ ಯೋಚನೆ ಮಾಡಿ ಇಡಬೇಕಾಗಿದೆ. ಲ್ಯಾಂಡ್ ಸೀಲಿಂಗ್ ವಿಷಯದಲ್ಲಿ ....

Dr. R. NAGAN GOWDA (Hospet).—I would like to know whether the Hindu Law would prohibit the Head of the family from disposing of the property that belongs to the future generations.

ಶ್ರೀ ಎಚ್. ಜಿ. ನರಸಿಂಹೇಗೌಡ.—ಲ್ಯಾಂಡ್ ಸೀಲಿಂಗ್ ವಿಷಯದಲ್ಲಿ ಕಾಫೀ ಪ್ಲಾಂಟರ್ಸ್ ಮತ್ತು ಇನ್ನು ಕೆಲವು ಐಟಂಗಳಿಗೆ ರಿಯಾಯತಿ ಕೊಟ್ಟಿದ್ದಾರೆ. ಭೂಸುಧಾರಣೆ ಮಾಡುವಾಗ, ಭೂಮಿಯನ್ನು ಹಂಚುವಾಗ ನಿಜವಾಗಿಯೂ ಆಹಾರದ ಪರಿಸ್ಥಿತಿಯನ್ನು ನಾವು ಮೊದಲು ಗಮನಕ್ಕೆ ತರಬೇಕಾಗಿದೆ. ಭೂಸುಧಾರಣೆ ಆಗಬೇಕು. ಎಚ್. ಬಿ. ಗುಂಡಪ್ಪ ಗೌಡರೂಕೂಡ ಭೂಸುಧಾರಣೆ ವಿಷಯದಲ್ಲಿ ರಿಪೋರ್ಟ್ ಕೊಟ್ಟಿದ್ದಾರೆ. ಅದನ್ನು ಸರ್ಕಾರದವರು ನೋಡಬಹುದು ಅಥವಾ ಜತ್ತಿ ಅವರು ನೋಡಬಹುದು. ಭೂಸುಧಾರಣೆ ಯಾವರೀತಿ ಆಗಬೇಕು ಎಂಬುದನ್ನು ನಾವು ಮೊದಲು ಪರಿಗಣಿಸಬೇಕು. ಸೀಲಿಂಗ್ ವಿಷಯದಲ್ಲಿ, ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಅದನ್ನು ಬಹಳ ಸೂಕ್ಷ್ಮವಾಗಿ ಪರಿಗಣಿಸಬೇಕಾಗಿದೆ. ನಮ್ಮಲ್ಲಿ ಆರ್ಥಿಕ ದೃಷ್ಟಿ ಒಂದು ಕಡೆಇದೆ. ಆಹಾರದ ಕೊರತೆ ಒಂದು ಕಡೆ ಇದೆ. ಈಗ ಇರತಕ್ಕಂಥ ಭೂಸುಧಾರಣೆಯಲ್ಲಿ ಜಮೀನನ್ನು ಹಿಡುವಳಿದಾರನಿಗೆ ಹಂಚುವ ಸಂದರ್ಭದಲ್ಲಿ ನಾವು ಯೋಚನೆಮಾಡುವಾಗ ನಮಗೆ ಒಂದು ತೊಡಕು ಇದೆ. ಸ್ವಾಮಿ ಇಂದಿನ ದಿವಸ ಸರ್‌ಪ್ಲಸ್ ಜಮೀನು ಯಾರಿಗೆ ಇದೆಯೊ ಅಂತಹವರು ಆಹಾರವನ್ನು ಒದಗಿಸುತ್ತಾ ಇದ್ದಾರೆ. ನಮ್ಮ ಇಂಡಿಯಾ ಸರ್ಕಾರದ ಮತ್ತು ಮೈಸೂರು ಸರ್ಕಾರದ ಭೂಮಿ ಇಲ್ಲದ ಜನಗಳಿಗೆ ಆಹಾರವನ್ನು ಒದಗಿಸತಕ್ಕ ಜನರು ಯಾರು ಎಂದರೆ ಸರ್‌ಪ್ಲಸ್ ಇರತಕ್ಕ ಜಮೀನ್‌ದಾರರು.

ಒಬ್ಬ ಸದಸ್ಯರು.—ಅವರು ಎಷ್ಟುಜನ ಇದ್ದಾರೆ ?

ಶ್ರೀ ಎಚ್. ಜಿ. ನರಸಿಂಹೇಗೌಡ.—ಸುಮಾರು ಶೇಕಡ 50 ಇದ್ದಾರೆ. ಅಂತಹವರಿಂದ ನಾವು ಜಮೀನನ್ನು ವರ್ಗಾಯಿಸತಕ್ಕ ಸಂದರ್ಭದಲ್ಲಿ ಅವರಿಂದ ಬರತಕ್ಕ ಉತ್ಪನ್ನ ಎಷ್ಟು ಕಮ್ಮಿಯಾಗುತ್ತದೆ ಎಂಬುದನ್ನು ಜತ್ತಿವರದಿಯಲ್ಲಿ ತೋರಿಸಬೇಕಾಗಿತ್ತು. ಈ ರಿಪೋರ್ಟಿನ ಮೇಲೆ ಬಿಲ್ ಆಗುತ್ತದೆ, ಚರ್ಚೆಯಾಗುತ್ತದೆ, ಕಮಿಟಿಗೆ ಹೋಗುತ್ತದೆ ಪುನಃ, ನಮ್ಮ ಮುಂದೆ ಬರುತ್ತದೆ. ಈ ಸಂದರ್ಭದಲ್ಲಿ ನಮ್ಮ ಕಷ್ಟ ಸುಖಗಳನ್ನು ನಾವು ಸೂಕ್ಷ್ಮವಾಗಿ ತಿಳಿಸತಕ್ಕ ಭಾರ ನಮ್ಮ ಮೇಲೆ ಇದೆ. ನೀವು ಸರ್‌ಪ್ಲಸ್ ಜಮೀನ್ ದಾರರಿಂದ ಬರುತ್ತಾ ಇದ್ದ ಸರ್‌ಪ್ಲಸ್ ಫುಡ್‌ನ್ನು ಯಾವರೀತಿ ಸರಿತೂಗಿಸುತ್ತೀರಿ ಎಂಬುದನ್ನು ಈ ವರದಿಯಲ್ಲಿ ಅಳವಡಿಸಿಲ್ಲ. ಇವತ್ತಿನ ದಿವಸ ಸರ್‌ಪ್ಲಸ್ ಜಮೀನ್‌ದಾರರಿಂದ ತೆಗೆದುಕೊಂಡ ಜಮೀನನ್ನು ಹಂಚಿದ ಮೇಲೆ ಸರ್‌ಪ್ಲಸ್ ಫುಡ್ ಡಿಫಿಸಿಟ್ ಆಗಿಯೇ ತೀರುತ್ತದೆ. ಕೇರಳ ಈಗಾಗಲೇ ಮುಂದೆ ಹೋಗುತ್ತಿದೆ. ಆದರೂಕೂಡ ಆಹಾರದ ವಿಷಯದಲ್ಲಿ ಸರ್‌ಪ್ಲಸ್ ಬರತಕ್ಕ ವಿಷಯದಲ್ಲಿ ಹಿಂದುಳಿದಿದೆ. ಭೂಸುಧಾರಣೆ ಮಾಡಿದ್ದೀರಿ, ಭೂಸುಧರಣೆಮಾಡತಕ್ಕ ಸಂದರ್ಭದಲ್ಲಿ ಯಾವರೀತಿ ಮಾಡಬೇಕೆನ್ನುವುದನ್ನು ನೋಡಬೇಕಾಗಿದೆ. ಸರ್‌ಪ್ಲಸ್ ಬರುತ್ತಇದ್ದ ಆಹಾರವನ್ನು ಯಾವರೀತಿ ಸರಿತೂಗಿಸುತ್ತೇವೆ ಎಂದು ಹೇಳತಕ್ಕ ಮಾತನ್ನು ಜತ್ತಿ ಸಮಿತಿವರದಿಯಲ್ಲಿ ಹೇಳಿಲ್ಲ.

ಸೀಲಿಂಗ್ ಪ್ರಶ್ನೆಗೆ ಬರುತ್ತೇನೆ. ಈ ವಿಷಯದಲ್ಲಿ ಜತ್ತಿ ಸಮಿತಿಯಲ್ಲಿರತಕ್ಕವರು ಬಹುಶಃ ತೆಂಗು ಮತ್ತು ಅಡಿಕೆ ಬೆಳೆಯತಕ್ಕ ಜನರು ಅಲ್ಲವೆಂದು ಕಾಣುತ್ತದೆ. ನಾನು ಹೇಳುತ್ತೇನೆ ಈ ತೆಂಗು, ಅಡಿಕೆ, ಹುಣಿಸೆ ತೋಪು ಗೇರು ಬೀಜ ಮರಗಳು, ಮಾವಿನ ಮರಗಳು, ಯೂಕಲಿಪ್ಟಸ್ ತೋಪು, ಸುರಗಿ ತೋಪು ಮತ್ತು ಮೆಣಸು ಇದೆಲ್ಲಾ ದ್ರವ್ಯ ಸಂಬಂಧವಾದ ಆಸ್ತಿಗಳು. ಇವು ಆಹಾರವನ್ನು ಸರಿತೂಗಿಸತಕ್ಕ ಜಮೀನುಗಳಲ್ಲ. ನಾನು ತೆಂಗಿನಗಿಡ ಬೆಳೆಯುತಕ್ಕವನು. ಸರಿಯಾಗಿ ಒಂದು ತೆಂಗಿನ ಸಸಿಯನ್ನುಹಾಕಿ ಕಾಯಿ ಬಿಡುವಹಾಗೆ ಮಾಡಬೇಕಾದರೆ 12 ವರ್ಷದಿಂದ 20 ವರ್ಷಗಳ ಕಾಲ ಮಕ್ಕಳನ್ನು ಸಾಕಿದಹಾಗೆ. ಹೆಂಗಸರು ಮಕ್ಕಳು ಆದಿಯಾಗಿ ಕಷ್ಟಪಟ್ಟು ಸಾಕಿದರೆ 20 ವರ್ಷಕ್ಕೆ ಸರಿಯಾಗಿ ಫಸಲುಕೊಡುತ್ತದೆ. ಆದ್ದರಿಂದ ತೆಂಗಿನಮರಗಳ ಮೇಲೆ ಸೀಲಿಂಗ್ ಹಾಕಿದರೆ ಆಹಾರದ

(ಶ್ರೀ ಎನ್. ಜಿ. ನರಸಿಂಹೇಗೌಡ)

ಅಭಾವ ಯಾವರೀತಿ ಕಮ್ಮಿಯಾಗುತ್ತದೆ ಎಂದು ಹೇಳ ಲಿಕ್ಕೆ ಸಾಧ್ಯವಿಲ್ಲ. ನಿಜವಾಗಿಯೂ ತೆಂಗಿನ ಮರ, ಅಡಿಕೆ ಮರ ಈ ವಿಷಯದಲ್ಲಿ ಸ್ವಲ್ಪ ಯೋಚನೆಮಾಡ ಬೇಕು. ಅಡಿಕೆ ಮರದ ವಿಷಯ ಶಿವಮೊಗ್ಗ ಜಿಲ್ಲೆ ಯವರು ಹೇಳುತ್ತಾರೆ. ಅಡಿಕೆ ಸಸಿಗಳನ್ನು ಎಷ್ಟು ಕಷ್ಟದಿಂದ ಬೆಳಸಬೇಕು ಎಂಬುದು ಅವರಿಗೆ ಗೊತ್ತು. ತೆಂಗು, ಅಡಿಕೆ ಮರಗಳ ಮೇಲೆ ಸೀಲಿಂಗ್ ಹಾಕುವುದ ರಿಂದ ಆಗತಕ್ಕ ಅಡಚಣೆಏನಿದೆ ಅದು ಕಾಫೀತೋಟ ಕ್ಕಿಂತ ಹೆಚ್ಚು. ಅದು ತೀರಾಕಷ್ಟವಾದ ಸಮಸ್ಯೆ. ಅಡಿಕೆ ಮರ, ತೆಂಗಿನ ಮರ ಬೆಳೆಸತಕ್ಕ ರೈತನ ಮನೆಗೆ ಹೋಗಿ ಅವನ ಲೆಕ್ಕ ಪತ್ರನೋಡಿದ್ದರೆ, ಅವನ ಕಷ್ಟ ಏನು ಎಂಬುದನ್ನು ಜತ್ತಿ ಸಮಿತಿಯವರು ತಿಳಿದು ಕೊಂಡಿದ್ದರೆ, ನಿಜವಾಗಿಯೂ ಅಡಿಕೆ ಮರ, ತೆಂಗಿನ ಗಿಡಗಳಿಗೆ ಸೀಲಿಂಗ್ ಹಾಕುತ್ತ ಇರಲಿಲ್ಲ ಎಂದು ನಾನು ಈ ಸಭೆಯಲ್ಲಿ ಘಂಟಾಘೋಷವಾಗಿ ಹೇಳುತ್ತೇನೆ. ಮತ್ತು ಹುಣಸೇ ಮರದಲ್ಲಿ ಫಸಲು ಕೊಡುವುದಕ್ಕೆ ಎಷ್ಟು ದಿವಸ ಹಿಡಿಯುತ್ತದೆ ? ಮಾವಿನ ಮರದಿಂದ ಫಸಲು ಬರಬೇಕಾದರೆ 10-12 ವರ್ಷ ಹಿಡಿಯುತ್ತದೆ. ಅಲ್ಲಿಂದ ಯೂಕಲಿಪ್ಟಸ್ ಗಿಡ, ಇದು ಸೌದೆಗೆ ಬರುವುದು. ಅದನ್ನು ಈ ದಿವಸ ಹತ್ತಾರು, ನೂರಾರು ಎಕರೆಗಳಲ್ಲಿ ಹಾಕಿದ್ದರೂ ಸಹ ಸೌದೆಗೆ ಅಭಾವವುಂಟಾಗಿದೆ. 100 ಮೈಲಿಯಿಂದ ಬೆಂಗಳೂರಿಗೆ ಸೌದೆ ಬರುತ್ತದೆ. ಯೂಕ ಲಿಪ್ಟಸ್ ಗಿಡಗಳ ಮೇಲೆ ನೀವು ನಿಜವಾಗಿಯೂ ಸೀಲಿಂಗ್ ಹಾಕಿದ ಪಕ್ಷದಲ್ಲಿ ಪ್ರತಿಯೊಬ್ಬರೂ ಕೂಡ ಬರೀಪವರ್ ನಿಂದಲೇ ಅಡಿಗೆ ಮಾಡಿಕೊಳ್ಳ ಬೇಕಾಗ ತಕ್ಕ ಕಾಲ ಬರುತ್ತದೆ. ಕಾಡು ಬೆಳೆಸುತ್ತೇವೆ ಎಂದು ಅಗ್ರಿಕಲ್ಚರ್ ಮಿನಿಸ್ಟರ್‌ರವರು ತಮ್ಮ ಭಾಷಣಗಳಲ್ಲಿ ಹೇಳುತ್ತಾ ಅದಕ್ಕೆ ಬಡ್ಜೆಟ್‌ನಲ್ಲಿ ಹಣ ಒದಗಿಸಿದ್ದೇವೆ ಎಂದು ಹೇಳುತ್ತಿರುವಾಗ ಯೂಕಲಿಪ್ಟಸ್ ಮರಗಳು, ಸುರಗಿ ಮರಗಳ ಮೇಲೆ ಸೀಲಿಂಗ್ ಹಾಕಿದರೆ ಪರಿಸ್ಥಿತಿ ಏನಾಗುತ್ತದೆ? ಇವತ್ತಿನ ದಿವಸ ಸುರಗಿ ಗಿಡಗಳನ್ನು 20 ಎಕರೆಯಲ್ಲಿ ಹಾಕುತ್ತಾನೆ. 20 ವರ್ಷ ಆದಮೇಲೆ ಒಂದು ಗಿಡಕ್ಕೆ 30 ರೂಪಾಯಿ ತೆಗೆದು ಕೊಳ್ಳುತ್ತಾನೆ. ಹೀಗಿರುವಾಗ ಇದರ ಮೇಲೆ ಸೀಲಿಂಗ್ ಹಾಕಿದರೆ ಸೌದೆಗೆ ಮರ ಎಲ್ಲಿಂದ ಬರುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಯೂಕಲಿಪ್ಟಸ್ ಗಿಡಗಳು 400 ಅಡಿ ಎತ್ತರದವರೆಗೂ ಹೋಗುತ್ತದೆ. ಅದರಿಂದಲೇ ಮಲೆನಾಡು ಪ್ರದೇಶ ದಲ್ಲಿ ಹೆಚ್ಚು ಮಳೆ ಬರುವುದಕ್ಕೆ ಕಾರಣವಾಗಿದೆ ಎಂದು ಹೇಳುತ್ತೇನೆ. ಈ ಗಿಡದ ಮೇಲೆ ಸಿಲಿಂಗ್ ಹಾಕಿದ ಪಕ್ಷದಲ್ಲಿ ನಮ್ಮ ದೇಶ ನಿಜವಾಗಿಯೂ ಹಾಳಾಗುತ್ತದೆ. ಇನ್ನು 10 ವರ್ಷಗಳಲ್ಲಿ ಇದೇ ಸಭೆಯಲ್ಲಿ ನಾವು ಈ ರೀತಿ ಮಾಡಿದ್ದು ತಪ್ಪು ಇನ್ನೇನಾದರು ಒಂದು ವ್ಯವ ಸ್ಥೆಮಾಡಿ ಎಂದು ಹೇಳುವಂಥ ಪರಿಸ್ಥಿತಿ ಬರುತ್ತದೆ. ಆದ್ದರಿಂದ ದಯವಿಟ್ಟು ಈ ಸುರಗಿ ಮರಗಳು ಮತ್ತು ಯೂಕಲಿಪ್ಟಸ್ ಗಿಡಗಳ ಮೇಲೆ ಖಂಡಿತ ನೀವು ಸೀಲಿಂಗ್ ಹಾಕಬೇಡಿ.

ಹುಣಸೇ ತೋಪುಗಳು ಇವೆ. ಅದರಿಂದ ಫಸಲು ಬರಬೇಕಾದರೆ 20 ವರ್ಷಗಳಕಾಲ ಹಿಡಿಯುತ್ತದೆ. ಹುಣಸೇ, ಗೇರು ಬೀಜದಮರಗಳ ಮೇಲೆ ಸೀಲಿಂಗ್ ಹಾಕಿದರೆ ಏನು ಆಹಾರ ಉತ್ಪತ್ತಿ ಆಗುತ್ತದೆಯೋ ನನಗೆ ಅರ್ಥವಾಗುವುದಿಲ್ಲ. ತನ್ನ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳ ಬೇಕೆಂದು ರೈತ ಬಹಳ ಕಷ್ಟ ಪಟ್ಟು ಹುಣಸೇ ಮರ, ಸೀಗೆ ಮರಗಳನ್ನು ಬೆಳೆ ಸುತ್ತಾರೆ. ಇವುಗಳಿಗೂ ಕೂಡ ಸೀಲಿಂಗ್ ಹಾಕುವುದು ನ್ಯಾಯವಾದುದಲ್ಲ. ಮೆಣಸಿನ ಪ್ಲಾಂಟೇಷನ್ ಮೇಲೂ ಸೀಲಿಂಗ್ ಇರಬೇಕು ಎಂದು ಇದರಲ್ಲಿ ಅವಕಾಶವಾ ಡಿದೆ. ಇದನ್ನು ಸಹ ದಯವಿಟ್ಟು ತಪ್ಪಿಸಬೇಕು.

ಸ್ವಾಮೀ, ಮುಖ್ಯವಾಗಿ ಈ ರೀತಿ ಭೂಸುಧಾರಣೆ ಮಾಡುವುದಕ್ಕೆ ಹೊರಡುವ ಮುನ್ನ ಜಮೀನು ಸರ್ವೆ ಮಾಡಬೇಕು. ನಮ್ಮಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಜಮೀನು ಎಷ್ಟಿದೆ, ಎಷ್ಟು ಕುಳಗಳಿಗೆ ಜಮೀನನ್ನು ಹಂಚಬೇಕಾದ ಆವಶ್ಯಕತೆಯಿದೆಯೆಂಬದನ್ನು ಮೊದಲು ನಾವು ತಿಳಿದುಕೊಳ್ಳ ಬೇಕು. ಅದರಲ್ಲೂ ಪಟ್ಟಣವಾಸದಲ್ಲಿದ್ದುಕೊಂಡು ಹಳ್ಳಿಗಳಲ್ಲಿ ಜಮೀನಿಟ್ಟುಕೊಂಡಿರುವವರೆಷ್ಟು ಜನರಿದ್ದಾರೆ, ಜಮೀನ್ದಾರರುಗಳಲ್ಲಿ surplus ಆಹಾರವುಳ್ಳ ಜಮೀದ್ದಾರರುಗಳೆಷ್ಟು ಜನ, ಜಮೀನೇ ಇಲ್ಲದವರೆಷ್ಟು ಜನ—ಇದನ್ನೆಲ್ಲಾ ಗಣನೆಗೆ ತೆಗೆದುಕೊಂಡು ಪ್ರತಿಯೊಂದು ಡಿಸ್ಟ್ರಿಕ್ಟ್‌ನಲ್ಲೂ ಮಿನಿಮಂ ಹಿಡುವಳಿ ಎಷ್ಟಿರಬೇಕೆಂಬುದನ್ನು ನಿರ್ಧರಿಸಬೇಕು. ಜತ್ತಿ ಕಮಿಟಿಯವರು ತಮ್ಮ ವರದಿಯನ್ನು ಸಲ್ಲಿಸುವಾಗ್ಗೆ ಅದನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ಈಗ ನಮ್ಮ ಮುಂದೆ ಜಮೀನು ಸರ್ವೆಯ ವಿಚಾರವೇ ಇಲ್ಲ. ಜಮೀನಿಲ್ಲದವರೆಷ್ಟು ಮಂದಿ ಎಂಬುದಿಲ್ಲ. ಯಾರ್‍ಯಾರಿಗೆ ಎಷ್ಟು ಜಮೀನು ಕೊಡಬೇಕಾಗುತ್ತದೆಂಬುದಿಲ್ಲ. ಒಟ್ಟಿನಲ್ಲಿ ನಮಗಿಷ್ಟು ಜಮೀನು ಬೇಕಾಗಿದೆ ಎಂಬುದಿದ್ದರೆ ಅದನ್ನು ಹೇಗೆ ಒದಗಿಸಿಕೊಳ್ಳಬಹುದೆಂಬುದನ್ನು ನಾವು ನಿಜವಾಗಿಯೂ ಯೋಚನೆ ಮಾಡಬಹುದು. ಅಗ್ಗೆ ಬೇಕಾದರೆ ಹೆಚ್ಚಿಗೆ ಜಮೀನಿರುವವರಿಂದ ಕಿತ್ತುಕೊಂಡು ಅದನ್ನು ಹಂಚೋಣ. ಈಗ ನಮ್ಮಲ್ಲೇ ಬೇಕಾದಷ್ಟು ಜಮೀನಿದೆ. ಉತ್ತಮವಾದ ಜಮೀನೇ 54 ಲಕ್ಷ ಎಕರೆಯಷ್ಟಿದೆ. ಈಚಲು ವನಗಳು ಉತ್ಕೃಷ್ಟವಾದ ಜಮೀನುಗಳು ಇದೆ. ಈಚಲು ವನಗಳನ್ನು ಕೊಡುತ್ತೇವೆಂದು ಹೇಳಿದರೆ ಸಂತೋಷದಿಂದ ಜನರು ತೆಗೆದು ಕೊಳ್ಳುತ್ತಾರೆ. ಅದನ್ನು ಮೊದಲು ಹಂಚೋಣ. ಆಮೇಲೆ ಅಮೃತಮಹಲ್ ಕಾವಲುಗಳನ್ನು ಹಂಚೋಣ. ಇವನ್ನೆಲ್ಲಾ ಹಂಚಿದ ಮೇಲೆ surplus ಜಮೀನಿರುವವರಿಂದ ತೆಗೆದು ಬೇಕಾದರೆ ಹಂಚೋಣ. ಆದ್ದರಿಂದ ಮುಖ್ಯವಾಗಿ ನಾವು ಮೊದಲು ತಿಳಿಯಬೇಕಾಗಿರುವುದು, ಎಷ್ಟು ಜನರಿಗೆ ಜಮೀನು ಬೇಕು ಮತ್ತು ಒಟ್ಟು ಎಷ್ಟು ಜಮೀನು ಬೇಕು ಎಂಬುದನ್ನು ತಿಳಿದು ಕೊಳ್ಳೋಣ. ನಾನು ಈ ದಿವಸ ಬಹಳ ಸಂಕಟದಿಂದ ಹೇಳುತ್ತೇನೆ, ನಮ್ಮಲ್ಲಿಯೇ ಹೀಗೆ ಜಮೀನು ಬೇಕೆಂದು ಕೇಳುತ್ತಿರುವಾಗ ಬಂಗಾಳಿಗರನ್ನು ತಂದು ಪೆರಿಯಾಪಟ್ಟಣದಲ್ಲಿ 5000 ಎಕರೆಗಳನ್ನು ಕೊಟ್ಟಿದ್ದಾರಲ್ಲಾ! ನಮಗೇ, ಅಲ್ಲಿನ ಜಮೀನಿಲ್ಲದವರಿಗೆ ಆ ಜಮೀನನ್ನು ಕೊಡುವುದಕ್ಕಾಗುತ್ತಿರಲಿಲ್ಲವೇ? ಹೀಗೆಯೇ ನಮ್ಮ ಪ್ರದೇಶದಲ್ಲಿನ ಅನೇಕ ಪ್ರಾಜೆಕ್ಟ್‌ಗಳಲ್ಲಿಯೂ ಕೊಯಮತ್ತೂರು ಮುಂತಾದ ಭಾಗಗಳ ಜನರನ್ನು ತಂದು ಸೇರಿಸುತ್ತಿದ್ದೀರಿ. ಈ ವಿಚಾರದಲ್ಲಿ ಮೈಸೂರು ಸರ್ಕಾರ, ಕಾಂಗ್ರೆಸ್ ಸರ್ಕಾರ ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿಲ್ಲವೆಂದು ನಾನು ಹೇಳುತ್ತೇನೆ. ಈಹೊತ್ತಿನ ದಿವಸ ಬಂಗಾಳದಿಂದ ಬಂದ ಜನರಿಗೆ ಪೆರಿಯಾಪಟ್ಟಣದಲ್ಲಿ ಜಮೀನು ಕೊಟ್ಟಿದ್ದಲ್ಲದೆ ಅವರಿಗೆ ಎಲ್ಲಾ ತರದ ಸೌಲಭ್ಯಗಳನ್ನೂ ಕೊಟ್ಟು ಹೇಗೆ ಸಹಾಯ ಮಾಡುತ್ತಿದ್ದೀರೋ ಹಾಗೆ, ನಮ್ಮಲ್ಲಿ ಹಿಂದುಳಿದ ಜನಾಂಗದವರಿಗೇಕೆ ಜಮೀನು ಕೊಟ್ಟು ಸಹಾಯ ಮಾಡುತ್ತಿಲ್ಲ? ಸರ್ಕಾರವೇಕೆ ಈ ವಿಷಯದಲ್ಲಿ ಮುಂದೆ ಬಂದಿಲ್ಲ? ಬಡ್ಜೆಟ್ಟನ್ನು ನೋಡುವುದಾದರೆ ಎರಡುಕೋಟಿ ಚಿಲ್ಲರೆ ರೂಪಾಯಿಗಳನ್ನು

ರೈತರ ಪುರೋಭಿವೃದ್ಧಿಗೆಂದು ಇಟ್ಟಿದ್ದೀರಿ. ಆದರೆ ಇದರ ಪೈಕಿ ಎಷ್ಟು ನೀವು ಹಂಚಿದ್ದೀರಿ? ಇದನ್ನು ಏನೂ ಮಾಡದೆ ಸುಮ್ಮನೆ ಭೂ ಸುಧಾರಣೆ ಮಾಡುತ್ತೇವೆಂದು ಹೇಳುತ್ತೀರಿ! ಇಂಥಾದ್ದನ್ನು ಬಿಟ್ಟು ಹೆಚ್ಚಿಗೆ ಜಮೀನಿರುವವರಿಂದ ಕಿತ್ತು ಬಡವರಿಗೆ ಹಂಚುತ್ತೇವೆಂದರೆ ಇನ್ನೂ ಬೇರೆ ಬೇರೆ ಸಮಸ್ಯೆಗಳು ಉದ್ಭವಿಸುತ್ತವೆಂಬುದನ್ನು ಬಲ್ಲಿರಾ? ಇಣ್ಕಂ ಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್, luxury tax ಇವೆಲ್ಲವೂ ಈ ಭೂ ಸುಧಾರಣೆಯಿಂದ ಕಮ್ಮಿಯಾಗುವುದಿಲ್ಲವೇ? ಇದೊಂದನ್ನೂ ಯೋಚನೆ ಮಾಡದೆ ಈ ರೀತಿ ಮಾಡಿದರೆ ಮುಂದೆ ಇನ್ನೂ ಹತ್ತಾರು ವರ್ಷಗಳಲ್ಲಿ ಬಹಳ ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಆದ್ದರಿಂದ ಹೊರಗಿನವರನ್ನು ಕರೆಸಿ ಜಮೀನು ಕೊಡುವ ಬದಲು ನಮ್ಮಲ್ಲಿರುವ ಜಮೀನಿಲ್ಲದ ಬಡ ರೈತಾಪಿ ಜನರಿಗೆ ಕೊಡಬೇಕೆಂದು ನಾನು ಹೇಳುತ್ತೇನೆ.

ಆಮೇಲೆ ಜತ್ತಿ ಸಮಿತಿಯವರು, ಭೂಮಿಯನ್ನು ತೆಗೆದುಕೊಳ್ಳುವ ವಿಷಯದಲ್ಲಿ ಯಾವ ರೀತಿ ಪರಿಹಾರವನ್ನು ಒದಗಿಸಬೇಕೆಂಬುದನ್ನು ಸರಿಯಾಗಿ ಹೇಳಿಲ್ಲ. ಈ ವಿಷಯವನ್ನು ನಿರ್ಧರಿಸುವಾಗ ರೈತರ ಮಟ್ಟ ಹೇಗಿದೆಯೆಂಬುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ನಾವುಗಳೆಲ್ಲರೂ ಹಾಗೂ ಮಂತ್ರಿಮಂಡಳದಲ್ಲಿರುವವರೆಲ್ಲರೂ ಹಳ್ಳಿಗಾಡಿನಿಂದ ಬಂದ ರೈತರೇ ಆಗಿದ್ದೇವೆ. ಈ ಸಭೆಯಲ್ಲಿರುವ 180 ಜನ ಸದಸ್ಯರೂ ಕೂಡ ರೈತರ ಮಕ್ಕಳೇ ಎಂದು ಹೇಳಬೇಕು. ಆದರೂ ಈ ಸುಧಾರಣೆಯನ್ನು ಮಾಡುವಾಗ ರೈತನ ಕಷ್ಟವೇನೆಂಬುದನ್ನು ಪರಿಶೀಲಿಸಿ ನೋಡಿಲ್ಲವೆಂದು ನಾನು ಹೇಳಬೇಕಾಗಿದೆ. ಹಳ್ಳಿಯಲ್ಲಿ ಬೆಳೆದ ರೈತನ ಮಗ ವಿದ್ಯಾಭ್ಯಾಸ ಮಾಡಬೇಕಾದರೆ ಅವನು ಪಟ್ಟಣಕ್ಕೆ ಬಂದು ಎಷ್ಟು ಕಷ್ಟ ಪಡಬೇಕೆಂಬುದನ್ನು ಯೋಚನೆ ಮಾಡಿ. ರೈತನ ಮಕ್ಕಳಿಗೆ ಟೆಕ್ನಿಕಲ್ ವಿದ್ಯಾಭ್ಯಾಸ ಕೊಡಿಸುವುದಂತೂ ದುಸ್ತರ. ಈ ಜತ್ತಿ ಸಮಿತಿಯ ವರದಿಯಲ್ಲಿ ಸೂಚಿಸಿರುವಷ್ಟು ಪರಮಾವಧಿ ಆದಾಯ ಮಾತ್ರ ರೈತರಿಗೆ ಇರಬೇಕೆಂದರೆ, ಇನ್ನು ಮುಂದೆ ರೈತರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವ ಹಾಗಿಲ್ಲ; ಆರೋಗ್ಯವಂತರಾಗಿರುವ ಹಾಗಿಲ್ಲ, ರೇಡಿಯೋ, ಸಿನಿಮಾ ಮುಂತಾದ ಅನುಕೂಲಗಳನ್ನು ಕೇಳುವ ಹಾಗಿಲ್ಲ. ಚೆನ್ನಾಗಿ ಬದುಕಿ ಬಾಳಿದ ರೈತ ಇಂದು ಭಿಕಾರಿಯಾಗುವ ಸಮಯ ಬಂದಿದೆ. ನಿಜವಾಗಿ ನೀವು ಹಳ್ಳಿಗಾಡಿನ ರೈತನ ಪುರೋಭಿವೃದ್ಧಿಯನ್ನು ಬಯಸುವುದಾದರೆ, ಈ ಭೂ ಸುಧಾರಣೆಯನ್ನು ಮಾರ್ಪಡಿಸಬೇಕು. ಇದರಿಂದೇನೂ ಆಹಾರದ ಉತ್ಪನ್ನ ಜಾಸ್ತಿಯಾಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಅಮೇರಿಕಾ ದೇಶದಲ್ಲಿ ಸುಮಾರು 150 ವರ್ಷಗಳ ಹಿಂದೆ ಶೇಕಡ 80ರಷ್ಟು ರೈತಾಪಿ ಜನರಿದ್ದು ಆ ದೇಶಕ್ಕೆ ಆಹಾರವನ್ನು ಒದಗಿಸುತ್ತಿದ್ದ ಕಡೆ, ಅಮೇರಿಕದಲ್ಲಿ ಈಗ ಶೇಕಡ 14ರಷ್ಟು ಮಾತ್ರ ರೈತರಿದ್ದು 15 ಕೋಟಿಯಷ್ಟು ಪ್ರಜಾಸಂಖ್ಯೆಗೆ ಆಹಾರ ಒದಗಿಸುತ್ತಿದ್ದಾರೆ. ನವೀನ ರೀತಿಯಲ್ಲಿ ವ್ಯವಸಾಯ ಸಾಧನೆ ಮಾಡುವುದರಿಂದ ಈ ಶಕ್ತಿ ಅವರಿಗುಂಟಾಗಿದೆ. ಸೊಸೈಟಿಯ ಹಣ ಸಹಾಯ, ಜಮೀನು ಕೊಳ್ಳುವ ಬಗ್ಗೆ ಸಹಾಯ, ಯಂತ್ರ ಸಲಕರಣೆಗಳನ್ನು ಕೊಂಡುಕೊಳ್ಳುವುದಕ್ಕೆ ಬೇಕಾದ ಸಹಾಯ—ಎಲ್ಲಾ ಅಲ್ಲಿನ ಸರ್ಕಾರ ರೈತರಿಗೆ ಕೊಟ್ಟು ಪ್ರೋತ್ಸಾಹಿಸುತ್ತಿದೆ. ನಮ್ಮ ಇಂಡಿಯಾ ದೇಶದಲ್ಲಾದರೋ ಈಗ 150 ವರ್ಷಗಳ ಹಿಂದೆ ರೈತರು ಯಾವ ಸ್ಥಿತಿಯಲ್ಲಿದ್ದರೋ ಇಂದಿಗೂ ಅದೇ ಸ್ಥಿತಿಯಲ್ಲಿ ಅಥವಾ ಇನ್ನೂ ಕೀಳು ಸ್ಥಿತಿಯಲ್ಲಿದ್ದಾರೆ. ರೈತರ ಸಂಖ್ಯೆ ಅಂದು ಎಷ್ಟಿತ್ತೋ ಇಂದಿಗೂ ಅಷ್ಟೇ ಇದೆ. ವ್ಯವಸಾಯ ರೀತಿಯಲ್ಲಿ ಸುಧಾರಣೆ ಮಾಡಲು ಅವನಿಗೆ ರಹವಿಲ್ಲ. ಅಮೇರಿಕಾ ದೇಶದಲ್ಲಿ ಕೇವಲ ಶೇಕಡ 14 ಜನ ದೇಶಕ್ಕೆಲ್ಲಾ ಬೆಳೆದು ದವಸ ಒದಗಿಸುತ್ತಿರುವಾಗ ಮತ್ತು ಹೊರಗಡೆಗೂ ಆಹಾರ ಕಳುಹಿಸುತ್ತಿರುವಾಗ ನಮ್ಮ ದೇಶದಲ್ಲಿ ಶೇಕಡ 80ರಷ್ಟು ರೈತರಿದ್ದೂ ಏನಾಗಿದೆ? ಇಂಥ ರೈತರಿಗೆ ಬರುವ ಆದಾಯಕ್ಕೆ ಪರಮಾವಧಿ ಗೊತ್ತು ಮಾಡಿ ಅವರನ್ನು ಅಧಿಕಾರ ವರ್ಗದವರ ಕಿರುಕುಳಕ್ಕೆ ಬೇರೆ ಗುರಿ ಮಾಡುತ್ತಿದ್ದೀರಿ. ಮಳೆ ಬೆಳೆಗಳಲ್ಲಿ ಭಾಗ ಭಾಗಕ್ಕೂ ಉಬ್ಬರವಿಳಿತಗಳಿವೆ. ಹಿಮಾಲಯ ಪ್ರದೇಶದಲ್ಲಿ ಒಂದು ರೀತಿಯಿದ್ದರೆ ಬಯಲು ಸೀಮೆಯಲ್ಲಿ ಒಂದು ರೀತಿಯ ಮಳೆ ಇದೆ. ಮಲೆನಾಡಿನಲ್ಲಿ ಬೇರೆ ರೀತಿಯಿದೆ. ಹೀಗಿರುವಾಗ, ನಮ್ಮಲ್ಲಿ ವ್ಯವಸಾಯದ ಉತ್ಪನ್ನ ಹೇಗೆ ಜಾಸ್ತಿಯಾಗುತ್ತದೆಂಬುದನ್ನು ನೋಡಬೇಕು. ಈ ದೃಷ್ಟಿಯಿಂದ ಜಮೀನು ಸುಧಾರಣೆ ಮಾಡುವಾಗ, ಜಮೀನು ವರ್ಗಾವಣೆ ಮಾಡುವಾಗ, ರೈತಾಪಿ Tenantsಗೆ ಯಾವ ರೀತಿ ಸಹಾಯ ಮಾಡಬೇಕು, ಯಾವ ರೀತಿ ಮಾಡಿದರೆ ಅವರಿಗೆ ನಿಜವಾಗಿ ಸಹಾಯ ಮಾಡಿದಂತಾಗುತ್ತದೆಂಬುದನ್ನು ನೋಡಬೇಕು. ರೈತನು ಪಡುವ ಕಷ್ಟ ನಿರರ್ಥಕವಾಗದಂತೆ ಮಾಡಿದರೆ ಮಾತ್ರ ರೈತನಿಗೆ ನಿಜವಾದ ಸಹಾಯ ಮಾಡಿದಂತಾಗುತ್ತದೆ. ಇದಕ್ಕಾಗಿ Crop insurance ಮುಂತಾದ ವ್ಯವಸ್ಥೆಗಳು ಅತ್ಯವಶ್ಯಕ. ಇದೇನನ್ನೂ ಮಾಡದೆ ಕೇವಲ Maximum ಗೊತ್ತು ಮಾಡಿದರೆ ರೈತನನ್ನು ಅಧೋಗತಿಗೆ ಇಳಿಸುತ್ತೀರಿ ಅಷ್ಟೆ. ಇವತ್ತಿನ ದಿವಸ 3,000-4,000 ರೂಪಾಯಿ ಉತ್ಪತ್ತಿಯಾಗುತ್ತದೆಂದು ನೀವು ಭಾವಿಸುವ ಕಡೆ, ಮಳೆಯಿಲ್ಲದೆ ಹೋದರೆ 500 ರೂಪಾಯಿ ಕೂಡ ಆಗುವುದಿಲ್ಲ. ಅಂಥದಕ್ಕೇನು ಮಾಡುತ್ತೀರಿ? ಒಂದು ವೇಳೆ ಮಳೆ ಹೋದರೆ ಏನು ಮಾಡುವುದು? ಇಷ್ಟು ಎಕರೆ ಭೂಮಿ ಎಂದು ನಿಗದಿ ಮಾಡುವುದಾದರೆ ನಿಜವಾಗಿ ಭೂಮಿಯಲ್ಲಿ ಧಾನ್ಯ ಉತ್ಪತ್ತಿ ಮಾಡುವವರು ಯಾರು ಎಂಬುದನ್ನು ಆಲೋಚನೆ ಮಾಡಬೇಕು. ಈ ಕಾನೂನಿನಿಂದ ಒಂದು ವೇಳೆ ಪಟೇಲ ಶಾನುಭೋಗರಿಗೆ ಮತ್ತು ಕೆಲವು ಎಂ. ಎಲ್. ಎ.ಗಳಿಗೆ ಅನುಕೂಲವಾಗಬಹುದು. ರೈತರು ಪಟೇಲ ಶಾನುಭೋಗರಿಗೆ ಲಂಚಕೊಟ್ಟು ಏನಾದರೂ ಬರೆಸಬಹುದು. ಆದರೆ ಮಳೆ ಇಲ್ಲದೆಹೋದರೆ ಉತ್ಪತ್ತಿ ಕಡಿಮೆಯಾಗುತ್ತದೆ. ಆದ್ದರಿಂದ ನಿಗದಿ ಮಾಡುವಾಗ ಯಾವುದು ಸೂಕ್ತ ಎಂಬುದನ್ನು ಆಲೋಚನೆ ಮಾಡಬೇಕಾಗಿದೆ. ನಮ್ಮ ಜಮೀನು ಉತ್ಪತ್ತಿಯನ್ನು ದುಡ್ಡಿನ ಮೇಲೆ ನಿಗದಿ ಮಾಡುವುದು ಸೂಕ್ತವಲ್ಲ ಎಂದು ನನಗೆ ಅನಿಸುತ್ತದೆ. 1,200 ರೂಪಾಯಿ ಕನಿಷ್ಟ ಉತ್ಪನ್ನ ಇರತಕ್ಕದ್ದು ಐದು ಜನ ಇರುವ ಕುಟುಂಬಕ್ಕೆ 5,000 ರೂಪಾಯಿ ಇರಬೇಕು. ಒಂದೊಂದು ಕುಟುಂಬದಲ್ಲಿ ಹತ್ತಿಪ್ಪತ್ತು ಜನರು ಇರುತ್ತಾರೆ. ಇವತ್ತಿನ ದಿವಸ ಅವರಲ್ಲಿ ಭೂಮಿ ಹಂಚಿ ಹೋಗುತ್ತದೆ. ಇನ್ನು ಮುಂದೆ ಹತ್ತಿಪ್ಪತ್ತು ವರ್ಷಗಳಲ್ಲಿ ಅವರ ಮಕ್ಕಳು ಮರಿಗಳಲ್ಲಿ ಹಿಸ್ಸೆಯಾಗಿ ಹಂಚಿಹೋಗುವುದನ್ನು ಯೋಚನೆ ಮಾಡಬೇಕಾಗಿದೆ. ಇಂದು ಐದು ಜನ ಎಂದು ತಿಳಿದುಕೊಂಡು ಒಂದು ಕುಟುಂಬದ ಹಿಡುವಳಿ ನಿಗದಿ ಮಾಡಿದರೆ ಮುಂದೆ 20 ಜನ ಆಗುತ್ತಾರೆ. ಆದ್ದರಿಂದ ಒಂದು ಸಂಸಾರಕ್ಕೆ ಐದು ಜನ ಎಂದು ನಿಗದಿ ಮಾಡದೆ ಒಂದು ಸಂಸಾರಕ್ಕೆ ಐದು ಜನರಿಂದ 30 ಜನರವರೆಗೆ ಇರುವ ಹಾಗೆ ನಿಗದಿ ಮಾಡಬೇಕು, ಹೀಗೆ ಮಾಡುವಾಗ ಕನಿಷ್ಠ ಹಿಡುವಳಿ 2,400 ರೂಪಾಯಿ ಎಂದು ನಿರ್ದಿಷ್ಟ

(ಶ್ರೀ ಎನ್. ಜಿ. ನರಸಿಂಹೇಗೌಡ)

ಪಡಿಸಬೇಕು. ಒಂದು ಸಂಸಾರ ತನ್ನ ಖರ್ಚನ್ನು ಸರಿದೂಗಿಸುವ ಹಾಗೆ ಉತ್ಪತ್ತಿ ಇರಬೇಕು.

ಶ್ರೀ ಬಿ. ಡಿ. ಜತ್ತಿ.—Cost of cultivation ಯಾವ ರೀತಿಯಾಗಿರಬೇಕು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎನ್. ಜಿ. ನರಸಿಂಹೇಗೌಡ.—ಅದನ್ನೂ ಸಹ ಹೇಳುತ್ತೇನೆ. ಒಂದು ಸಂಸಾರಕ್ಕೆ ಕನಿಷ್ಠ ಹಿಡುವಳಿ ಈ ರೀತಿ ಇರಬೇಕು.

ಜನರಿಗೆ	ರೂಪಾಯಿ ಉತ್ಪತ್ತಿ ಯಾಗುವಷ್ಟು.
5	3,750
10	7,500
15	11,250
20	15,000
25	18,750
30	22,000

ಹೀಗೆ ಏತಕ್ಕೆ ಇರಬೇಕೆಂದರೆ ಮುಂದೆ ಅವರ ಮಕ್ಕಳು ಪಾಲು ಆದಾಗ್ಗೆ ಭೂಮಿ ಹಂಚಿದರೆ ಎಲ್ಲರಿಗೂ ಸಮನಾಗಿ ಇಟ್ಟುಕೊಳ್ಳಲು ಅನುಕೂಲವಾಗುತ್ತದೆ. ನಾನು ಸೂಚಿಸಿರುವ ಪ್ರಕಾರ ನಿಗದಿ ಮಾಡಬೇಕು. ಇನ್ನು ಜಮೀನು ನಿಗದಿ ಮಾಡುವಾಗ ಒಂದು ಸಂಸಾರಕ್ಕೆ 5 ಎಕರೆ ಭೂಮಿಗಿಂತ ಕಡಿಮೆ ಇರಕೂಡದು. ಇನ್ನು ಒಂದೊಂದು ಸಂಸಾರಕ್ಕೆ ತರಿ, ಬಾಗಾಯತು, ಖುಷ್ಕಿ ಜಮೀನು ಈರೀತಿಯಾಗಿರಬೇಕು.

ಜನಕ್ಕೆ	ಎಕರೆ	ತರಿ, ಬಾಗಾಯತು, ಖುಷ್ಕಿ	
5	10		
10	20	ಅಂದರೆ 5+5+10	
15	ತರಿ	ಬಾಗಾಯತು	ಖುಷ್ಕಿ
	7½	7½	15
20	10	10	30
25	15	15	50
30	20	20	60

ಶ್ರೀ ಜೆ. ಎಚ್. ಶಂಷುದ್ದೀನ್ (ಹೊನ್ನಾವರ್).—30 ಜನ ಇರುವ ಸಂಸಾರ ಎಂದು ಹೇಳಿದಿರಿ ಹಾಗಾದರೆ ಒಂದು ಸಂಸಾರದಲ್ಲಿ ಯಾರು ಯಾರು ಇರಬೇಕು ?

ಶ್ರೀ ಎನ್. ಜಿ. ನರಸಿಂಹೇಗೌಡ.—ಒಂದು ಸಂಸಾರದ ಅಥವಾ ಕುಟುಂಬದಲ್ಲಿ ಅಣ್ಣ ತಮ್ಮಂದಿರು ಮತ್ತು ಉಳಿದವರು ಎಲ್ಲರೂ ಸೇರಿಕೊಳ್ಳುತ್ತಾರೆ. ಇಷ್ಟು ಜಮೀನು ಇದ್ದರೆ ಹತ್ತು ವರ್ಷಗಳಲ್ಲಿ ಹಂಚಿಕೆಯಾಗಿ ಒಂದು ನಿಗದಿ ಮಾಡಿದ ಮಟ್ಟಕ್ಕೆ ಬರುತ್ತದೆ. ಇಲ್ಲದೆ ಹೋದರೆ ವ್ಯವಸಾಯದಲ್ಲಿ ಆರ್ಥಿಕ ಮಟ್ಟ ಕುಗ್ಗುತ್ತದೆ. ಹಾಗೂ ವ್ಯವಸಾಯ ಮಾಡಲು ಸಾಧ್ಯವಿಲ್ಲ. ಇನ್ನು ದನಗಳಿಗೆ ಮೇಯುವದಕ್ಕೆ ಕೆಲವೊಂದು 5 ಎಕರೆಯಿಂದ 25 ಎಕರೆ ಜಮೀನು ಬಿಡಬೇಕಾಗುತ್ತದೆ. ಆದಕಾರಣ ನಾನು ಸೂಚಿಸಿದಂತೆ ಮಾಡಿದರೆ ದೇಶದಲ್ಲಿ ರೈತರ ಆರ್ಥಿಕ ಮಟ್ಟ ಸರಿಯಾಗಿ ಆಗುತ್ತದೆ ಹಾಗೂ ರೈತರು ವ್ಯವಸಾಯ ಮಾಡಿ ಹಳ್ಳಿಗಳಲ್ಲಿ ಸುಖೀ ಜೀವನ ಮಾಡಲು ಅವಕಾಶವಾಗುತ್ತದೆ.

ಜತ್ತಿ ಸಮಿತಿ ವರದಿಯಲ್ಲಿ ಒಂದು ಮುಖ್ಯವಾದ ವಿಷಯವನ್ನು ಮರೆತಿದ್ದಾರೆ ಜಮೀನು ಆಧಾರದ ಮೇಲೆ ಅಡಮಾನ ಬ್ಯಾಂಕು ಸೊಸೈಟಿಗಳಲ್ಲಿ ಸಾಲ ದೊರೆಯುತ್ತದೆ. ಇದನ್ನು ಯಾವರೀತಿ ಪರಿವರ್ತನೆ ಮಾಡಬೇಕು ? ಅದಕ್ಕೆ ಏನು ಮಾಡಬೇಕು ಎಂಬ ಒಂದು ಮುಖ್ಯವಾದ ವಿಷಯಕ್ಕೆ ಸಲಹೆ ಮಾಡಿಲ್ಲ. ಇನ್ನು ಮುಂದೆಯಾದರೂ ಬಿಲ್ಲು ಸಭೆಯಮುಂದೆ ಬರುವಾಗ ಭೂಮಿಯಮೇಲೆ ಅಡಮಾನ ಬ್ಯಾಂಕದಲ್ಲಿ ಸಾಲ ಇದ್ದರೆ ಯಾವರೀತಿ ಪರಿಹಾರ ಕೊಡಿಸಬೇಕು ಮತ್ತು ಎಷ್ಟುವರ್ಷಗಳಲ್ಲಿ ರೀಪೇರಿ ಮಾಡಬೇಕು ಎಂಬ ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ರೈತರ ಆರ್ಥಿಕ ಮಟ್ಟ ತಗ್ಗುವಂತೆ ಸಹಾಯ ನೀಡಬೇಕು. ರೈತರ ಪುರೋಭಿವೃದ್ಧಿಯಾಗತಕ್ಕಂಥ ಒಂದು ಸ್ಕೀಮನ್ನು ಅಂಕಿ ಅಂಶಗಳಿಂದ ಸಹಿತವಾಗಿ ನಮ್ಮ ಮುಂದೆ ಇಡಬೇಕಾಗಿತ್ತು. ಅದರಿಂದ ನಮಗೆ ಸಮಾಧಾನವಾಗುತ್ತಿತ್ತು. ಇನ್ನು ಎರಡನೆಯದಾಗಿ ನಮ್ಮ ಇಂಡಿಯಾ ದೇಶದಲ್ಲಿ ಮಳೆ ಬೆಳೆಯ ಪರಿಸ್ಥಿತಿ ಎಲ್ಲಾ ಕಡೆಗೆ ಒಂದೇ ರೀತಿಯಾಗಿ ಇಲ್ಲದಿರುವುದರಿಂದ ಎಷ್ಟೋ ರೈತರು ಸಾಲಮಾಡಿ ವ್ಯವಸಾಯ ಮಾಡುತ್ತಾರೆ. ಇದನ್ನು ತಪ್ಪಿಸಬೇಕಾದರೆ ವ್ಯವಸಾಯದ ಮೇಲೆ ಕಡ್ಡಾಯವಾಗಿ ಇನ್‌ಷುರೆನ್ಸ್ ಆಕ್ಟು ತಂದು ಜಾರಿ ಮಾಡಿ ಆ ನಂತರ ಯಾವದೇ ಭೂಸುಧಾರಣೆ ತಂದರೆ ನಮಗೆ ಬಹಳ ಸಂತೋಷವಾಗುತ್ತದೆ. ಆದ್ದರಿಂದ ನಾನು ಮನವಿ ಮಾಡಿ ಕೊಳ್ಳುವದೇನೆಂದರೆ ಸರಕಾರದವರು ಕಡ್ಡಾಯವಾಗಿ ವ್ಯವಸಾಯದ ಮೇಲೆ ಇನ್‌ಷುರೆನ್ಸ್ ಸ್ಕೀಮು ಒಂದನ್ನು ಜಾರಿ ಮಾಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳಿ, ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅವರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

The House adjourned for Lunch at Three of the Clock and re-assembled at Thirty Minutes past Three of the Clock.

[MR. SPEAKER in the Chair]

ಶ್ರೀ ಎಸ್. ಸುಬ್ಬಯ್ಯನಾಯಕ್ (ಪುತ್ತೂರು).—ಸನ್ಮಾನ್ಯ ಅಧ್ಯಕ್ಷರೇ ಜತ್ತಿ ಸಮಿತಿ ವರದಿಯ ವಿಷಯ ಈಗಾಗಲೇ ಜನ ಜನಿತವಾಗಿದೆ. ಈ ಭೂಸುಧಾರಣಾ ವರದಿಯ ವಿಷಯದಲ್ಲಿ ನಾನೂ ಸಹ ಒಂದಿಷ್ಟು ಅರಿಕೆ ಮಾಡಬೇಕೆಂದಿದ್ದೇನೆ. ಈ ವರದಿಯು ಅಷ್ಟೇನೂ ಪರಿಪೂರ್ಣವಾಗಿಲ್ಲವೆಂದು ಕೆಲವರಿಗೆ ಅನ್ನಿಸಿದೆ. ಆದರೆ ಈ ವರದಿಯು ಸಂಪೂರ್ಣ ಪರಿಶ್ರಮದಿಂದ ತಯಾರಿಸಿದ್ದು ಎಂದು ನನ್ನೆಣಿಕೆ. ಇದನ್ನು ಚೆನ್ನಾಗಿ ಅಧ್ಯಯನಮಾಡಿ ಯಾವ್ಯಾವ ಭಾಗದಲ್ಲಿ ಏನೇನಿದೆ ಎಂಬುದನ್ನು ತಿಳಿದು ಅಭಿಪ್ರಾಯ ವ್ಯಕ್ತಪಡಿಸುವುದು ಉತ್ತಮ ಎಂದು ನಾನು ಹೇಳುತ್ತೇನೆ. ಏಕೆಂದರೆ ನಾನಾ ಸ್ಥಳಗಳಿಗೆ ಹೋಗಿ ಮಾಹಿತಿ ಪಡೆದು ಆಯಾ ಪ್ರದೇಶಗಳಲ್ಲಿರುವ ಕಾನೂನುಗಳ ಅನುಭವ ಪಡೆದು ಒಬ್ಬರಲ್ಲ, ಇಬ್ಬರಲ್ಲ, ಹನ್ನೊಂದು ಮಂದಿ ಆ ಸಮಿತಿಯಲ್ಲಿದ್ದು ಚೆನ್ನಾಗಿ ಪರಿಶೋಧಿಸಿ ಸೂಕ್ಷ್ಮವಾಗಿ ವಿಚಾರ ಮಾಡಿ ಈ ವರದಿಯನ್ನು ಸಲ್ಲಿಸಿದ್ದಾರೆ. ಆದಕಾರಣ ಇದರಲ್ಲಿ ಸಂಶಯವಿದೆಯೆಂದು ಹೇಳುವುದರಲ್ಲಿ ಹುರುಳಿಲ್ಲ, ಈ ವರದಿಯಲ್ಲಿ ಹುರುಳಿದೆ. ಇದು ಪರಿಪೂರ್ಣವಾಗಿದೆ, ಪರಿಶ್ರಮವುಳ್ಳದ್ದಾಗಿದೆ ಎಂದು ಹೇಳುವುದರಲ್ಲಿ ಅರ್ಥವಿದೆ. ಆದಕಾರಣ ಈ ವರದಿಯನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ.

(ಶ್ರೀ ಎಸ್. ಸುಬ್ಬಯ್ಯನಾಯಕ್)

ದೇಶದಲ್ಲಿ ಜೀವನ ಮಟ್ಟ ಹೆಚ್ಚಿದಂತೆಲ್ಲ ಪ್ರತಿಯೊಬ್ಬರ ವರಮಾನವೂ ಹೆಚ್ಚಾಗಬೇಕು.

ವರದಿಯಲ್ಲಿ ಮತ್ತೊಂದು ವಿಷಯವನ್ನು ಹೇಳಿದ್ದಾರೆ. ಅದು ಬಹುಶಃ ನಮ್ಮ ರೈತರಿಗೆ ಅಷ್ಟು ಒಳ್ಳೆಯದಲ್ಲವೆಂದು ನಾನು ಹೇಳುತ್ತೇನೆ. ಎಸ್. ಎಸ್. ಎಲ್. ಸಿ. ಪಾಸ್ ಮಾಡಿರುವ ಒಬ್ಬನ ವರಮಾನ ವರ್ಷಕ್ಕೆ ಸುಮಾರು 1,200 ರೂಪಾಯಿಗಳೆಂದು ಲೆಕ್ಕ ಹಾಕಿದ್ದಾರೆ. ನಮ್ಮ ದೇಶದಲ್ಲಿ ದುಡಿಯುವಂಥ ರೈತ ಈ ದೇಶದ ಬೆನ್ನು ಮೂಳೆ ಮತ್ತು ನಮ್ಮ ಸಮಾಜಕ್ಕೆ ಆಧಾರವಾಗಿರುವ ವ್ಯಕ್ತಿ. ಇಂಥವನನ್ನು ಎಸ್. ಎಸ್. ಎಲ್. ಸಿ. ಪಾಸ್ ಮಾಡಿ ಒಂದು ನೌಕರಿಯಲ್ಲಿರುವ ಒಬ್ಬ ವ್ಯಕ್ತಿಯ ಮಟ್ಟದೊಡನೆ ಅಳತೆ ಮಾಡಿ, ಅವನ ಸರಿಸಮಾನವಾಗಿ ಹೋಲಿಸುವುದು ಸರಿಯಾಗಲಾರದು. ಆದಕಾರಣ ಅದಕ್ಕಿಂತ ಉತ್ತಮ ಮಟ್ಟದೊಡನೆ ಹೋಲಿಸಿ ಸರಿ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ.

ನಮ್ಮ ಭಾರತದಲ್ಲಿ ನಮಗೆ ಸಿಕ್ಕತಕ್ಕ 1955 56ರ ಅಂಕೆ ಸಂಖ್ಯೆಗಳ ಲೆಕ್ಕದ ಪ್ರಕಾರ ಪ್ರತಿಯೊಬ್ಬನ ವರಮಾನ ಒಂದು ವರ್ಷಕ್ಕೆ 281 ರೂಪಾಯಿಗಳು. ಆದರೆ ಸರ್ವೆ ಸಾಧಾರಣವಾಗಿ, ನಮ್ಮ ಮೈಸೂರು ರಾಜ್ಯದಲ್ಲಿ ಒಬ್ಬ ಸಾಮಾನ್ಯ ರೈತನ ಕುಟುಂಬದ ವರಮಾನ ವರ್ಷಕ್ಕೆ ಸುಮಾರು 350 ರೂಪಾಯಿಗಳೆಂದು ಹೇಳುತ್ತೇನೆ. ಏಕೆಂದರೆ ಕುಟುಂಬದಲ್ಲಿ ಸುಮಾರು ಐದು ಜನರಿದ್ದರೆ, ಅದರಲ್ಲಿ ಒಬ್ಬ ಗಂಡು ದುಡಿಯುತ್ತಿರುತ್ತಾನೆ. ಅವನಿಗೆ ದಿನಕ್ಕೆ ಒಂದು ರೂಪಾಯಿ ನಗದು ಇಲ್ಲವೇ ದವಸದ ರೂಪದಲ್ಲಿ ಕೊಟ್ಟರೆ ನಾಲ್ಕು ಸೇರು ಭತ್ತ ಅಥವ ಎರಡು ಸೇರು ಅಕ್ಕಿ ಸಿಕ್ಕುತ್ತದೆ. ಅವನ ಸರಾಸರಿ ವರಮಾನ 360 ರೂಪಾಯಿ ಆಗಬಹುದು. ಇದರಲ್ಲಿ ಹೆಂಡತಿಮಕ್ಕಳ ಜೀವನವನ್ನು ಸಾಗಿಸಬೇಕಾಗಿದೆ. ಬೇಸಾಯ ಮಾಡುವವನಿಗೆ ಎಷ್ಟು ಉತ್ಪತ್ತಿ ಬರುತ್ತದೆಂದರೆ ಅದನ್ನು ಹೇಳಲಿಕ್ಕೆ ಬಹಳ ಕಷ್ಟ. ಭೂಮಿಯನ್ನು ರೈತನು ಗೇಣಿಗೆ ಅಥವ ಗುತ್ತಿಗೆಗೆ ಪಡೆದುಕೊಂಡು, ಬೇಸಾಯ ಮಾಡಿ. ಬಂದ ಬೆಳೆಯಲ್ಲಿ ಗೇಣಿ ಕೊಟ್ಟು ಮಳೆಗಾಲದ ಖರ್ಚಿಗೆ ತೆಗೆದು ನಂತರ ಅವನಿಗೆ ಉಳಿಯುವುದು ಏನೂ ಇಲ್ಲ. ಗುತ್ತಿಗೆಯನ್ನು ಕೊಡುವಾಗ ಒಂದಕ್ಕೆ ಇಮ್ಮಡಿಯಾಗಿ, ಮುಮ್ಮಡಿಯಾಗಿ ತೆತ್ತಮೇಲೆ ಉಳಿಯತಕ್ಕದು ಬರೀ ಹುಲ್ಲು ಮಾತ್ರ ಅದೂ ದನಕರುಗಳಿಗೆ ಆಗುತ್ತದೆ. ರೈತನಿಗೆ ಉಳಿಯುವುದು ಏನೂ ಇಲ್ಲ.

ಈಗತಾನೇ ಒಬ್ಬರು ಮಹನೀಯರು ಹೇಳಿದರು ಇಲ್ಲಿರುವ 209 ಮಂದಿಯೂ ರೈತರ ಮಕ್ಕಳಿದ್ದೇವೆ ಎಂದು. ಇದು ನನಗೆ ಬಹಳ ಆಶ್ಚರ್ಯವನ್ನುಂಟು ಮಾಡಿತು. ಭೂಮಿಯನ್ನು ಪಡೆಯಲಿಕ್ಕೆ ಒಂದು ಅವಕಾಶ ಬಂದಾಗ ನಾವೆಲ್ಲರೂ ರೈತರ ಮಕ್ಕಳಾಗುತ್ತೇವೆ. ನಿಜವಾಗಿ ಇಲ್ಲಿ ಎಷ್ಟೋ ಮಂದಿ ವಕೀಲರಿದ್ದಾರೆ, ವ್ಯಾಪಾರಸ್ಥರಿದ್ದಾರೆ, ಇನ್ನೂ ಹೆಚ್ಚು ಉತ್ಪತ್ತಿ ಇರುವಂಥ ಜನರಿದ್ದಾರೆ. ಆದರೆ ಇಂಥ ಒಂದು ಅವಕಾಶ ಬರುವಾಗ ಎಲ್ಲರೂ ರೈತರಾಗುತ್ತಾರೆ. ಅರ ಹೊಟ್ಟೆತಿಂದು. ಅರೆಬೆತ್ತಲೆಯಾಗಿರುವ, ತನ್ನ ಹೆಂಡತಿಮಕ್ಕಳಿಗೆ ಒಂದು ವಸ್ತ್ರವನ್ನು ತೆಗೆಯುವುದಕ್ಕೆ ಸಾಧ್ಯವಾಗದೆ ಇರುವ ಸ್ಥಿತಿಯಲ್ಲಿದ್ದುಕೊಂಡು ಹಗಲು ರಾತ್ರಿ ದುಡಿಯತಕ್ಕ ರೈತ ಜನರು ಎಷ್ಟೋ ಮಂದಿ ಇದ್ದಾರೆ. ಇಂಥವರಲ್ಲಿ ನಾವೆಲ್ಲ ರೈತರು ಎಂದು ಹೇಳುವಂಥ ಮಹಾನುಭಾವರು ಇಲ್ಲಿದ್ದಾರೆ. ನಾನು ಉದ್ದೇಶ ಪೂರ್ವಕವಾಗಿ ಯಾರೊಬ್ಬರನ್ನೂ ಕುರಿತು ಹೇಳುತ್ತಿಲ್ಲ. ರೈತರೆಂದು ಹೇಳುವ ಮಹನಿಯರು ಬಡವರ ಸಂಗಡ ಮತ್ತು ರೈತರ ಕೂಡೆ ಮಾತನಾಡಲಿಕ್ಕೆ ನಾಚಿಕೆಪಡುತ್ತಾರೆಂದು ಹೇಳುತ್ತೇನೆ. ಅವರನ್ನೆಲ್ಲ ಮಾತನಾಡಿಸುವುದು ತಮ್ಮ ಗೌರವಕ್ಕೆ ಕುಂದು ಎಂದು ತಿಳಿದುಕೊಳ್ಳುವವರೂ ಇದ್ದಾರೆ. ಆದರೆ ಭೂಮಿಯ ಸುಧಾರಣೆ ಬರುತ್ತದೆಂದರೆ ನಾವೂ ರೈತರೇ, ನಾವೂ ದುಡಿಯುವವರು ಎಂದು ಹೇಳಲಿಕ್ಕೆ ಷುರು ಮಾಡಿದ್ದಾರೆ. ಇವರು ಎಷ್ಟರಮಟ್ಟಿಗೆ ವಿಕಲ್ಪ ಅಥವ ಬದಲಾವಣೆ ಹೊಂದುತ್ತಿದ್ದಾರೆಂದು ತಿಳಿದುಕೊಳ್ಳಬೇಕು.

ಭೂ ಹಿಡುವಳಿಯ ಪರಮಾವಧಿಮಿತಿಯನ್ನು ನಿರ್ಣಯಿಸಬೇಕು ಎಂದು ಹೇಳಿದ್ದಾರೆ. ಇದರಲ್ಲಿ ಬಹಳ ಗೊಂದಲಕ್ಕೆ ಬಿದ್ದಿದ್ದಾರೆ. ಈ ವಿಚಾರವನ್ನು ಬಹಳ ದೀರ್ಘವಾಗಿ ಯೋಚಿಸಬೇಕಾಗಿದೆ. ಭೂಮಿಯ ಪರಮಾವಧಿಯನ್ನು ನಿರ್ಣಯಿಸಿ 30 ಎಕರೆ ಜಮೀನನ್ನು ಒಂದು ಕುಟುಂಬಕ್ಕೆ ಇಟ್ಟುಕೊಳ್ಳಬಹುದೆಂದು ನಿರ್ಧರಿಸಿದರೆ ರೈತನಿಗೆ ಒಬ್ಬನಿಗೂ ಜಮೀನು ಸಿಕ್ಕಲಿಕ್ಕಿಲ್ಲ. ಈ ವರದಿಯಲ್ಲಿರುವ ಅಂಕಿ ಸಂಖ್ಯೆಗಳ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಐದು ಎಕರೆಯಿಂದ 30 ಎಕರೆಯೊಳಗೆ ಸಿಕ್ಕುವ ಹಿಡುವಳಿದಾರರು ನೂರಕ್ಕೆ 92-93 ಜನರಿದ್ದಾರೆ. ಆದರೆ ಈ ಭೂಮಿಯು ಯಾರಲ್ಲಿದೆ ಎಂದರೆ ಎಲ್ಲ ಭೂಮಿಯೂ ಗೇಣೀದಾರರಲ್ಲಿವೆ. ಗೇಣೀದಾರ ಇವೊತ್ತು ಈ ಭೂಮಿಯಲ್ಲಿ ಬೇಸಾಯ ಮಾಡುತ್ತಿದ್ದಾನೆ. ಅದುದರಿಂದ ಒಂದು ಕುಟಂಬಕ್ಕೆ 30 ಎಕರೆಯವರೆಗೂ ಜಮೀನನ್ನು ಇಟ್ಟುಕೊಳ್ಳಬಹುದೆಂದರೆ ಈಗ ಬೇಸಾಯ ಮಾಡುತ್ತಿರುವವರಿಗೆ ಭೂಮಿ ಖಂಡಿತವಾಗಿಯೂ ಸಿಕ್ಕುವುದಿಲ್ಲ. ಹೀಗೆಂದೇ ನಮ್ಮ ಭಾರತ ಸರ್ಕಾರ ಈ ಯೋಜನೆಯನ್ನು ತಯಾರಿಸುವ ಆಯೋಜನಾಸಮಿತಿಗೆ ಭೂ ಹಿಡುವಳಿಗೆ ಪರಿಮಿತಿಯನ್ನು ಹಾಕಬೇಕೆಂದು ಹೇಳಿದ್ದಾರೆ. ಇಲ್ಲದಿದ್ದರೆ ಭೂಸಮಸ್ಯೆಯನ್ನು ಬಗೆ ಹರಿಸುವುದು ನಿಜವಾಗಿಯೂ ಕಷ್ಟವಾಗಬಹುದೆಂದು ಕಾಣುತ್ತದೆ. ಆದಕಾರಣ ಭೂಮಿಗೆ ಒಂದು ಸೀಲಿಂಗ್ ಹಾಕಬೇಕು, ಭೂಮಿಯ ಪರಮಾವಧಿಮಿತಿಯನ್ನು ಗೊತ್ತು ಮಾಡಬೇಕೆಂದು ಹೇಳುವುದು ಸ್ವೀಕರಿಸಲಿಕ್ಕೆ ಯೋಗ್ಯವಾದುದೆಂದು ಹೇಳುತ್ತೇನೆ ಇನ್ನು ಭೂಮಿ ಎಲ್ಲೆಲ್ಲಿ, ಯಾವ ಯಾವ ಕಡೆ ಎಷ್ಟೆಷ್ಟಿದೆ ಎಂಬ ಅಂಕಿ ಸಂಖ್ಯೆಗಳ ಲೆಕ್ಕವನ್ನು ಇದರಲ್ಲಿ ಕೊಟ್ಟಿದ್ದಾರೆ:—ವರದಿಯ 90ನೆ ಪುಟದಲ್ಲಿ ಹೀಗೆ ಹೇಳಿದ್ದಾರೆ.

ಅಸ್ಸಾಂ—50 ಎಕರೆಗಳು.

ಬೊಂಬಾಯಿ—12ರಿಂದ 48 ಎಕರೆಗಳು.

ಉತ್ತರ ಪ್ರದೇಶ—30 ಎಕರೆಗಳು.

ಪಶ್ಚಿಮ ಬಂಗಾಳ—25 ಎಕರೆಗಳು.

ಹೀಗೆ ಪ್ರತಿಯೊಬ್ಬರೂ ಒಂದೊಂದು ವಿಧವಾಗಿ ಹಾಕಿದ್ದಾರೆ. ಆಂಧ್ರ ಪ್ರಾಂತ ಮತ್ತು ತೆಲಂಗಾಣದಲ್ಲಿ ನಾಲ್ಕುವರೆ ಕುಟುಂಬ ಹಿಡುವಳಿ ಎಂದು ಹಾಕಿದ್ದಾರೆ. ಹೀಗೆ ನಾನಾರೀತಿಯಲ್ಲಿ ಪರಿಮಿತಿಯನ್ನು ನಿಶ್ಚಯಿಸಿದ್ದಾರೆ. ನಮ್ಮಲ್ಲಿ ಆ ಪರಿಮಿತಿಯನ್ನು ನಿಶ್ಚಯಿಸುವುದಕ್ಕೆ ಸ್ವಲ್ಪ ಕಷ್ಟವಾಗಬಹುದು. ಆದರೂ ಕೂಡ ಪರಿಹರಿಸುವುದಕ್ಕೆ ಸಾಧ್ಯವೆಂದು ತಿಳಿಯುತ್ತೇನೆ.

ನಮ್ಮ ಜಿಲ್ಲೆಯಲ್ಲಿ ನಿಜವಾಗಿಯೂ ಸರಾಸರಿ ಅಂಕಿಅಂಶಗಳ ಪ್ರಕಾರ, ಭೂಮಿಯ ಸಂಖ್ಯೆ ಬಹಳ ಕಡಿಮೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ

ಇನ್ನೂ ಸ್ವಲ್ಪ ವಿಚಾರಗಳನ್ನು ಹೆಚ್ಚಾಗಿ ಈ ವರದಿಯಲ್ಲಿ ಸೇರಿಸಿದ್ದರೆ ಒಳ್ಳೆಯದಾಗಿತ್ತು. ಆದರೆ ಅದಕ್ಕೆ ಸಮಿತಿಯವರಿಗೆ ಅವಕಾಶ ಒದಗಲಿಲ್ಲ. ಕೆಲವು ಲೆಕ್ಕಗಳು, ಅಂಕಿ ಸಂಖ್ಯೆಗಳು ಸಿಕ್ಕದೆ, ಮಾಹಿತಿ ಪಡೆಯುವುದಕ್ಕೆ ಅವಕಾಶವಾಗದೆ ಅಥವಾ ಬೇರೆ ಕೆಲವು ಕಾರಣಗಳಿಂದ ಕೆಲವು ವಿಚಾರಗಳನ್ನು ಅಸ್ಪಷ್ಟವಾದ ರೀತಿಯಲ್ಲಿ ಅವರು ಹೇಳಬೇಕಾಯಿತು. ಈ ವರದಿಯ ಒಂದು ಕಡೆಯಲ್ಲಿ ವಿಚಾರವನ್ನು ಅಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ಸ್ಪಷ್ಟವಾಗಿ ಹೇಳಿದ್ದರೆ ಚೆನ್ನಾಗಿತ್ತು. ಇದರಿಂದ ಯಾರ ಹಿತದೃಷ್ಟಿಯಿಂದ ಯಾರ ಅಭಿವೃದ್ಧಿಗೆ ವಾದಿ ಮಾಡಿದ್ದಾರೋ ಅವರಿಗೆ ಅಹಿತರಾಗದಿದ್ದರೆ ಸಾಕು. ಕನ್ನಡದಲ್ಲಿ ಇರುವ ಜತ್ತಿ ಸಮಿತಿಯ ವರದಿಯ 74ನೆಯ ಪುಟದಲ್ಲಿರುವ ಎರಡನೆಯ ಪ್ಯಾರಾದಲ್ಲಿ "ಪ್ರತಿಯೊಂದು ಸ್ಥಳೀಯ ಪ್ರದೇಶದ ಸಂಬಂಧದಲ್ಲಿ ಸೂಚಿತವಾಗಿರತಕ್ಕ ಸರಾಸರಿ ಉತ್ಪತ್ತಿಯು ಆ ಪ್ರದೇಶದಲ್ಲಿ ನಿಖರ ಮಾಡಲ್ಪಟ್ಟ ಅಂತಸ್ತಿನ ಮತ್ತು ದರ್ಜೆಯ ಎಲ್ಲ ಜಮೀನುಗಳಿಗೂ ಅನ್ವಯಿಸತಕ್ಕದ್ದು. ಬೆಳೆ ಕಟಾವಿನ ಪ್ರಯೋಗಗಳೇ ಆಣೆವಾರನ್ನು ನಿರ್ಧರಿಸಬೇಕಾದರೆ ಆಧಾರವಾಗಿರುವುದರಿಂದ ಅವುಗಳನ್ನು ನಡೆಸುವ ಪ್ರಾಧಿಕಾರಿಯೂ ಅಂಥ ಪ್ರಯೋಗಗಳನ್ನು ನಡೆಸುವ ಕಾಲದಲ್ಲಿ, ಗೇಣೀದಾರನ ಪರವಾಗಿಯೂ ಮತ್ತು ಜಮೀನುದಾರರ ಪರವಾಗಿಯೂ ಒಬ್ಬೊಬ್ಬ ಪ್ರತಿನಿಧಿಯನ್ನಾದರೂ ಬರಮಾಡಿಕೊಂಡು ಆ ಸ್ಥಳದಲ್ಲಿ ಅವರು ಹಾಜರಾಗಿರುವಂತೆ ಮಾಡಬೇಕೆಂದು ಅ ಪ್ರಾಧಿಕಾರಿಗೆ ಕಡ್ಡಾಯವಾದ ತಿಳಿವಳಿಕೆಗಳನ್ನು ಕೊಡಬೇಕಾದುದು ಅಪೇಕ್ಷಣೀಯವಾಗಿದೆ." ಎಂದು ಹೇಳಿದ್ದಾರೆ. ನಮ್ಮ ದಕ್ಷಿಣ ಕನ್ನಡದಲ್ಲಿ ಪ್ರತಿವರ್ಷ ಬತ್ತದ ಎರಡು ಬೆಳೆಯಾಗುತ್ತದೆ. ಪ್ರತಿ ಬೆಳೆಯಾದಮೇಲೂ ಅಳತೆ ಮಾಡಬೇಕಾದರೆ ಮೂರನೆಯ ಮನುಷ್ಯನಾದ ಅಧಿಕಾರಿಯಿರಬೇಕು. ಸಮಿತಿ ಸೂಚಿಸಿರುವಂತೆ ಮೂರು ಜನ ಕೂಡಿ ಲೆಕ್ಕ ಮಾಡುವುದು ಕಷ್ಟ, ನಮ್ಮ ಕಡೆ ಕಾರ್ತೀಕದ ಬೆಳೆ ಹೆಚ್ಚು ವಿಸ್ತೀರ್ಣದಲ್ಲಿ ಬರುವುದು. ಆಗ ಮಳೆ ಮತ್ತು ಬಿಸಿಲು ಬಂದಾದನಂತರ ಇನ್ನೊಂದು ಬರುತ್ತಿರುತ್ತವೆ. ಇದರಿಂದ ಕೆಲವುಕಡೆ 8-10 ದಿನಗಳಾದರೂ ಬತ್ತ ಅಳೆಯುವುದಕ್ಕಾಗುವುದಿಲ್ಲ. ಅಂಥ ಸಂದರ್ಭಗಳಲ್ಲಿ ಎಕ್ರೆಗೆ ಇಂತಿಷ್ಟು ಎಂದು ಒಂದು ನಿಶ್ಚಯ ಮಾಡುವುದು, ನಿಯಮ ವಿಡುವುದು ಒಳ್ಳೆಯದು. ಇಲ್ಲದಿದ್ದರೆ ಜನ ಕಷ್ಟಕ್ಕೀಡಾಗುತ್ತಾರೆ. ಆದಕಾರಣ ಇಂತಿಷ್ಟು ಎಕರೆ ಸ್ಥಳಕ್ಕೆ ಇಷ್ಟು ಗೇಣಿ ಎಂದು ಗೊತ್ತುಮಾಡಿದರೆ ಒಳ್ಳೆಯದೆಂದು ಸೂಚನೆ ಮಾಡುತ್ತೇನೆ.

[MR. DEPUTY SPEAKER in the Chair]

ಈ ವರದಿಯಲ್ಲಿ ಒಳ್ಳೆ ಒಳ್ಳೆಯ ಅಂಶಗಳನ್ನು ಹೇಳಿದ್ದಾರೆ. 150 ವರ್ಷಗಳಿಂದ ನಾವು ಬ್ರಿಟಿಷರ ಅಥವ ಪರರ ಆಡಳಿತದಲ್ಲಿ ಸಿಕ್ಕಿದಾಗಿನಿಂದ ನಮ್ಮ ರೈತರು ಬಹಳ ವಂಚನೆಗೊಳಗಾಗಿದ್ದಾರೆ, ಅನ್ಯಾಯ ಅನೀತಿ ಅಧರ್ಮಕ್ಕೆ ಸಿಕ್ಕಿದ್ದಾರೆ ಎಂದು ಅಂದಿನಿಂದ ಇಂದಿನವರೆಗೂ ನಮ್ಮ ಕಾಂಗ್ರೆಸ್ ಪಕ್ಷ ಹೇಳುತ್ತ ಬಂದಿದೆ. ರೈತರ ಉದ್ಧಾರವೇ ಹಿಂದೂಸ್ತಾನದ ಉದ್ಧಾರ, ಭಾರತದ ಉದ್ಧಾರವೆಂದರೆ ರೈತರ ಉದ್ಧಾರ ಎಂದು ಹೇಳಿಕೊಂಡು ಬಂದಿದ್ದಾರೆ. ಭಾರತದಲ್ಲಿ ಸೇಕಡ 70 ಅಂಶ ರೈತರಿದ್ದಾರೆ. ಇಂಥ ದೇಶದ ಉದ್ಧಾರವಾಗಬೇಕಾದರೆ ರೈತರ ಉದ್ಧಾರವಾಗಬೇಕು ಎಂದು ಹೇಳುತ್ತೇನೆ. ಇದು ನಮ್ಮ ಕಾಲದಲ್ಲಿಯೇ ಆದರೆ ನಿಜವಾಗಿಯೂ ಈ ಸರ್ಕಾರ ಬಂದುದಕ್ಕೆ ಆಸಾರ್ಥಕತೆಯನ್ನು ಪಡೆದಂತಾಯಿತು, ನಮಗೆ ಸ್ವಾತಂತ್ರ್ಯ ಸಿಕ್ಕಿದುದಕ್ಕೆ ಸಾರ್ಥಕವಾಯಿತು ಎಂದು ಹೇಳಬಲ್ಲೆ.

ಗೇಣಿದಾರರಿಗೆ ಶಂಕೆಯುಂಟಾಗುವಂಥ ಒಂದು ಅಂಶವನ್ನು ಈ ವರದಿಯಲ್ಲಿ ಹೇಳಿದ್ದಾರೆ. ವರದಿಯ 75ನೆ ಪುಟದಲ್ಲಿ "........ವಶಪಡಿಸಿಕೊಳ್ಳಲಾಗದಿರುವ ಪ್ರದೇಶದ ಸಂಬಂಧದಲ್ಲಿ, ಅದು ಹದ್ದುಬಸ್ತಿಗೊಳಿಸಲ್ಪಟ್ಟ ಕೂಡಲೇ ಗೇಣೀದಾರ ಜಮೀನುದಾರ ಸಂಬಂಧವು ಕೊನೆಗಾಣಬೇಕೆಂಬುದು ನಮ್ಮ ಅಭಿಪ್ರಾಯ. ಇದನ್ನು ಈ ಕೆಳಗೆ ಕಾಣಿಸಲಾದ ಯಾವುದಾದರೊಂದು ಮಾರ್ಗದಲ್ಲಿ ಸಾಧಿಸಬಹುದು. ಅವು ಯಾವುವೆಂದರೆ:—

(1) ಸರ್ಕಾರದವರು ಗೇಣಿದಾರನಿಂದ ಗೇಣಿಯನ್ನು ವಸೂಲು ಮಾಡಿಕೊಂಡು ಅದನ್ನು ಜಮೀನುದಾರನಿಗೆ ಪಾವತಿ ಮಾಡಬಹುದು ;

(2) ಭೂಮಾಲೀಕನಿಗೆ ಪರಿಹಾರ ದ್ರವ್ಯವನ್ನು ಪಾವತಿ ಮಾಡಿ ಸರ್ಕಾರದವರು ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು, ಹಾಗೂ ಗೇಣಿದಾರನಿಂದ ನ್ಯಾಯವಾದ ಗೇಣಿಯ ವಸೂಲಾತಿಯನ್ನು ಮುಂದುವರೆಸಬಹುದು, ಅಥವಾ

(3) ಗೇಣಿದಾರನೇ ಭೂಮಿಯ ಒಡೆಯನಾಗಬಹುದು.

ಇತರ ಯಾವುದೇ ಸಂದರ್ಭಗಳಂತೆ ಭೂಮಾಲೀಕನು, ಒಡೆತನದ ಭಾವನೆಯನ್ನೇ ಮನಸ್ಸಿನಲ್ಲಿಟ್ಟುಕೊಂಡು ಮುಂದುವರೆಯುತ್ತಾನಾದುದರಿಂದ ಮತ್ತು ಭೂಮಿಯನ್ನು ಪುನಃ ಹಂಚಿಕೆ ಮಾಡುವುದಕ್ಕೆ ಸೂಚಿಸಲಾದ ನಮ್ಮ ಅಭಿಪ್ರಾಯಗಳಿಗೆ ಇದು ವ್ಯತಿರೇಕವಾಗುವುದರಿಂದ ಮೊದಲನೆಯ ಪಕ್ಷಾಂತರವನ್ನು ಸ್ವೀಕರಿಸಲಾಗುವುದಿಲ್ಲ."

ಹೀಗೆ ಹೇಳಿದ್ದಾರೆ. ಮೂರನೆಯ ಪಕ್ಷ "ಗೇಣಿದಾರನೇ ಭೂಮಿಯ ಒಡೆಯನಾಗಬಹುದು" ಎಂಬುದು ಹೆಚ್ಚು ಯೋಗ್ಯವಾದುದು ಎಂದು ಹೇಳುತ್ತೇನೆ. ಇದರಲ್ಲಿ ಅಸ್ಪಷ್ಟತೆಯನ್ನು ಸೂಚಿಸಿದರೆ ಬಹಳ ಗೊಂದಲಕ್ಕೆ ಈಡಾಗಬಹುದು.

ಇದರಲ್ಲಿ ಬಹಳ ಚರ್ಚೆಗೆ ಒಳಗಾದಂಥ ವಿಚಾರವೆಂದರೆ ಕುಟುಂಬ ಹಿಡುವಳಿ ಮತ್ತು ಮೂಲಹಿಡುವಳಿ. ಇವು ಬಹಳ ಕಡಮೆಯಾಯಿತು ಎಂದು ಹೇಳುವವರೂ ಇದ್ದಾರೆ. ಆದರೆ ಇವು ಇಂತಿಷ್ಟೇ ಇರಬೇಕು ಎಂದು ಯಾವ ಆಧಾರದ ಮೇಲೆ ಹೇಳಲು ಸಾಧ್ಯ? ಕಡಮೆ ಹೆಚ್ಚು ಎನ್ನುವದನ್ನು ಯಾವ ಅಳತೆ ಕೋಲಿನಿಂದ ಇವರುಗಳು ಅಳತೆ ಮಾಡಿದ್ದಾರೆ ಎಂದು ನಾನು ತಿಳಿದುಕೊಳ್ಳಲಾರೆ. ನಾನು ಅಳತೆ ಮಾಡುವ ದೃಷ್ಟಿ. ಈ ಈ ದೇಶದಲ್ಲಿ ಹೆಚ್ಚು ಜನ ಇರುವ ರೈತರ ಮತ್ತು ವಿಶೇಷ ಕಡಮೆ ವರಮಾನದವರ ಮಟ್ಟದಿಂದ, ಅವರ ದೃಷ್ಟಿ ಕೋಣದಿಂದ ನೋಡಿದರೆ ಒಂದು ಕುಟುಂಬ ಹಿಡುವಳಿಗೆ 1,200 ರೂಪಾಯಿ ಖಂಡಿತ ಸಾಕು. ಆದರೆ ಹೆಚ್ಚು ವರಮಾನ ಉಳ್ಳವರ ದೃಷ್ಟಿಯಿಂದ ಹೇಳುವುದಾದರೆ ಇದು ಬಹಳ ಕಡಮೆಯಾಗಬಹುದು. ಆದಕಾರಣ ಅವರು ಉಪಯೋಗಿಸಿದ ಅಳತೆ ಮಾನದ ಕೋಲು ಯಾವುದೆಂದು ನಾವು ತಿಳಿಯದೆ ಈ ಹಿಡುವಳಿಗಳ ಪ್ರಮಾಣ ಕಡಮೆಯಾಯಿತು, ಹೆಚ್ಚಾಯಿತು ಎಂದು ಹೇಳಲಿಕ್ಕೆ ಆಗುವುದಿಲ್ಲ. ಐದು ಜನರ ಒಂದು ಕುಟುಂಬಕ್ಕೆ 1,200 ರೂಪಾಯಿಗಳ ಹಿಡುವಳಿ ಇರಬೇಕು ಎಂದರೆ ಇದು ಬಹಳ ಹೆಚ್ಚಾಯಿತು, ಇದನ್ನು ಕಡಮೆ ಮಾಡಬೇಕು ಎಂದು ನಾವೇ ಹೇಳಬಹುದು.

20,73,000 ಎಕರೆ ಭೂಮಿ ಇದೆ. ಇದರಲ್ಲಿ ಕೃಷಿ-ಯೋಗ್ಯವಾದ ಭೂಮಿ 4,27,000 ಎಕರೆ. ಹೀಗಿರುವಾಗ, ಸಾಧಾರಣವಾಗಿ ಒಬ್ಬ ಮನುಷ್ಯನಿಗೆ ಸರಾಸರಿ 20-25 ಸೆಂಟ್ಸ್ ಭೂಮಿ ಬರಬಹುದು. ಆದರೆ ಎಲ್ಲರೂ ಭೂಮಿಯನ್ನು ಹೊಂದಿ ಕೊಂಡಿಲ್ಲ. ಆದ್ದರಿಂದ ಸರ್ವೆ-ಸಾಧಾರಣವಾಗಿ ಒಬ್ಬನಿಗೆ ಒಂದು ಎಕರೆ ಬರಬಹುದು ಎಂದು ಹೇಳಬಹುದೋ ಏನೋ. ಈಗ ಕೆಲವರು ಹಿಡುವಳಿಯ ಪರಮಾವಧಿ ಎಷ್ಟಿರಬೇಕೆಂದು ಹೇಳುವಾಗ, ಸ್ಥಳದ ಪರಿಸ್ಥಿತಿಗೆ ಅನುಸರಿಸಿ ವರಮಾನ ಇರಬೇಕೆಂದು ಹೇಳಿದ್ದು ಸರಿ. ಹೈದರಾಬಾದ್ ಪ್ರದೇಶದಲ್ಲಿ ಹತ್ತು ಎಕರೆಗೆ ಬರುವ ಉತ್ಪತ್ತಿ ನಮ್ಮಲ್ಲಿ ಅಡಿಕೆ ಕೃಷಿಗೆ ಒಂದು ಎಕರೆಗೆ ಬರಬಹುದು. ನಮ್ಮಲ್ಲಿ ಒಂದು ಎಕರೆ ಅಡಿಕೆ ತೋಟದಿಂದ ಖರ್ಚು ಕಳೆದು ಸುಮಾರು 1,200 ರೂಪಾಯಿ ಬರಬಹುದು. ನಮ್ಮ ಜಿಲ್ಲೆಯ ಲೆಕ್ಕದಲ್ಲಿ, ಒಂದು ಎಕರೆಗೆ ಮೂರು ಖಂಡಿ ಅಡಿಕೆ ಉತ್ಪತ್ತಿಯಾಗಬಹುದು. ಒಂದು ಖಂಡಿಗೆ 1,000 ರೂಪಾಯಿಯಂತೆ, ಒಂದು ಎಕರೆಯಿಂದ ಮೂರು ಸಾವಿರ ರೂಪಾಯಿ ಆದಾಯ ಬರಬಹುದು. ಅದರಲ್ಲಿ 1,200 ರೂಪಾಯಿ ಉಳಿತಾಯ ಬರಬಹುದು. ಭತ್ತದ ಗದ್ದೆಯಲ್ಲಿ ಸುಮಾರು 200-300 ರೂಪಾಯಿ ಬರಬಹುದು; ಕಮ್ಮಿ ಅಂದರೆ ನೂರು ರೂಪಾಯಿ ಆದಾಯ ಬರಬಹುದು. ಹೈದರಾಬಾದಿನಲ್ಲಿ ಜಮೀನಿನಿಂದ ಉತ್ಪತ್ತಿ ಬಹಳ ಕಡಿಮೆ ಇದೆ. ಜಮೀನು ಪರಮಾವಧಿ ಎಷ್ಟು ಹಾಕಬಹುದು ಎಂದರೆ, ಅಡಿಕೆ ತೋಟಕ್ಕೆ ಐದು ಎಕರೆ ಸಾಕು. ಒಬ್ಬ ರೈತ 10-20 ಎಕರೆ ಗದ್ದೆ ಮಾಡಿದರೆ, ಅದರಿಂದ ಬರುವ ಉತ್ಪತ್ತಿಯಿಂದ ಒಂದು ಕುಟುಂಬ ಸುಖಜೀವನ ನಡೆಸುವುದಕ್ಕೆ ಸಾಧ್ಯವಾಗಬಹುದು. ಧಣಿಯೂ ಕೂಡ ರೈತನಿಗೆ ಪ್ರಥಮ ಪ್ರಾಶಸ್ತ್ಯ ಕೊಡಬೇಕು. ಭೂಮಾಲಿಕರಲ್ಲಿ ಸ್ವಂತ ಬೇಸಾಯಗಾರರು ಕಡಿಮೆ. ಬೇಸಾಯಗಾರರಲ್ಲಿ ರೈತರೇ, ಶೇಕಡ 92-93 ಅಂಶ ಇದ್ದಾರೆ. ಆದ್ದರಿಂದ ಮೊದಲನೆ ಪ್ರಾಶಸ್ತ್ಯ ಯಾವನು ಬೇಸಾಯ ಮಾಡುತ್ತಿರುತ್ತಾನೋ ಅವನಿಗಿದ್ದು ಅವನಿಗೇ ಭೂಮಿ ಕೊಡಲ್ಪಡಬೇಕು. ಇಲ್ಲಿ ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ಶೇಕಡ 66 ಅಂಶ ಭೂಮಿ ಗೇಣಿದಾರರಲಿದೆ. ಆದಕಾರಣ ವರ್ಗದಾರರ ಸ್ವತ್ತನ್ನು ಬಿಡಿಸಲಿಕ್ಕೆ ಹೋದರೆ, ಒಕ್ಕಲಿಗೆ ಏನೂ ಸಿಗದೆ ಹೋಗಬಹುದು. ಪೈರು ವೃದ್ಧಿಯಾಗುವುದಕ್ಕೆ ಹೇಗೆ ಮಳೆಯನ್ನು ನಿರೀಕ್ಷಿಸಲಾಗುವುದೋ ಹಾಗೆಯೇ ಈ ಒಕ್ಕಲುಗಳು ಈ ಭೂಸುಧಾರಣೆಗಳನ್ನು ನಿರೀಕ್ಷಿಸುತ್ತಿದ್ದಾರೆ. ಭೂಮಿಯನ್ನು ಹಂಚೋಣ ಮಾಡುವಾಗ್ಯೆ, ಮೊದಲಿಗೆ ಈಗ ವರ್ತಮಾನದಲ್ಲಿ, ತಾತ್ಕಾಲಿಕವಾಗಿ ಯಾರು ಬೇಸಾಯ ಮಾಡುತ್ತಿದ್ದಾನೋ ಅವನಿಗೆ ಪ್ರಥಮ ಪ್ರಾಶಸ್ತ್ಯ ಕೊಡಬೇಕು. ಇಲ್ಲದಿದ್ದರೆ ಅವನು ಬಹಳ ತೊಂದರೆಗೆ ಒಳಗಾಗಬೇಕಾದೀತು. ಇದರ ಜೊತೆಗೆ ಅವನಿಗೆ ಸ್ವಲ್ಪ ಖಾಲಿ ಭೂಮಿಯನ್ನು ಮೀಸಲಾಗಿ ಬಿಟ್ಟುಕೊಡಬೇಕು. ಐದು ಎಕರೆ ಗದ್ದೆ ಇದ್ದರೆ, ಗೊಬ್ಬರಕ್ಕೆ, ಕಟ್ಟಿಗೆಗೆ, ಗೋಚರಾವು ಇತ್ಯಾದಿಗಳಿಗೆ, ಬೇರೆ ಭೂಮಿ ಯಾವುದೂ ಇರುವುದಿಲ್ಲ. ಹೆಚ್ಚು ಉತ್ಪತ್ತಿ ಬರುವಂಥ ಸ್ಥಳದಲ್ಲಿ, ಗೋಚರಾವಿಗೆ ಗೊಬ್ಬರಕ್ಕೆ, ಹುಲ್ಲಿಗೆ, ಕಟ್ಟಿಗೆ ಇತ್ಯಾದಿಗಳಿಗೆ, ಐದು ಎಕರೆ ಜೊತೆಗೆ ಬೇರೆ ಭೂಮಿಯನ್ನು ಒದಗಿಸುವ ಏರ್ಪಾಡು ಮಾಡಬೇಕು. ಮೇಲೆ ಹೇಳಿದ ಕಾರಣಗಳಿಗೆ ಸಾಕಷ್ಟು ಭೂಮಿ ಇಲ್ಲದಿರುವುದರಿಂದ, ಬೇಸಾಯ ಕಾರ್ಯವನ್ನು ಸುಸೂತ್ರವಾಗಿ ನೆರವೇರಿಸುವುದಕ್ಕೆ ರೈತನಿಗೆ ಕಷ್ಟವಾಗಿದೆ.

ಸಮ್ಮಲ್ಲಿ ಮುಖ್ಯವಾಗಿ ಗೇಣಿಯಲ್ಲಿ ಮೂರು ಕ್ರಮ ಇದೆ. (1) ಮೂಲ ಗೇಣಿ. (2) ವಾಯಿದೆ (3) ಚಾಲ ಗೇಣಿ. ಈ ಚಾಲ ಗೇಣಿ ಹಕ್ಕು ಒಂದು ವರ್ಷಕ್ಕೆ ಮಾತ್ರ ಇರುತ್ತದೆ. ಆವಾಗ ಮಾತ್ರ ಬೇಸಾಯ ಮಾಡಬಹುದು. ವಾಯಿದೆ ಗೇಣಿಯ ಪ್ರಕಾರ, 10–15–20 ವರ್ಷಗಳ ಅವಧಿಯವರೆಗೆ ಹಕ್ಕಿರುತ್ತದೆ. ಅಂದರೆ ಎಲ್ಲಿಯವರೆಗೆ ಒಂದು ನಿಶ್ಚಿತವಾದ ಗೇಣಿ ಅವಧಿ ಇರುತ್ತದೆಯೋ ಅಲ್ಲಿಯವರೆಗೆ ನೆಮ್ಮದಿಯಾಗಿ ಬೇಸಾಯ ಮಾಡುತ್ತಿರಬಹುದು. ಮೂಲಗೇಣಿ, ಒಂದು ವಂಶಪಾರಂಪರ್ಯವಾದ ಗೇಣಿ, ಈ ಗೇಣಿಯ ಪ್ರಕಾರ ಒಕ್ಕಲನ್ನು ಸ್ಥಳದಿಂದ ಎಬ್ಬಿಸಲಿಕ್ಕೆ ಸಾಧ್ಯವಿಲ್ಲ. ಧನಿ ಭೂಮಿಯನ್ನು ಒಂದು ಒಕ್ಕಲಿನಿಂದ ತಪ್ಪಿಸಿ, ಆ ಒಕ್ಕಲನ್ನು ಸ್ಥಳಾಂತರವಾಡಿ, ಇನ್ನೊಬ್ಬ ಒಕ್ಕಲಿಗೆ ಕೊಡುವ ಗೋಜಿಗೆ ಹೋಗಲು ಸಾಧ್ಯವಿಲ್ಲ. ಈ ಗೇಣಿಯಲ್ಲಿ ಧನಿ, ಒಕ್ಕಲಿಗೆ ಒಂದು ಚಲೋದಾದ, ಪರಸ್ಪರವಾದ ಅನ್ಯೋನ್ಯತೆ ಬರಲಿಕ್ಕೆ ಸಾಧ್ಯ. ಭೂಸುಧಾರಣೆ ಹೆಚ್ಚು ಸುಗಮವಾಗಿ ಆಗುವುದಕ್ಕೂ ಸಾಧ್ಯವಿದೆ. ಒಕ್ಕಲಿಗೆ ಜಮೀನು ಕೃಷಿಗೆ ಸಿಗುತ್ತದೆ. ಧನಿಗೆ ತನ್ನ ಮಕ್ಕಳಿಗೆ ಭೂಮಿ ತಪ್ಪಿಹೋಗುತ್ತದೆ ಎನ್ನುವ ಭಯವಿಲ್ಲ. ಆದ್ದರಿಂದ ಒಕ್ಕಲಿಗೆ ತನ್ನ ಪರಿಶ್ರಮದಿಂದ ಹೆಚ್ಚುಬೆಳೆ ಬೆಳೆಯಲಿಕ್ಕೆ ಜಮೀನು ಅಭಿವೃದ್ಧಿ ಪಡಿಸುವುದಕ್ಕೆ ಯಾವ ಅಂತಕವೂ ಇಲ್ಲ. ಆದಕಾರಣ ನಮ್ಮಲ್ಲಿ ಮೂಲಗೇಣಿ ಕ್ರಮವೇ ಸಾಕು. ಅದೇ ಬರಲಿ.

ನಮ್ಮ ಕಡೆ ರೈತರು ಹೇಳುತ್ತಾರೆ: "ಭೂಶಾಸನ, ಭೂಸುಧಾರಣೆ ಎಂದು ಹೇಳುತ್ತಿದ್ದೀರಿ. ಮದ್ರಾಸ್ ಸರ್ಕಾರದಲ್ಲಿದ್ದಾಗಲೂ ಹೇಳುತ್ತಿದ್ದಿರಿ. ಈಗ ಇಲ್ಲಿಯೂ ಹೇಳುತ್ತಿದ್ದೀರಿ. ಆದರೆ ಖಂಡಿತವಾಗಿ ಇದು ಬರುವುದಿಲ್ಲ. ಭೂಸುಧಾರಣೆ ತರುವವರು ಯಾರು? ನೀವೆಲ್ಲರೂ ಭೂಪಾಲೀಕರು ಇದ್ದೀರಿ. ಹೆಚ್ಚಿನ ಮಹನೀಯರುಗಳೆಲ್ಲ ಭೂಮಾಲೀಕರು. ನೀವು ಎಂದೆಂದಿಗೂ ಭೂಸುಧಾರಣೆ ಬರಲಿಕ್ಕೆ ಬಿಡುವುದಿಲ್ಲ. ಕಟ್ಟ ಕಡೆಗೆ, ನಮ್ಮಲ್ಲಿರುವ ಬತ್ತದ ಗದ್ದೆಗಳ ಜೀಪಾವರಿ ಸರಿಮಾಡಿ ಗೇಣಿ 1/3 ಮಾಡಿದರೆ ಸಾಕು. ಇದ್ದ ಗೇಣಿಯನ್ನು ಇದ್ದಹಾಗೇ ಬಿಡಿ," ಎನ್ನುತ್ತಾರೆ. 42 ಸೇರಿಗೆ ಒಂದು ಮುಡಿ. ಬಹುಶಃ ನಮ್ಮಲ್ಲಿ 16 ಸೇರು ಬೀಜ ಹಾಕುವ ಸ್ಥಳಕ್ಕೆ ಒಂದು ಹುಡಿ ಎಂದು ಎಣಿಸಲಾಗುತ್ತವೆ. ಹಾಗೆ ದನಿಗಳೂ ಒಕ್ಕಲು ಒಪ್ಪಿಕೊಂಡಿದ್ದಾರೆ. ಒಂದು ಮುಡಿ ಗದ್ದೆಗೆ 16-20–25 ಸೇರಿಗಿಂತ ಹೆಚ್ಚಿಗೆ ಬೀಜ ಹೋಗುವುದಿಲ್ಲ; ಆದರೆ 30 ಸೇರು ಹಾಕುವ ಗದ್ದೆಯೂ ಇರಬಹುದು. 42 ಸೇರು ಹಾಕುವ ಗದ್ದೆಗಳಿಗೆ ಗೇಣಿಗಳಿಗೆ ಇಮ್ಮಡಿಯಾಗಬಹುದು. ಒಂದು ಮುಡಿಗೆ ಐದು ಮುಡಿ, ಹತ್ತು ಮುಡಿ ಅಕ್ಕಿವರೆಗೂ ಗೇಣಿ ಉಂಟು. ನಮ್ಮ ರೈತಾಪಿ ಜನರು ಹೇಳುತ್ತಾರೆ: "ಸ್ವಾಮಿ, ಈಗ ಇರುವ ಗೇಣಿಯನ್ನಾದರೂ ಸರಿಮಾಡಿ ಬಿಡಿ. ಒಕ್ಕಲಿಗೆ ಭದ್ರತೆ ಕೊಟ್ಟುಬಿಡಿ" ಎಂದು. ನಮ್ಮಲ್ಲಿ ಒಂದು ಗಾದೆ ಇದೆ. "ಮಣ್ಣು ಕಪ್ಪಾದಾಗ ಕಣ್ಣು ಕೆಂಪಾಗುತ್ತದೆ ಎಂದು." ಜಮೀನಿನಲ್ಲಿ ಫಸಲು ಚೆನ್ನಾಗಿ ಬಂದರೆ ಭೂಒಡೆಯ ಒಕ್ಕಲಿನಮೇಲೆ ವ್ಯಾಜ್ಯಕ್ಕೆ ಬರುತ್ತಾನೆ. ಆ ಒಕ್ಕಲು ಅಲ್ಲಿ ಇರಲಿಕ್ಕೆ ಸಾಧ್ಯವಿಲ್ಲದಹಾಗೆ ಮಾಡುತ್ತಾನೆ. ಇನ್ನೊಂದು ಒಕ್ಕಲನ್ನು ಅವನ ಜಾಗಕ್ಕೆ ತಂದು, ಗೇಣಿಯನ್ನು ಇಮ್ಮಡಿಗೆ ಏರಿಸುವುದಕ್ಕೆ ಪ್ರಯತ್ನ ಮಾಡುತ್ತಾನೆ. ಹಾಗೂ ಹೀಗೋ 3-4 ಒಕ್ಕಲು ಬದಲಾವಣೆಯಾಗುವುದರೊಳಗೆ ಧನಿಗೆ ಹೆಚ್ಚು ಗೇಣಿ ಬರುತ್ತದೆ.

(ಶ್ರೀ ಎಸ್. ಸುಬ್ಬಯ್ಯ ನಾಯಕ್)

4 P.M.

ಒಂದಕ್ಕೆ 2, 3, 4 ರಷ್ಟು ಪಾಲು ಅಧಿಕ ಗೇಣಿ ತೆಗೆದುಕೊಳ್ಳತಕ್ಕ ಸಂದರ್ಭ ಇದೆ.

ಇನ್ನು ನಮ್ಮಲ್ಲಿ ಮಾತನಾಡಿದವರು ಕೆಲವರು ಹೇಳಿದರು ಮತ್ತ ನಾನೂ ಕೆಲವು ಕಡೆ ಕೇಳುತ್ತಾ ಇದ್ದೇನೆ, ನಮಗೆ ಇದು ಯಾವುದೂ ಬೇಡ ಈಗ ಇರತಕ್ಕ ಸುಧಾರಣೆಯೇ ಸಾಕು ಎಂದು. ಮದರಾಸ್ ಸರಕಾರದಲ್ಲಿದ್ದಾಗ 40 ಅಂಶ ಗೇಣಿ ಕೊಡುವುದು ಎಂದು ಶಾಸನವೇನೋ ಬಂದಿತ್ತು. ಆದರೆ ಕಾರ್ಯ ಖಂಡಿತವಾಗಿಯೂ ಜಾರಿಗೆ ಬಂದಿಲ್ಲ. ಹಿಂದಿನ ಕಾಲದಲ್ಲಿ ನಾನು ಹುಟ್ಟಿದ ಕಾಲದಿಂದ ಏನು ವ್ಯವಹಾರ ನಡೆದುಕೊಂಡು ಬಂದಿದೆಯೋ ಅದೇ ರೀತಿ ಈಗಲೂ ಇದೆ. ಹಿಂದೆ ಇದ್ದ ಆ ವ್ಯವಸ್ಥೆ ಸ್ವಲ್ಪ ಕಮ್ಮಿ ಆಗಿರಬಹುದು, ಸಂಪೂರ್ಣವಾಗಿ ಹೋಗಿಲ್ಲ ಎಂದು ಹೇಳುತ್ತೇನೆ.

ಇನ್ನು ಚಾಲಗೇಣಿ ವಿಚಾರ ಸ್ವಲ್ಪ ಹೇಳುತ್ತೇನೆ. ಈ ಚಾಲ ಗೇಣಿಯಿಂದ ರೈತ ಎಷ್ಟು ನಿಕೃಷ್ಟಸ್ಥಿತಿಯಲ್ಲಿದ್ದಾನೆ ಎಂಬುದನ್ನು ಹೇಳಬೇಕಾದರೆ ಇದರಲ್ಲಿ ಒಂದು ಷರತ್ತು ಇದೆ ಅದನ್ನು ಓದುತ್ತೇನೆ. ನಿಜವಾಗಿಯೂ ಮನುಷ್ಯ ಜನ್ಮದಲ್ಲಿ ಬಂದಿರುವವರು ಈ ಷರತ್ತಿಗೆ ಒಳಪಟ್ಟು ಈಗ ಬಡ ರೈತನಲ್ಲದೆ ಮತ್ತಾರೂ ಒಪ್ಪಿಕೊಳ್ಳಕ್ಕಿಲ್ಲ ಎಂದು ಹೇಳುತ್ತೇನೆ. ಅದು ವಂಶಪಾರಂಪರ್ಯವಾಗಿ ನಡೆದುಕೊಂಡು ಬಂದಿದೆ. 1958ನೇ ಇಸವಿ ದಾಟಿದಮೇಲೂ ಇಲ್ಲವಾದ್ದಲ್ಲ ನಡೆಯುತ್ತಿದೆಯಲ್ಲಾ ಎಂದು ಆಶ್ಚರ್ಯವಾಗಬಹುದು. ನಮ್ಮಲ್ಲಿರುವ ಚಾಲ್ತ ಗೇಣಿ ಷರತ್ತು ಈ ರೀತಿ ಇದೆ:—

(1) ಗೇಣಿ ಸಂದಾಯದ ಕುರಿತು ರಶೀದಿ ತೆಗೆದುಕೊಂಡೇನು. ರಶೀದಿ ಕೊಡುವ ಕ್ರಮವೇ ಇಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ.

(2) ಈ ಆಸ್ತಿಯಲ್ಲಿರುವ ಕಟ್ಟೋಣಗಳ ಛಾವಣಿ ದಾಗದುಜಿ, ಕಟ್ಟುಕಡಿ, ಕೋಲು ಬೇಲಿ ದುರಸ್ತಿ ವಗೈರೆ ನನ್ನ ಖರ್ಚಿನಿಂದ ನಾನು ಮಾಡಿಸಿ ಈ ಆಸ್ತಿಗೆ ಸಂಬಂಧವಾದ ವರಾಡ ವಂತಿಗೆ ಏನಾದರೂ ಇದ್ದರೆ ನಾನು ಕೊಟ್ಟು ನಿಮ್ಮ ಬಿಟ್ಟಿ ಬೇಗಾರಿ ಮಾಡಿಕೊಂಡು ನಿಮಗೆ ಅನವೃತನಾಗಿ ನಡಿಕೊಂಡೇನು.

(3) ಗೇಣಿಯನ್ನು ವಾಯಿದೆಗೆ ಕೊಡಲಿಕ್ಕೆ ತಪ್ಪಿದರೆಯೂ ಎಷ್ಟನ್ನಾದರೂ ಬಾಕಿ ಮಾಡಿಕೊಂಡರೆ, ಬಾಕಿಯಾದ ಗೇಣಿ ನಗದಿ ಐವೇಜಿಗೆ ವ ಇತರ ಸೊತ್ತುಗಳ ಆ ಕಾಲದ ಕ್ರಯದ ಐವೇಜಿಗೆ ಸಾಲಿಯಾನ ಶೇಕಡ $6\frac{1}{4}$ ರಲ್ಲಿ ಆಗುವ ಬಡ್ಡಿ ಕೂಡಿಸಿ ನೀವು ಕೇಳಿದಾಗ ಕೊಡುವರೆ ನಾನು ಬದ್ಧನಾಗಿರುತ್ತೇನೆ. ಸದರಿ ಗೇಣಿ ಬಾಕಿ ಅಕ್ಕಿಗೆ ಹೊಲಿ ಕೊಡಿಸಿ ಕೊಡಬೇಕೆಂತ ನೀವು ಆಕ್ಷೇಪಿಸಿದರೆ, ವಾಯಿದೆಲಾಗಾಯಿತು ವಸೂಲು ವರೆಗೆ ಸಾಲಿಯಾನ ಅಕ್ಕಿ ಮುಡಿ ಒಂದಕ್ಕೆ ಕಾಲು ಮುಡಿ ಪ್ರಕಾರ ಆಗುವ ಹೊಲಿ ಕೂಡಿಸಿ ಕೊಡಲಿಕ್ಕೂ ನನಗೆ ಸಮ್ಮತವಿರುತ್ತದೆ.

(4) ಈ ಆಸ್ತಿಯ ಬೆಳೆ ಕಟಾವಿನ ಮುಂಚೆ ತಕ್ಕ ಕಾಲದಲ್ಲಿ ಈ ನಿಮ್ಮ ಗೇಣಿಗೆ ಯೋಗ್ಯವಾದ ಜಾಮೀನುಕೊಟ್ಟು ಬೆಳೆ ಕಟಾಯಿಸೇನು; ವ ಈ ಆಸ್ತಿಯಲ್ಲಿ ನಾನು ಬೆಳೆಸುವ ಎಲ್ಲಾತರದ ಪೈರು ವ ಫಲಗಳು ಈ ನಿಮ್ಮ ಗೇಣಿಗೆ ಪ್ರಥಮ ಜವಾಬ್ದಾರಿಯಾಗಿರುವುದು ನನ್ನ ಸಮಸ್ತ ಸ್ಥಿರಸೊತ್ತುಗಳು, ಜಾನುವಾರು ಮುಂತಾದ ಚರಸೊತ್ತುಗಳು ವ ನನ್ನ ದೇಹ ಜವಾಬ್ದಾರಿ ಕೂಡ ಆಗಿರುತ್ತದೆ.

(5) ಈ ಆಸ್ತಿಯಲ್ಲಿರುವ ಯಾವದೊಂದು ಮರ ಮಟ್ಟು ಕಡಿದು ಹಲಾಕು ಮಾಡಿದರೆ ಯಾ ಇತರ ಯಾವ ವಿಧದಿಂದಲೂ ಆಸ್ತಿ ಆರೂಪ ಪಡಿಸಿದರೆ ಆದರೆ ನಷ್ಟ ತರಲಿಕ್ಕೆ ವ ಆಸ್ತಿಗೆ ಸಂಬಧಿಸಿದ ಸರ್ವೆ ಕಲ್ಲುಗಳನ್ನು ಸುರಕ್ಷಿತದಿಂದ ಇರಗೊಡಿಸಲಿಕ್ಕೆ ಕೂಡ ತಪ್ಪಿದರೆ ಆ ಬಗ್ಗೆ ಸರಕಾರದವರು ಹೊರಿಸುವ ಜುಲುಮಾನೆ ವಗೈರೆ ತೆರಲಿಕ್ಕೆ ಸಹಾ ನಾನು ಬದ್ಧನಾಗಿರುತ್ತೇನೆ.

(6) ನಾನು ಚಾಲಗೇಣಿ ವಕ್ಕಲಾದುದರಿಂದ ಕೃತಮಾಡುವ ಹಕ್ಕು ನನಗಿಲ್ಲವಾದ್ದರಿಂದ ತಮ್ಮ ಬರಹಮೂಲಕ ಅನುಮತಿ ಪಡಿದು ವಿನಹಾ ಈ ಆಸ್ತಿಯಲ್ಲಿ ಯಾವತರದ ಕೃತಾವಳಿ ಮಾಡಿದರೂ ಆ ಬಗ್ಗೆ ಎಷ್ಟನ್ನಾದರೂ ಪ್ರತಿಫಲ ಬರಬೇಕೆಂದು ವಾದಿಸಲಿಕ್ಕೂ ನಾನು ಬೆಳೆಸುವ ಫಲ ಪೈರುಗಳಿಗೆ ಆತಂಕವಿಲ್ಲದೆ ಯಾವತರದ ಕೃತಾವಳಿ ನೀವು ಮಾಡಿಸುವುದಾರೂ ಆಕುರಿತು ನನಗೆ ಯಾವ ವಿಧದ ಆತಂಕ ಪಡಿಸುವರೆ ಯಾವ ಅಡ್ಡಿ ಹೇಳುವರೆ ಸಹ ಹಕ್ಕಿರುವುದಿಲ್ಲ.

(7) ಮೇಲೆ ಕಾಣಿಸಿದ ಎಲ್ಲಾ ಷರ್ತಗಳ ಮೇರೆಗೆ ನಾನು ವ ನನ್ನ ಪ್ರತಿನಿಧಿಗಳೂಕೂಡ ನಡಕೊಳ್ಳುವರೆ ತಪ್ಪಿದರೆ ಆ ಕುರಿತು ನೀವು ನಿಮ್ಮ ಇಚ್ಛಾನುಸಾರ ನಡೆಸುವ ರೆವಿನ್ಯೂ, ಕ್ರಿಮಿನಲ್, ಸಿವಿಲ್, ವ್ಯವಹರಣೆಗಳ ಸಕಲ ಖರ್ಚು ವ ನಷ್ಟ ತೆರಲಿಕ್ಕೆ ನಾನು ಬದ್ಧನಾಗಿರುತ್ತೇನೆ.

ಷರಾ:—ಈ ಆಸ್ತಿಯನ್ನು ಒಂದು ವರ್ಷಕ್ಕೆ ಮಾತ್ರ ನಾನು ಚಾಲಗೇಣಿಗೆ ವಹಿಸಿಕೊಂಡಿರುವುದರಿಂದ ನಿಮ್ಮ ಬರಹ ಮೂಲಕ ನೋಟೀಸಿನ ಅಡ್ಡಿ ಹೇಳದೆ ಬರುವ (1957ನೇ) ಇಸವಿ ಮಾರ್ಚಿ 31ಕ್ಕೆ ನಿಮ್ಮ ಸ್ವಾಧೀನಕ್ಕೆ ಒಪ್ಪಿಸಿಕೊಟ್ಟು ಆ ಬಗ್ಗೆ ಇದೇ ಸೋಡಾ ಚೀಟು ಆಗಿರುತ್ತದೆ.

ಹೀಗೆ ಚಾಲಗೇಣಿ ಕರಾರು ಬರೆದುಕೊಡಬೇಕು. ಇದಕ್ಕೆ ಎದುರ್ನೋಡಿ ಬರೆದುಕೊಡುವ ಕ್ರಮ ನಮ್ಮ ಜಿಲ್ಲೆಯ ಉತ್ತರ ಭಾಗದಲ್ಲಿ ಇದೆ. ದಕ್ಷಿಣ ಭಾಗದಲ್ಲಿ ಇಲ್ಲ.

ಶ್ರೀ ಟಿ. ಹನುಮಯ್ಯ (ಚಳ್ಳಕೆರೆ).—ರಿಜಿಸ್ಟರ್ ಮಾಡುತ್ತಾರೋ ಅವರವರೇ ಬರೆದು ಕೊಡುತ್ತಾರೋ?

ಶ್ರೀ ಎಸ್. ಸುಬ್ಬಯ್ಯನಾಯಕ್.—ಮೊದಲು ಅವರೇ ಬರೆದುಕೊಡುವ ಕ್ರಮ ಇತ್ತು, ಈಗ ರಿಜಿಸ್ಟರ್ ಮಾಡಬೇಕೆಂದು ಇದೆ. ಅದೂ ಸಹ ಇನ್ನೂ ಜಾರಿಗೆ ಬಂದಿಲ್ಲ. ಒಂದೆರಡು ಕಡೆ ಬಂದಿರಬಹುದು.

ಇನ್ನೂ ಇಂಥಾ ಒಂದು ನಿಕೃಷ್ಟವಾದ ಪರಿಸ್ಥಿತಿ ಇಟ್ಟುಕೊಂಡು ಕೂಡ ಇಂಥಾ ಒಂದು ಸುಧಾರಣೆ ಆಗತಕ್ಕದ್ದು ಬೇಡ, ಇದ್ದ ಹಾಗೇ ಇರಲಿ, ಎಂದು ಹೇಳುವವರು ಇದ್ದಾರೆ. ಆ ಮೂಕ ಜೀವಿಗಳು ಅಂದರೆ ಬಡ ರೈತರಿಗೆ ಹೇಳಿಕೊಳ್ಳಲು ಬಾಯಿ ಇಲ್ಲ, ಏನು ಬಂದರೂ ಅನುಭವಿಸಬೇಕಾಗಿದೆ. ಇನ್ನು ಎಷ್ಟೋ ವರ್ಷ ಆದರೂ ಕೂಡ, ಅದು ಬೇಡ, ಇದು ಬೇಡ, ಅವರಿಗೆ ಹಾಗೆ ಆಗುತ್ತದೆ, ಇವರಿಗೆ ಹೀಗೆ ಆಗುತ್ತದೆ ಎಂದು ಹೇಳಿಕೊಂಡು ಹೋಗತಕ್ಕ ಪರಿಸ್ಥಿತಿ ತಪ್ಪುವುದಿಲ್ಲ. ತಮಗೆ ಯಾವುದು ಒಳ್ಳೆಯದೋ ಅದು ಆಗಲಿ, ಇಲ್ಲದೇ ಇದ್ದರೆ ಬೇಡ ಎಂದು ನೇರವಾಗಿ ಹೇಳದೇ ಇದ್ದರೂ ಆ ಅರ್ಥ ಬರುತ್ತದೆ. ಪರಮಾವಧಿಯನ್ನು ಅನ್ವಯಿಸುವ ಉದ್ದೇಶಕ್ಕಾಗಿ ಒಂದು ಕಾರಣವನ್ನು ಹೇಳುತ್ತಾರೆ. ನಮ್ಮ ಜಿಲ್ಲೆಯಲ್ಲಿ ಸರ್ವಸಾಧಾರಣವಾಗಿ ಸುಮಾರು 13 ಲಕ್ಷ ಜನ ಸಂಖ್ಯೆ ಇದೆ. ಅದರಲ್ಲಿ ಎಂಟು ಲಕ್ಷ ಜನರು ಅಳಿಯ ಕಟ್ಟಿನವರು ಇರಬಹುದು. ಅವರಿಗೆ ತೊಂದರೆ ಬರುತ್ತದೆ ಎಂದು ಹೇಳುವವರು

ಕೇವಲ 1 ಲಕ್ಷ ಜನ ಇದ್ದಾರೆಯೇ ಇಲ್ಲವೋ. ಸಾಮಾನ್ಯವಾಗಿ ತನ್ನ ಸ್ವತ್ತು ಯಾವುದೇ ಇದ್ದರೂ ತನ್ನ ಹೆಂಡತಿ ಮಕ್ಕಳಿಗೆ ಕೊಡುತ್ತಾನೆಯೇ ಹೊರತು ಅಳಿಯನಿಗೆ ಕೊಡುವುದಿಲ್ಲ.

ಶ್ರೀ ಟಿ. ಹನುಮಯ್ಯ.—ದೇಹವನ್ನು ಕೂಡ ಒತ್ತೆ ಇಡಬೇಕೆಂದು ಅವರು ಹೇಳಿದರು. ಅದು ಹೇಗೆ ಎಂಬುದು ವಿಮರ್ಶೆ ಆಗಲಿಲ್ಲ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಷರತ್ತಿನಲ್ಲಿ ಇರುವುದನ್ನು ಓದಿ ಹೇಳಿದೆ.

ಏಕೆಂದರೆ ಯಾರೂ ಮೋಸ ಹೋಗಬಾರದು. ನಮ್ಮಲ್ಲಿ ಹರಿಜನರು ಮೂಲದವರು ಎಂದು ತಿಳಿಯುವ ಭಾವನೆಯಿದೆ. ಅವನು ಎಲ್ಲಿಗೂ ಓಡಿಹೋಗದ ಸಂದರ್ಭವಿದೆ. ಅವನೇನಾದರೂ ಬೇರೆ ಕಡೆಗೆ ಓಡಿಹೋದರೆ ಅವನಿಗೆ ದೋಷ ಮುಟ್ಟುತ್ತದೆ ಎಂಬ ಭಾವನೆಕೂಡ ಅವನಲ್ಲಿ ಉಂಟುಮಾಡಿರುತ್ತಾರೆ. ಹೀಗಾಗಿ ಅವರು ಎಂದೆಂದಿಗೂ ತಮ್ಮ ದೇಹವನ್ನು ಒತ್ತೆಯಾಗಿಡಬೇಕಾಗಿರುತ್ತದೆ. ಇದರಿಂದಾಗಿ ಅವನ ಜೀವನ—ದಿನ ದುಡಿಯಬೇಕು, ಎರಡು ಹೊತ್ತೋ, ಮೂರು ಹೊತ್ತೋ ಉಣ್ಣಬೇಕು—ಹೀಗಿರುತ್ತದೆ. ಹೀಗಿರುವಾಗ ನಾವು ಯಾವ ಬಾಯಿಂದ ಹೇಳುತ್ತಿದ್ದೇವೋ ಗೊತ್ತಾಗುವುದಿಲ್ಲ; 1957ರ ಚುನಾವಣೆಯ ಪ್ರಚಾರಕ್ಕೆ ಹೋದಾಗ ಕೂಡ, ನಾವು ಇದೇ ರೀತಿ ಹೇಳಿ ಬಂದಿದ್ದೇವೆ; ದೊಡ್ಡದಾಗಿ ಪಟದ ಮೇಲೆ ಬರೆದ ನೇಗಿಲನ್ನು ಹಿಡಿದು ಉಳುವ ರೈತನ ಚಿತ್ರ ಹೊತ್ತುಕೊಂಡು, ರೈತರನ್ನು ಉದ್ಧಾರ ಮಾಡುತ್ತೇವೆ, ಅವನ ಏಳಿಗೆಗೆ ಏನೇನು ಬೇಕೋ ಅದನ್ನೆಲ್ಲಾ ಒದಗಿಸುತ್ತೇವೆ ಎಂದು ಪ್ರಚಾರ, ಪ್ರಕಟಣೆ ಮಾಡಿಕೊಂಡು ಬಂದಿದ್ದೇವೆ: ಇದೇ ನಮ್ಮ ಧ್ಯೇಯವೆಂದು ಸಾರಿ ರೈತರ ಉದ್ಧಾರಕ್ಕಾಗಿ ಪಣತೊಟ್ಟು ಬಂದಿದ್ದೇವೆ, ಆದರೆ, ದೇವರೇ! ಇಲ್ಲಿ ಬಂದು ನೋಡಿದರೆ, ಅಂತರಂಗವನ್ನು ಸ್ವಲ್ಪ ಒಳಹೊಕ್ಕು ಪರಿಶೀಲನೆ ಮಾಡಿ ನಮ್ಮ ಹಳ್ಳಿಯ ಜನರಿಗೆ ಇಲ್ಲಿಯ ವಿಚಾರ ಹೇಳಿದರೆ ಅವರಿಗೆಲ್ಲಿ ಸ್ಮೃತಿತಪ್ಪಿ ಹೋಗುತ್ತದೋ ಎನಿಸುತ್ತದೆ. ಇದನ್ನು ನೋಡಿದರೆ ನಮಗೆ ಬಹಳ ವ್ಯಸನವಾಗುತ್ತದೆ. ನಾವು ವಚನ ಪಾಲಕರಾಗಿರಬೇಕು. ನಮ್ಮ ರೈತರು ಉದ್ಧಾರವಾದರೆ ನಮ್ಮ ದೇಶ ಉದ್ಧಾರವಾದಂತೆ.

ಶ್ರೀ ಜಿ. ಎಚ್. ಪುಟ್ಟಣ್ಣ (ತುಮಕೂರು).—ರೈತರಿಗೆ ಕೊಟ್ಟ ವಾಗ್ದಾನವೇನು? ಎಂಬದನ್ನು ಮಾನ್ಯ ಸದಸ್ಯರು ಸ್ವಲ್ಪ ವಿಶದಪಡಿಸಬೇಕೆಂದು ಕೇಳುತ್ತೇನೆ.

ಶ್ರೀ ಎಸ್. ಸುಬ್ಬಯ್ಯನಾಯಕ್.—ನಿಮ್ಮನ್ನು ಉದ್ಧಾರಮಾಡುತ್ತೇವೆ; ನಿಮಗಾಗಿ ಒಳ್ಳೆಯ ಕಾನೂನು ತರುತ್ತೇವೆ; ಎಲ್ಲರಿಗೂ ಹೆಚ್ಚು ಹೆಚ್ಚು ಹೊಲ, ಗದ್ದೆ ಕೊಡಿಸುತ್ತೇವೆ; ಉಳುವವನೇ ಹೊಲದ ಒಡೆಯನಾಗುವಂತೆ ಮಾಡುತ್ತೇವೆಂದು ಸಾರಿದೆವು ನಾವು. ಅಂದು ಪ್ರಕಟವಾದ ಪತ್ರಿಕೆಗಳಲ್ಲಿ ಇದನ್ನು ಈಹೊತ್ತಿಗೂ ಕಾಣಬಹುದು. ಆ ರೀತಿ ಕೊಟ್ಟ ಮಾತಿಗೆ ತಪ್ಪುವುದು ಯೋಗ್ಯವಲ್ಲ. ಇನ್ನು, ಹೆಚ್ಚು ಕಾಲ ಹೀಗೆಯೇ ಇರುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಅಜ್ಞಾನದ ಕತ್ತಲೆ ಹೋಗಿ ಜ್ಞಾನ ಸೂರ್ಯ ಬಂದು ಜನರು ರೊಚ್ಚಿಗೆ ಎದ್ದರೆ ದೇಶದಲ್ಲಿ ಕ್ರಾಂತಿ ಉಂಟಾದೀತು ಎಂದು ಶ್ರೀ ವಿನೋಭಾಜೀಯವರು ಹೇಳುವ ಮಾತುಗಳು ಅಕ್ಷರಶಃ ನಿಜವೆಂದು ಹೇಳುತ್ತೇನೆ. ಆದ್ದರಿಂದ ತಮ್ಮ ಕಾಲದಲ್ಲಿ, ತಮಗೆ ಅವಕಾಶ ಬಂದಿರುವ ಸಮಯದಲ್ಲಿ, ನಾವು ನಮ್ಮ ಮಾತಿನಂತೆ ಮಾಡಿಕೊಟ್ಟಿದ್ದೇವೆ ಎಂದು ಮಾಡಿ ತೋರಿಸಬೇಕು. ಹಾಗಿಲ್ಲದೆ ಕಾಲ ಕಳೆದು ಹೋದಮೇಲೆ ನೀವು ಕೊಟ್ಟರೂ ಒಂದೇ ಬಿಟ್ಟರೂ ಒಂದೇ. ಆದ್ದರಿಂದ ಈ ಬಗ್ಗೆ ಹೆಚ್ಚಿನ ಗಮನಕೊಟ್ಟು ರೈತರನ್ನು ಉದ್ಧಾರಮಾಡಬೇಕೆಂದು ಹೇಳುತ್ತೇನೆ.

ನಾನು ತಾವು ಕೊಟ್ಟಂಥ ಸಮಯದಲ್ಲಿ ಇನ್ನು ಹೆಚ್ಚು ಉಪಯೋಗಿಸಲು ಮನಸ್ಸು ಮಾಡುವುದಿಲ್ಲ, ಹೇಳಬೇಕೆಂದರೆ ತುಂಬ ಹೇಳಬಹುದು, ಆದರೆ ಒಂದೆರಡು ಮುಖ್ಯ ವಿಚಾರಗಳನ್ನು ಮಾತ್ರ ಹೇಳಿ ಮುಗಿಸುತ್ತೇನೆ ನಾನು ರೈತರ ಪರವಾಗಿ ಮಾತ್ರ ವಾದಿಸುತ್ತೇನೆ ಎಂದು ಯಾರೂ ತಿಳಿಯಕೂಡದು. ಧನಿಗಳು ಕೂಡ ಈ ಹೊತ್ತು ಇದನು ಜಾರಿಗೆ ತನ್ನಿರೆಂದು ಹೇಳುತ್ತಿದ್ದಾರೆ. ಏನೇ ಆದರೂ ಹೊಸ ಭೂಶಾಸನ ಕೂಡ್ಲೆ ಬರಲೆಂದೇ ನನ್ನ ಆಶಯ. ಈಗ ಸರಕಾರದ ವಿಧಾನ ನೀತಿಯಿಂದೇನಾಗಿದೆ? ಧನಿಯು, ಜಮಿನು ಯಾರಿಗೋ ಹೋಗುವುದಾದ ಮೇಲೆ ತಾನೇಕೆ ಹಣ ಹಾಕಬೇಕು ಎನ್ನುತ್ತಾನೆ. ಒಕ್ಕಲು ಕೂಡ, ಜಮಿನು ತನ್ನದಾಗಿಲ್ಲದ ಮೇಲೆ ತಾನೇಕೆ ಹೆಚ್ಚು ಕಷ್ಟಪಡಬೇಕು ಎನ್ನುತ್ತಾನೆ. ಹೀಗಾಗಿ ರೈತ ದಕ್ಷಿಣೆಗೆ ತಕ್ಕ ಪ್ರದಕ್ಷಿಣೆ ಎಂದು ಒಂದಿಷ್ಟು ಕೆಲಸ ಮಾಡಿ ಅವನೂ ಸುಮ್ಮನಿರುತ್ತಾನೆ. ಹೀಗಾಗಿ, ಏನೇ ಆಗಲಿ ಧನಿ, ಒಕ್ಕಲು ಇಬ್ಬರೂ, ಕೂಡ್ಲೆ ಈ ಶಾಸನ ಜಾರಿಗೆ ಬರಲೆಂದು ಹೇಳುವ ಮನೋಭಾವವಿದೆ.

ಮತ್ತೊಂದು ವಿಷಯವೇನೆಂದರೆ, ತಾವು ತರುವ ಶಾಸನ, ಕಾನೂನು ಸ್ಪಷ್ಟವಾಗಿರಲಿ, ಸರಳವಾಗಿರಲಿ ಎಂಬುದು. ಹೀಗಿಲ್ಲದಿದ್ದರೆ ವಕೀಲರು ಸಾಧಿಸುವಂಥ ಹುದಾದರೆ ಒಕ್ಕಲಿಗೆ ಏನೂ ಪ್ರಯೋಜನವಿಲ್ಲ.

ಇನ್ನೊಂದು ಇದರಲ್ಲಿ ಹೇಳಿದ್ದಾರೆ. ವಿವಾದಗಳನ್ನು ಪರಿಹರಿಸಲಿಕ್ಕೆ, ತೀರ್ಮಾನಿಸಲಿಕ್ಕೆ ಟ್ರಿಬ್ಯುನಲ್ ಬೇಕೆಂದು ಹೇಳಿದ್ದಾರೆ. ಇದು ಬಹಳ ಅಗತ್ಯ. ಒಕ್ಕಲು ಕೋರ್ಟಿಗೆ ಹೋಗಿ ವಕೀಲರನ್ನು ಗೊತ್ತುಮಾಡಿ ಸಾಕ್ಷಿ, ರುಜುವಾತುಗಳನ್ನು ಸಿದ್ಧಪಡಿಸಿಕೊಳ್ಳುವುದು ಖಂಡಿತ ಸಾಧ್ಯವಿಲ್ಲ. ಕೋರ್ಟಿಗೆ ಹೋಯಿತೆಂದರೆ ಬೇಸಾಯ ಮಾಡುವ ಗದ್ದೆ ಮೊದಲು ಬಂಜರು ಬೀಳುತ್ತದೆ. ಇದರಿಂದಾಗಿ ಧನಿ, ಒಕ್ಕಲು—ಇಬ್ಬರಿಗೂ ಹಾನಿ. ಧನಿಯಾದರೋ ಇದರ ಕಷ್ಟ ಹೊರಬಲ್ಲ. ಒಕ್ಕಲಿಗೆ ಇದರ ಪರಿಣಾಮ ಬಹಳ ಕೆಟ್ಟದಾಗುತ್ತದೆ. ಇನ್ನೊಂದೇನೆಂದರೆ ಹೊಸದಾಗಿ ಭೂಮಿಮಾಡುವವನಿಗೆ ನಿರ್ಬಂಧ ಮಾಡಬಾರದು. ಒಳ್ಳೆಯ ಕೃಷಿಮಾಡುವವನಿಗೆ ಹೆಚ್ಚು ಅವಕಾಶ ಕೊಡಬೇಕು. ಇದರಿಂದ ಕೃಷಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟಂತಾಗುತ್ತದೆಂದು ಹೇಳುತ್ತೇನೆ. ಇಲ್ಲದಿದ್ದರೆ ಪ್ರತಿಯೊಬ್ಬರಿಗೂ ಐದು ಎಕರೆ ಇರುವಂತೆ ಮಾಡಿ; ಅವನು ಸರ್ಕಾರಿ ಉದ್ಯೋಗಸ್ಥನಾಗಿರಲಿ ಅವನಿಗೆ 3000 ರೂಪಾಯಿ ಸಂಬಳವೇ ಬರುತ್ತಿರಲಿ ಅವನಿಗೂ ಒಂದಿಷ್ಟು ಜಮಿನಿರಲಿ. ಆದರೆ ಅವನಿಗೂ ಇದೇ ರೀತಿ ಐದು ಎಕರೆಯ ಕನಿಷ್ಟ ಮಿತಿಯಿರುವಂತೆ ಮಾಡಬೇಕೆಂದು ಹೇಳುತ್ತೇನೆ. ಏಕೆಂದರೆ ವ್ಯಾಪಾರದಲ್ಲಿ ಸೋತರೆ, ಕೊನೆಗೆ ತನ್ನ ಬಾವಿ ಅಥವಾ ತನ್ನ ಕೆರೆಯ ನೀರು ಕುಡಿದು ತನ್ನ ಭೂಮಿಯಲ್ಲಿ ಇರುತ್ತೇನೆ ಎಂದು ಹೇಳುವ ಹಾಗೆ ಇರಬೇಕು. ತಾತ್ಕಾಲಿಕದಲ್ಲಿ ಒಕ್ಕಲಿದ್ದರೆ ಅವನಿಗೆ ಬಿಡಲಿ, ಒಂದು ಎಕರೆಯನ್ನು ಸ್ವಂತ ಬೇಸಾಯಕ್ಕೆ.

ಶ್ರೀ ವಿ. ಶ್ರೀನಿವಾಸಶೆಟ್ಟಿ (ಕುಂದಾಪುರ).—ನಮ್ಮ ಜಿಲ್ಲೆಯಲ್ಲಿ ಬರುವುದೇ ಒಬ್ಬರಿಗೆ ಒಂದು ಎಕರೆ!!

ಶ್ರೀ ಎಸ್. ಸುಬ್ಬಯ್ಯನಾಯಕ್.—ನಾನು ಹೇಳುವುದು ಸಾಧ್ಯವಿದ್ದರೆ ಒಂದು ಕುಟುಂಬಕ್ಕೆ ಐದು ಎಕರೆಯಂತೆ ಬಿಡುವಂತಿರಬೇಕು ಎಂದು. ಕೆಲವರು ನೀವು

(ಶ್ರೀ ಎಸ್. ಸುಬ್ಬಯ್ಯ ನಾಯಕ್)

ಕೊಟ್ಟರೂ ಬೇಡ ಎಂದು ಹೇಳುತ್ತಾರೆ. ಒಟ್ಟಿನಲ್ಲಿ ಈ ಏರ್ಪಾಡಿನಿಂದ ಒಕ್ಕಲಿಗೂ ತೊಂದರೆಯಿರುವುದಿಲ್ಲ. ಏಕೆಂದರೆ ಧನಿ ಹೇಗಿದ್ದರೂ ಹೊರಗಿರುತ್ತಾನೆ, ಅವನ ಜಮೀನು ಬಿಡಿಸಿಕೊಳ್ಳುವುದಿಲ್ಲ.

ಆಮೇಲೆ ರಶೀತಿ ಕೊಡುವ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ಇಲ್ಲಿ ಹೇಳಿದ್ದಾರೆ. "ಇದನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಜಾರಿಗೆ ತರಬೇಕಾದರೆ ನಮಗಿರುವುದು ರಸೀತಿಗಳನ್ನು ಪಾವತಿಮಾಡದಿರುವುದನ್ನು ವಾರಂಟಿಲ್ಲದೆ ದಸ್ತಗಿರಿ ಮಾಡಬಹುದಾದ ಅಪರಾಧವೆಂಬುದಾಗಿ ಪರಿಗಣಿಸುವುದು ಒಂದೇ ಒಂದು ಮಾರ್ಗ" ಎಂದು. ಇದು ಅಷ್ಟು ಸೂಕ್ತವಲ್ಲದಿದ್ದರೂ ಗೇಣಿಚೀಟಿಯ ಷರತ್ತಿನಲ್ಲಿಯೇ ಗೇಣಿದಾರನು ಹೀಗೆ ರಶೀತಿ ಕೊಟ್ಟೇನು ಎಂದು ಬರೆಸಿದ್ದರೆ ಒಳ್ಳೆಯದು. ಏಕೆಂದರೆ ರಶೀತಿ ಕೊಡುವುದು ಧನಿಯ ಕರ್ತವ್ಯವೆಂಬದರ ಅರಿವು ಅವನಿಗಿರಬೇಕು.

ಆಮೇಲೆ ಮೂಲಗೇಣಿಯ ವಿಷಯದಲ್ಲಿ ಮೂಲ ಗೇಣಿಯ ಕ್ರಮವು ಏನೇ ಇರಲಿ ಶೇಕಡ 20, 25 ಅಥವಾ 35ರ ವರೆಗೆ ಅದು ಇದ್ದರೂ ಪರವಾಯಿಲ್ಲ, ಬೀಜವಾರಿಯನ್ನು ಮಾತ್ರ ಸರಿಮಾಡಬೇಕೆಂದು ಹೇಳುತ್ತೇನೆ. ಕಾನೂನು ಈ ವಿಷಯದಲ್ಲಿ ಸ್ಪಷ್ಟವಾಗಿರಬೇಕು.

ಒಟ್ಟಿನಲ್ಲಿ ಯಾವುದೇ ದೃಷ್ಟಿಯಿಂದಾಗಲಿ ರೈತರು ಉದ್ಧಾರವಾಗಬೇಕು. ಅವರು ಉದ್ಧಾರವಾದರೆ ದೇಶ ಉದ್ಧಾರವಾಗುತ್ತದೆಂದು ಮನಗಂಡು ನಮ್ಮ ಮನಸ್ಸನ್ನು ದೊಡ್ಡದು ಮಾಡಿದರೆ ಒಳ್ಳೆಯದು. ಈ ರೀತಿ ಮಾಡಿ ರಾಷ್ಟ್ರದ ಮುಖಂಡರುಗಳ ಆಶೆ ಆಕಾಂಕ್ಷೆಗಳನ್ನು, ಧ್ಯೇಯ ಧೋರಣೆಗಳನ್ನು ಸಾರ್ಥಕ ಮಾಡಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸುತ್ತೇನೆ.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಮಾನ್ಯ ಅಧ್ಯಕ್ಷರೆ, ಇದೊಂದು ಪ್ರಾಮುಖ್ಯವಾದ ವಿಷಯ. ಅನೇಕ ಮಾನ್ಯ ಸದಸ್ಯರು ಈ ಬಗ್ಗೆ ಸೂಕ್ತ ಸಲಹೆ ಕೊಟ್ಟಿದ್ದಾರೆ. ಅವುಗಳನ್ನು ಯೋಚನೆಮಾಡ ಬೇಕಾಗಿದೆ. ಆದಷ್ಟು ತೀವ್ರವಾಗಿ ಎಲ್ಲಾ ಕಡೆಗೂ ಗೇಣೀ ಶಾಸನವನ್ನು ಜಾರಿಗೆ ತರಬೇಕೆಂದು ಪ್ಲ್ಯಾನಿಂಗ್ ಕಮಿಷನ್ ಅವರು ತಿಳಿಸಿದ್ದಾರೆ. ಈ ಗೇಣಿ ಶಾಸನದ ಗುರಿ ಏನು ಇರಬೇಕೆಂಬುದನ್ನು ಅವರು ನಮ್ಮ ಮುಂದೆ ಇಟ್ಟಿದ್ದಾರೆ. ಮುಖ್ಯವಾಗಿ ದೇಶದಲ್ಲಿ ಆಹಾರ ಉತ್ಪತ್ತಿ ಹೆಚ್ಚಾಗುವಂತೆಮಾಡುವುದು, ಭೂ ಮಾಲಿಕ ಮತ್ತು ಗೇಣಿದಾರರ ನಡುವೆ ಇರುವ ಅಂತರ ಕಡಮೆ ಮಾಡುವುದು ಎಂಬುದಾಗಿ ಇದೆ. ಪ್ಲ್ಯಾನಿಂಗ್ ಕಮಿಷನ್‌ಅವರ ಮುಖ್ಯ ಉದ್ದೇಶವನ್ನು ಚೆನ್ನಾಗಿ ಅರಿತುಕೊಂಡು ಆ ಗುರಿಯನ್ನು ಸಮಿತಿಯವರು ಈ ವರದಿಯಲ್ಲಿ ಸಾಧಿಸಿದ್ದಾರೆ. ಗೇಣಿ ಶಾಸನವನ್ನು ಆದಷ್ಟು ತೀವ್ರವಾಗಿ ಜಾರಿಗೆ ತರಬೇಕೆಂದು ಪದೇಪದೇ ಹೇಳಿದ್ದಾರೆ. ಅದಕ್ಕಾಗಿ ನಮ್ಮ ಸರ್ಕಾರದವರು ಜತ್ತಿ ಸಮಿತಿಯನ್ನು ನೇಮಕಮಾಡಿ ಒಂದು ನಿರ್ದಿಷ್ಟ ಅವಧಿಯಲ್ಲಿ ವರದಿಯನ್ನು ಒಪ್ಪಿಸುವಹಾಗೆ ಏರ್ಪಾಡುಮಾಡಿದರು. ಈ ಜತ್ತಿ ಸಮಿತಿಯವರು ಈ ವಿಷಯವನ್ನು ಚೆನ್ನಾಗಿ ಅರಿತುಕೊಂಡು ದೇಶದಲ್ಲಿಯ ಸ್ಥಿತಿಗತಿಗಳಿಗೆ ಅನುಸಾರವಾಗಿ ಭೂ ಸುಧಾರಣೆ ಯಾವ ರೀತಿಯಾಗಿ ಮಾಡಬೇಕು ಎಂಬುದಕ್ಕೆ ಅವರ ವರದಿಯಲ್ಲಿಯ ಶಿಫಾರಸುಗಳನ್ನು ನೋಡಿದರೆ, ಪ್ಲ್ಯಾನಿಂಗ್ ಕಮಿಷನ್ ಅವರು ನಮ್ಮ ಮುಂದೆ ಯಾವ ಗುರಿಗಳನ್ನು ಇಟ್ಟಿದ್ದಾರೆಯೋ ಅವುಗಳನ್ನು ಯಶಸ್ವಿಯಾಗಿ ಸಾಧಿಸಿದ್ದಾರೆ ಎಂಬುದರಲ್ಲಿ ಯಾವ ಸಂಶಯವಿಲ್ಲ. ಈ ಜತ್ತಿ ಸಮಿತಿಯ ಶಿಫಾರಸುಗಳಿಗೆ ಮುಖ್ಯವಾಗಿ ಎರಡು ಉದ್ದೇಶಗಳು ಪ್ರೇರಕವಾಗಿವೆ. ಅವು ಯಾವುವು ಎಂದರೆ (1) ಭೂ ಮಾಲಿಕ ಮತ್ತು ಗೇಣೀದಾರರ ಸಂಬಂಧವನ್ನು ನಿರ್ಮೂಲನಮಾಡುವುದು, (2) ಭೂಮಿ ಇಲ್ಲದವರ ಆಶಯಗಳನ್ನು ಈಡೇರಿಸುವದಕ್ಕಾಗಿ ಭೂಮಿಗಳನ್ನು ಪುನಃ ಹಂಚುವುದು. ಇದರಲ್ಲಿ ಭೂಮಿಯಿಲ್ಲದ ರೈತರಿಗೆಲ್ಲರಿಗೂ ನ್ಯಾಯ ದೊರೆತಿದೆ ಎಂದು ನಾನು ಹೇಳಬಯಸುತ್ತೇನೆ. ಜತ್ತಿ ಸಮಿತಿಯ ವರದಿಯನ್ನು ನಾನು ತುಂಬಾ ಒಪ್ಪುತ್ತೇನೆ. ಹಾಗೂ ಕೆಲವು ಸೂಚನೆಗಳನ್ನು ತಮ್ಮ ಮುಂದೆ ಇಡಲು ನಾನು ಅಪೇಕ್ಷಿಸುತ್ತೇನೆ.

ಇನ್ನು quantum of rent ಎಂದರೆ ಗೇಣಿಯ ಪರಿಮಾಣದ ಬಗ್ಗೆ ಪ್ಲ್ಯಾನಿಂಗ್ ಕಮಿಷನ್‌ಅವರು ಹೇಳಿದ ಪ್ರಕಾರ ಕಾಲುಭಾಗಕ್ಕಿಂತ ಕಡಿಮೆಯಾಗಿರಬಾರದು ಎಂಬುದು ನ್ಯಾಯವಾಗಿದೆ. ಈ ಮಟ್ಟವನ್ನು ಸ್ವೀಕರಿಸಬಹುದೆಂದು ಸಮಿತಿ ಅಭಿಪ್ರಾಯ ಪಟ್ಟಿದೆ. ತಿದ್ದುಪಡಿಯಾದ ಹೈದ್ರಾಬಾದ್ ಕಾನೂನಿನಲ್ಲಿ ಐದನೇ ಒಂದು ಭಾಗ ಇರಬೇಕೆಂದು ಸೂಚಿಸಿದೆ. ನೀರಾವರಿಯ ಸೌಕರ್ಯವಿರುವ ಭೂಮಿಗಳ ಸಂಬಂಧದಲ್ಲಿ ಪರಮಾವಧಿ ಗೇಣಿಯು ಹುಟ್ಟುವಳಿಯ ಕಾಲು ಭಾಗದಷ್ಟೂ ಮತ್ತು ಇತರ ಸಂದರ್ಭಗಳಲ್ಲಿ ಹುಟ್ಟುವಳಿಯ ಐದನೇ ಒಂದು ಭಾಗದಷ್ಟೂ ಆಗಬಹುದೆಂದು ಸಮಿತಿಯವರು ವರದಿಯಲ್ಲಿ ಸೂಚಿಸಿದ್ದಾರೆ. ಇದು ಅತ್ಯಗತ್ಯವಾಗಿದೆ. ಇದನ್ನು ನಾನು ತುಂಬಾ ಸ್ವಾಗತಿಸುತ್ತೇನೆ. ಗೇಣಿದಾರರು ಬೆಳೆದಂಥಾ ಫಸಲಿಗೆ ಅವರು ಹೆಚ್ಚಿಗೆ ಪರಿಹಾರ ಅಪೇಕ್ಷಿಸುತ್ತಾರೆ. ಆದರೆ ಕಷ್ಟಪಡಲು ಒಪ್ಪುವುದಿಲ್ಲ. ಪರಿಹಾರವನ್ನೇ ಕೊಡದೆ ಹೆಚ್ಚಿಗೆ ಬೆಳೆಯಲು ಆಗುವುದಿಲ್ಲ. ಆದಕಾರಣ ಈಗ ಸಮಿತಿಯವರು ಶಿಫಾರಸುಮಾಡಿದ ಪ್ರಕಾರ ನಾಲ್ಕನೆ ಒಂದು ಮತ್ತು ಐದನೇ ಒಂದು ಪ್ರಮಾಣ ಇರಬೇಕೆಂದು ನಾನೂ ಸೂಚಿಸುತ್ತೇನೆ.

ಇನ್ನು ನಮ್ಮ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಗ್ರಾಮಸ್ಥರಿಗೆ ತರಪೇತಿ ಕೊಟ್ಟು Land record of rights ಅಂದರೆ ಗೇಣಿದಾರರ ಹಕ್ಕುಗಳಿಗೆ ಸಂಬಂಧಪಟ್ಟ ಕಾಗದಪತ್ರದ ದಾಖಲೆಗಳನ್ನು ಚೆನ್ನಾಗಿ ಇಟ್ಟಿದ್ದಾರೆ. ಸಾಮಾನ್ಯ ಗೇಣಿದಾರ ಸಂರಕ್ಷಿತ ಗೇಣಿದಾರ ಎಂಬುದನ್ನು ನಿರ್ದಿಷ್ಟಪಡಿಸಿ protected tenant ಅಂದರೆ ಸಂರಕ್ಷಿತ ಗೇಣಿದಾರನಿಗೆ ಈ ಬಗ್ಗೆ ಸರ್ಟಿಫಿಕೇಟ್ ಸಹ ಕೊಡಲಾಗಿದೆ. ಆದ್ದರಿಂದ ರೈತರಿಗೆ ಯಾವದೇತರದ ದ್ರೋಹ ಅಥವಾ ಹಕ್ಕಿಗೆ ಧಕ್ಕೆ ಬಂದಿಲ್ಲ. ಹೀಗೆ ಅಲ್ಲಿ ಇರುವದರಿಂದ ಅವರವರ ಹಕ್ಕುಗಳನ್ನು ಸರಿಯಾಗಿ ಕಾಪಾಡಬೇಕು ಎಂದು ಈ ಮೂಲಕ ನಾನು ಸೂಚನೆಮಾಡುತ್ತೇನೆ.

ಇನ್ನು personal cultivation ಅಂದರೆ ಸ್ವಂತ ಸಾಗುವಳಿಯ ಬಗ್ಗೆ ಸಮಿತಿಯು ವರದಿಯಲ್ಲಿ ಚೆನ್ನಾಗಿ ವಿಮರ್ಶೆಮಾಡಿದ್ದಾರೆ. ಈ ಬಗ್ಗೆ ಪ್ಲ್ಯಾನಿಂಗ್ ಕಮಿಷನ್‌ಅವರು ಸಹ ಸ್ಪಷ್ಟೀಕರಿಸಿದ್ದಾರೆ. "In the case of lands owned by persons suffering from disability such as being a minor, a widow, or an unmarried woman, or a person suffering from physical and mental disability" ಇಂಥವರಿಗೆ exemption ಕೊಡಬೇಕೆಂದು ಸಮಿತಿಯವರು ಶಿಫಾರಸುಮಾಡಿದ್ದಾರೆ. ಇದು ನಮಗೆ ಬಹಳ

ಸಂತೋಷ. ಇನ್ನೊಂದು ವಿಷಯ. ಸ್ವಂತ ಸಾಗುವಳಿ ಎಂಬುದರ ವಿವರಣೆಯಲ್ಲಿ ಮಾಲೀಕನೇ ಆಗಲಿ, ಕೂಲಿಕಾರರನ್ನು ಇಟ್ಟುಕೊಂಡು ಅವರ ಮುಖಾಂತರವಾಗಲಿ ಅಥವಾ ಆತನ ಕುಟುಂಬಕ್ಕೆ ಸೇರಿದವರೊಬ್ಬರಾಗಲಿ ಸಾಗುವಳಿಮಾಡಬಹುದು ಎಂದು ಇದೆ. ಮಾಲೀಕನಾಗಲಿ ಅಥವಾ ಮೇಲ್ವಿಚಾರಣೆ ನಡೆಸುವ ಆತನ ಕುಟುಂಬದವನಾಗಲಿ ಇರಬೇಕಾದ ಹತ್ತಿರದ ಸ್ಥಳವು ಭೂಮಿಯಿಂದ ಹತ್ತು ಮೈಲಿಗಳಿಗಿಂತ ಹೆಚ್ಚು ದೂರದಲ್ಲಿರಬಾರದೆಂದು ಸಮಿತಿಯವರು ಸಲಹೆಮಾಡಿದ್ದಾರೆ. ಹತ್ತು ಮೈಲಿಗಿಂತ ದೂರವಿರಬಾರದು ಎಂದು ಸ್ಪಷ್ಟೀಕರಿಸಿದ್ದಾರೆ. ಆದರೆ ಈ ಹತ್ತು ಮೈಲಿ ಅಂತರದೊಳಗೇ ಇರಬೇಕೆಂಬ ನಿರ್ಬಂಧವು ಅಷ್ಟು ಸೂಕ್ತವಾಗಿಲ್ಲ. ಈ ರೀತಿ ಇರಕೂಡದು ಎಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ. ಮನೆಯ ಯಜಮಾನ, ಅಥವಾ ಅವನ ಸಹೋದರ ಸಹೋದರಿಯರು ಅಥವಾ ಅವನ ಕುಟುಂಬಕ್ಕೆ ಸಂಬಂಧಪಟ್ಟ ಬೇರೆ ಯಾರಾದರೂ ಹಳ್ಳಿಗಳಲ್ಲಿದ್ದು ವಿದ್ಯುಚ್ಛಕ್ತಿಯನ್ನು ಉಪಯೋಗಿಸಿ, ನೀರಾವರಿಯಿಂದ ಬೇಸಾಯಮಾಡಲು ಸೌಕರ್ಯಗಳಿದ್ದಕಡೆ ಭೂಮಿಯನ್ನು ಸಾಗುವಳಿ ಮಾಡುತ್ತ ಇದ್ದರೆ ಅಂಥ ಭೂ ಮಾಲಿಕ ಸ್ವಂತ ಬೇಸಾಯ ಮಾಡುವುದಿಲ್ಲ ಎಂದು ಈ ಕಾನೂನಿನಲ್ಲಿ ಹೇಳಿರುವುದು ಅಷ್ಟು ಸೂಕ್ತವಲ್ಲ. ಮತ್ತು ಒಬ್ಬನೇ ಮನುಷ್ಯ ಒಕ್ಕಲತನಮಾಡಬೇಕು ಎಂದು ಹೇಳುವುದು ಅಷ್ಟು ಸರಿಯಾಗಿಲ್ಲ. ಅಂಥಾ ಭೂಮಿ ಸ್ವಂತ ಸಾಗುವಳಿಯಲ್ಲಿ ಬರುವುದಿಲ್ಲ ಎಂಬುದು ಬಹಳ ತಪ್ಪು ಸೂಚನೆಯಾಗಿರುವುದರಿಂದ ಅದು ಸರಿಯಾಗಿಲ್ಲವೆಂದು ನನ್ನ ಅಭಿಪ್ರಾಯವಾಗಿದೆ. ''ಸ್ವಂತ ಸಾಗುವಳಿ'' ಎಂದರೆ ಎಂಬುದನ್ನು ಸರಿಯಾಗಿ define ಮಾಡಿ ವಿವರಣೆಕೊಡಬೇಕು. ಒಂದು ಕುಟುಂಬಕ್ಕೆ ಸಂಬಂಧಪಟ್ಟವರು ಯಾರಾದರೂ ಒಕ್ಕಲತನಮಾಡುತ್ತಿದ್ದರೆ ಅದು ಸ್ವಂತ ಸಾಗುವಳಿಯಲ್ಲಿ ಬರುತ್ತದೆ ಎಂಬುದಾಗಿ ವಿವರಣೆ ಇರಬೇಕು. ಹಾಗು ಹತ್ತುಮೈಲಿ ಅಂತರದೊಳಗೆ ಇರಬೇಕೆಂಬ ನಿರ್ಬಂಧವನ್ನು ತೆಗೆದುಹಾಕಬೇಕು ಎಂದು ನಾನು ಸಲಹೆಮಾಡುತ್ತೇನೆ.

ಇನ್ನು compensation ಅಂದರೆ, ಪರಿಹಾರ ಕೊಡತಕ್ಕ ವಿಷಯ ವರದಿಯಲ್ಲಿ ಅಷ್ಟು ಸಮರ್ಪಕವಾಗಿಲ್ಲ. ಈಗಾಗಲೇ ಸರ್ಕಾರದವರು ಇನ್‌ಷ್ಯೂರೆನ್ಸ್, ಮೈನ್ಸ್ ಮುಂತಾದವುಗಳನ್ನು nationalise ಅಂದರೆ, ರಾಷ್ಟ್ರೀಕರಣಮಾಡಿ ಅವುಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವಾಗ ಆ ಕಾಲದ ಮಾರ್ಕೆಟ್‌ರೇಟ್‌ನಂತೆ ಬೆಲೆ ಗೊತ್ತುಮಾಡಿ ಪರಿಹಾರ ಕೊಟ್ಟಿದ್ದಾರೆ. ಭೂಮಿಯನ್ನು ವಶಪಡಿಸಿಕೊಳ್ಳುವಾಗ ಪರಿಹಾರವನ್ನು ಕಂತುಗಳಲ್ಲಿ ಕೊಡಬೇಕೆಂದು ಹೀಗೆವರದಿಯಲ್ಲಿ ಹೇಳಿದೆ. ಮಾಡದೆ ಆ ಕಾಲಕ್ಕೆ ಇರುವ ಮಾರ್ಕೆಟ್‌ರೇಟ್ ಪ್ರಕಾರ ನಿರ್ದಿಷ್ಟಪಡಿಸಿ ಪರಿಹಾರವನ್ನು ಒಂದೇ lumpsum ಆಗಿ ಕೊಡಬೇಕು. ಬಾಂಡ್ಸ್ ಮೂಲಕ 20-30 ವರ್ಷಗಳ ಕಂತುಗಳಲ್ಲಿ ಕೊಡದೇಯಿರುವುದು ಉತ್ತಮವೆಂದು ನನಗೆ ಅನಿಸುತ್ತದೆ. ಈಗಾಗಲೇ ನಮ್ಮ ಹೈದ್ರಾಬಾದ್ ಪ್ರದೇಶದಲ್ಲಿ ಎಂಟು-ಹತ್ತು ವರ್ಷಗಳಲ್ಲಿ ಅನೇಕ ಕಡೆಗಳಲ್ಲಿ ಜನರು ಭೂಮಿಯನ್ನು ಖರೀದಿಮಾಡುತ್ತಿದ್ದಾರೆ. ಭೂಮಿಯು ಕೂಡಲೇ ತನ್ನದಾಗಿದೆ ಎಂಬ ಭಾವನೆ ಬಂದು ರೈತನು ಒಕ್ಕಲತನವನ್ನು ಚೆನ್ನಾಗಿಮಾಡಬೇಕು ಎಂಬ ಮನೋಭಾವನೆಯುಂಟಾಗುವಹಾಗೆ ಮಾಡಬೇಕು. 20-30 ವರ್ಷಗಳ ಕಾಲಾವಧಿ ಇದ್ದರೆ ಉತ್ಸಾಹವಿರುವುದಿಲ್ಲ. ಹತ್ತು ವರ್ಷಗಳೊಳಗೆ ಇರುವದಕ್ಕಿಂತ ಎರಡೇ ಕಂತುಗಳಲ್ಲಿ ಹಣ ಕೊಡುವಹಾಗೆ ಅನುಕೂಲ ಮಾಡಿಕೊಡಬೇಕು. ಅಥವಾ ಒಂದೇ lumpsum ಕೊಡಬೇಕೆಂದು ಇರಬೇಕು. ಅಲ್ಲದೆ ಬಾಂಡ್ ರೂಪದಲ್ಲಿ ಕೊಡುವುದರಿಂದ ಏನೂ ಉಪಯೋಗವಾಗುವುದಿಲ್ಲ.

ಇನ್ನು ಮೂಲ ಹಿಡುವಳಿ ಮತ್ತು ಕುಟುಂಬ ಹಿಡುವಳಿ ಹಾಗು ಪರಮಾವಧಿ ಹಿಡುವಳಿ ಈ ವಿಷಯದಲ್ಲಿ 1952-53ನೇ ಸಾಲಿನ ಆಹಾರ ಉತ್ಪತ್ತಿಯ ಅಂಕಿ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಸಮಿತಿಯವರು ವರದಿಮಾಡಿದ್ದಾರೆ. ಹಾಗೆ ಮಾಡುವಾಗ 1952-53ನೇ ಸಾಲಿನಲ್ಲಿ ಆಹಾರಧಾನ್ಯಗಳ ಬೆಲೆ ಏನು ಇತ್ತು ಎಂಬುದನ್ನು ಸೂಚಿಸಿದ್ದರೆ ಚೆನ್ನಾಗಿತ್ತು. ವರದಿಯಲ್ಲಿ ಅದನ್ನು ತಿಳಿಸಿಲ್ಲ, ಆಹಾರಧಾನ್ಯಗಳ ಬೆಲೆ ಯಾವ ಮಟ್ಟಗಲ್ಲಿ ಇದ್ದಿತು ಎಂಬುದನ್ನು ವರದಿಯಲ್ಲಿ ತಿಳಿಸಬೇಕಾಗಿತ್ತು ಎಂಬುದು ನನ್ನ ಅಭಿಪ್ರಾಯವಾಗಿದೆ. ಸೀಲಿಂಗ್ ವಿಷಯವಾಗಿ ಅನೇಕ ಮಾನ್ಯ ಸದಸ್ಯರು ಈಗಾಗಲೇ ಮಾತನಾಡಿ ಅವರು ತಮ್ಮ ಭಾಷಣದಲ್ಲಿ low ceiling ಇದ್ದರೆ ಉತ್ಪತ್ತಿ ಸರಿಯಾಗಿ ಆಗುವುದಿಲ್ಲವೆಂದು ಬೇಕಾದಷ್ಟು ಸಾರೆ ಹೇಳಿದ್ದಾರೆ. ಅದೇ ಅಭಿಪ್ರಾಯವನ್ನು ಪದೇಪದೇ ಹೇಳಲು ನಾನು ಅಪೇಕ್ಷೆಪಡುವುದಿಲ್ಲ.

4-30 P.M.

ಈ ಸೀಲಿಂಗ್ ಹಾಕುವ ಕಾಲದಲ್ಲಿ ಈಗಾಗಲೆ ಒಕ್ಕಲುತನ ಮಾಡುವವರಿಗೆ ಸೀಲಿಂಗ್ ಹಾಕಬಾರದು, ಮುಂದೆ ಮಾಡುವವರಿಗೆ ಸೀಲಿಂಗ್ ಇರಬೇಕು. ಈಗಾಗಲೆ ವ್ಯವಸಾಯಮಾಡುತ್ತಿರುವ ಒಕ್ಕಲಿಗರನ್ನು ಡಿಸ್ಟರ್ಬ್‌ಮಾಡಿದರೆ ಆಹಾರದ ಉತ್ಪತ್ತಿ ಹೆಚ್ಚಲಾರದು. ಆ ಕಾರಣ ಈಗಾಗಲೆ ಪರ್ಸನಲ್ ಕಲ್ಟಿವೇಷನ್ ಮಾಡುವವರಿಗೆ ಈ ಸೀಲಿಂಗ್ ಅನ್ವಯಿಸಬಾರದು ; ಅನ್ವಯಿಸಿದರೆ ಅವರ ಸ್ಟ್ಯಾಂಡರ್ಡ್ ಆಫ್ ಲಿವಿಂಗ್ ಬಹಳ ಕಡಮೆಯಾಗುವುದರಿಂದ ಬಹಳ ಅನ್ಯಾಯವಾಗುತ್ತದೆ. ಒಕ್ಕಲಿಗರಿಗೆ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಲು ಅನುಕೂಲವಿಲ್ಲ. 1,200 ರೂಪಾಯಿಗಳ ಮಿತಿ ಇಡುವುದರಿಂದ ಎಸ್.ಎಸ್.ಎಲ್.ಸಿ.ವರೆಗೆ ಕೂಡ ಮಕ್ಕಳನ್ನು ಓದಿಸಲು ಅವರಿಗೆ ಅವಕಾಶವಾಗುವುದಿಲ್ಲ. ಒಂದುವೇಳೆ ಸೀಲಿಂಗ್ ಹಾಕಿದರೆ ಒಕ್ಕಲಿಗರ ಮಕ್ಕಳಿಗೆ ವಿದ್ಯಾಭ್ಯಾಸ ಸೌಕರ್ಯ ಪುಕ್ಕಟ್ಟೆ ಒದಗಿಸಬೇಕು. ಹಾಗೆ ಮಾಡಿ ಮುಂದೆ ಅವರ ಮಕ್ಕಳುಕೂಡ ವಿದ್ಯಾವಂತರಾಗಿ ಇತರರಂತೆ ಬಾಳಲು ಅವಕಾಶಕೊಡಬೇಕು. ಅವರ ಮಕ್ಕಳು ವಿದ್ಯಾವಂತರಾಗದಿದ್ದರೆ ಮುಂದೆ ಅಸೆಂಬ್ಲಿಗಳಲ್ಲಿ ಅವರಿಗೆ ಪ್ರಾತಿನಿಧ್ಯವಿಲ್ಲದೆಹೋಗುತ್ತದೆ. ಆದ್ದರಿಂದ ಗ್ರಾಮಾಂತರಗಳಲ್ಲಿ ವ್ಯವಸಾಯಮಾಡುವ ಒಕ್ಕಲಿಗರಿಗೆ ಉಚಿತವಾಗಿ ವಿದ್ಯಾಭ್ಯಾಸವನ್ನೊದಗಿಸಿ, ಅವರಿಗೆ ಇಳಿದುಕೊಳ್ಳಲು ಜಾಗಕ್ಕೆ ಮತ್ತು ಊಟಕ್ಕೆ ವಿದ್ಯಾಭ್ಯಾಸ ಮಾಡುವಾಗ ಉಚಿತವಾಗಿ ಏರ್ಪಾಡುಮಾಡಬೇಕು ಅಥವಾ ಫ್ಯಾಮಿಲಿ ಹೋಲ್ಡಿಂಗ್ ಪರಮಾವಧಿಯನ್ನಾದರೂ ಜಾಸ್ತಿಮಾಡಬೇಕು.

ಇನ್ನು exemptions ವಿಚಾರ. ಈ ವಿಷಯದಲ್ಲಿ ಈಗಾಗಲೆ ವರದಿಯಲ್ಲಿ ಟೀ ಮತ್ತು ರಬ್ಬರ್ ಪ್ಲಾಂಟೇಷನ್‌ಗಳಿಗೆ ವಿನಾಯಿತಿ ತೋರಿಸಿದ್ದಾರೆ. ಅದರ ಜೊತೆಗೆ ಕಾಟೇಜ್ ಇಂಡಸ್ಟ್ರೀಸ್ ಇರುವ ಜಾಗ, ಸ್ಮಶಾನಭೂಮಿ, ಕೈಗಾರಿಕಾ ಪ್ರದೇಶವನ್ನೇನು ಒಕ್ಕಲಿಗರು ವ್ಯವಸಾಯಕ್ಕಾಗಿ ಉಪಯೋಗಮಾಡುತ್ತಿದ್ದಾರೆ ಆ ಜಾಗ ಇವಕ್ಕೂ ವಿನಾಯಿತಿಕೊಡಬೇಕು. ಇದು ಆವಶ್ಯಕವಾದ್ದರಿಂದ ಮುಂದೆ ಇವನ್ನು ವಿನಾ

(ಶ್ರೀಮತಿ ಬಸವರಾಜೇಶ್ವರಿ)

ಯಿತಿವಾಡುತ್ತಾರೆಂದು ನಂಬಿ ಆ ಬಗ್ಗೆ ಸೂಚನೆ ಕೊಟ್ಟಿದ್ದೇನೆ.

ಆಮೇಲೆ ಲ್ಯಾಂಡ್ ಕಮಿಷರ್ಷ ವಿಚಾರ. ನಮ್ಮ ಹೈದರಾಬಾದ್ ಪ್ರದೇಶದ ಕಡೆ ಲ್ಯಾಂಡ್ ಕಮಿಷರ್ಷ ನವರು ಬಂಧಿದ್ದೇ ಗೊತ್ತಿಲ್ಲ. ಯಾವಾಗ ಬಂದು ಏನು ಮಾಡಿದರು, ಹೇಗೆ ಭೂಮಿಯ ಬೆಳೆ ಗೊತ್ತುಮಾಡಿದರು ಎಂಬುದು ತಿಳಿಯದು. ಈ ತರಹ ಯಾರಿಗೂ ತಿಳಿಯದಂತೆ ಕೆಲಸವಾಗಬಾರದು. ಎಲ್ಲಾಕಡೆಗೂ ಹೋಗಿ ಜನರಿಗೆ ತಿಳಿಸಿ ಎಲ್ಲರಿಗೂ ಭೂಮಿಯ ಉತ್ಪನ್ನವನ್ನು ನಿರ್ದಿಷ್ಟವಾಗಿ ನ್ಯಾಯ ರೀತಿಯಲ್ಲಿ ಸೂಚನೆ ಕೊಡುವುದು ಸೂಕ್ತವೆಂದು ನಾನು ಅಭಿಪ್ರಾಯ ಪಡುತ್ತೇನೆ.

ಈಗ ತಂದಿರತಕ್ಕಂಥ ವರದಿ ಕೇವಲ ಒಕ್ಕಲಿಗರಿಗೆ, ಅಗ್ರಿಕಲ್ಚರಲ್ ಸೆಕ್ಟಾರ್‌ಗೆ ಮಾತ್ರ ಅನ್ವಯಿಸಿದೆ. ಇದರಿಂದ ಬಹು ಜನರಿಗೆ ಹಾನಿಯಿದೆ. ಸಮಾಜವಾದೀ ಸಮಾಜ ರಚಿಸುವುದಾದರೆ ಎಕನಾಮಿಕ್ ಸೀಲಿಂಗ್ ಹಾಕುವಾಗ ಪ್ರತಿಯೊಂದು ಸೆಕ್ಟಾರ್‌ಗೂ ಹಾಕಬೇಕು. ಇಲ್ಲದಿದ್ದರೆ ಉತ್ಪತ್ತಿ ಹೆಚ್ಚುವುದಿಲ್ಲ. ಆದ್ದರಿಂದ ಪ್ರತಿಯೊಂದು ಸೆಕ್ಟಾರ್‌ಗೂ ಸೀಲಿಂಗ್ ಹಾಕುವುದಕ್ಕೆ ಪ್ರಯತ್ನ ಮಾಡಬೇಕೆಂದು ಸೂಚನೆ ಮಾಡುತ್ತೇನೆ.

ಕಡೆಯದಾಗಿ, ಟೆನೆಂಟ್ಸ್ ಲಿಟಿಗೇಷನ್ ಕೇಸುಗಳು ಅಸಿಸ್ಟೆಂಟ್ ಕಮಿಷನರು ಮತ್ತು ಅಮಲ್ದಾರರುಗಳಿಂದ ವಿಚಾರಣೆ ಮಾಡಲ್ಪಡಬೇಕು ಆದಷ್ಟು ಅವು ಆಯಾ ಜಿಲ್ಲೆಗಳಲ್ಲೇ ವಿಚಾರಣೆಗೊಳಪಡಬೇಕು. ಟ್ರಿಬ್ಯೂನಲ್ ಮಾಡಿದರೆ ಹಣ ಹೆಚ್ಚು ಬೇಕಾಗುತ್ತದೆ. ಆದ್ದರಿಂದ ಆ ಕೇಸುಗಳು ಜಿಲ್ಲೆಗಳಲ್ಲೆ ಇತ್ಯರ್ಥ ಮಾಡಬೇಕೆಂದು ಸೂಚಿಸುತ್ತೇನೆ.

ಇಷ್ಟು ಸೂಚನೆಮಾಡಿ ಆಹಾರದ ಉತ್ಪನ್ನ ಮಾಡುವುದು ಕಷ್ಟಕರ, ಆದಷ್ಟು ಎಲ್ಲರ ಸಲಹೆಗಳನ್ನೂ ಕೂಲಂಕಷವಾಗಿ ಪರಿಶೀಲಿಸಿ ಯಾರಿಗೂ ತೊಂದರೆಯಾಗದ ಹಾಗೆ ಈ ಸಂಬಂಧವಾದ ಕಾನೂನನ್ನು ಜಾರಿಗೆ ತರುತ್ತೀರಿ ಎಂದು ನಂಬಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ, ಸಾಮಾನ್ಯವಾಗಿ ಬಹಳ ಕಾಲದಿಂದ ಚುನಾವಣಾ ಕಾಲದಲ್ಲಿ ಪ್ರಚಾರ ಘೋಷಣೆ ನಡೆಯುವಾಗ ರೈತರು ಉಪಯೋಗಿಸುವ ನೇಗಿಲು, ಗುದ್ದಲಿ ಮುಂತಾದುವುಗಳ ಗುರುತನ್ನು ಹಾಕಿಕೊಂಡು ಭೂಸುಧಾರಣೆ ಮಾಡುತ್ತೇವೆಂದು ಹೇಳುವುದನ್ನು ನಾವು ಕೇಳುತ್ತಿದ್ದೇವೆ. ಇದನ್ನು ನೋಡಿದರೆ ಹಾವುಗಳನ್ನು ಬಿಡುವುದಕ್ಕೆ ಮುಂಚೆ ನರಿ ಬಿಡುವ ಹಾಗಿದೆ. ಇದುವರೆಗಾಗಲೆ ಮೂರು ನಾಲ್ಕು ಸಮಿತಿಗಳನ್ನು ಮಾಡಿ ರೈತರ ಹಣ ಖರ್ಚುಮಾಡಿದರೇ ವಿನಾ ಆ ಸಮಿತಿಗಳು ಒಪ್ಪಿಸಿದ ವರದಿಯನ್ನು ಕಾರ್ಯಗತ ಮಾಡಲಿಲ್ಲ. ಸಮಿತಿಗಳನ್ನು ಮಾಡುವ ಉದ್ದೇಶ ತಮ್ಮವರ ಅಧಿಕಾರ ಸ್ಥಿರವಾಗಿ ನಿಲ್ಲಬೇಕು, ಈಗ ಅಧಿಕಾರದಲ್ಲಿರುವವರು ಹೈದರಾಬಾದು, ಬಿಜಾಪುರ ಮುಂತಾದ ಕಡೆಗಳಲ್ಲಿ ತಿರುಗಾಡಿ ಬ್ಯಾಟಾ ಗಿಟ್ಟಿಸಿಕೊಳ್ಳಬೇಕು ಎಂದು ರೈತರ ಹಣ ಖರ್ಚುಮಾಡುವುದೇ ಆಗಿದೆ. ಹಿಂದೆ ರಚಿಸಿದ ಸಮಿತಿಗಳ ವರದಿಯಲ್ಲಿ ಒಂದನ್ನಾದರೂ ಕಾರ್ಯಗತ ಮಾಡಿದ್ದಾರೆಯೇ? ಧೈರ್ಯವಿದ್ದರೆ ಹೇಳಲಿ ಎಂದು ನಾನು ಸವಾಲು ಹಾಕುತ್ತೇನೆ. ಈಗ ಗುಂಡಪ್ಪಗೌಡರ ಸಮಿತಿ ವರದಿಯಿದೆ. ಕುಮಾರಪ್ಪನವರ ಸಮಿತಿ ವರದಿಯಿದೆ, ಆದರ ಜೊತೆಗೆ ಜತ್ತಿ ಸಮಿತಿ ವರದಿ ಬಂದಿದೆ. ಇದರಲ್ಲಿ ಬೇಕಾದರೆ ಕೆಲವು ಬದಲಾವಣೆ ಮಾಡಿ ಜಾರಿಗೆ ತಂದರೆ ಬಹಳ ಸಂತೋಷ. ಹಾಗಿಲ್ಲದೆ ನಮಗೆ ಮುಂದೆ ಚುನಾವಣೆಗೆ ನಿಂತಾಗ ಓಟು ಸಿಕ್ಕುವುದಿಲ್ಲ ಓಟು ಪಡೆದು ಮುಂದೆ ಅಧಿಕಾರಕ್ಕೆ ಬರಬೇಕಾದರೆ ಇದೆಲ್ಲಾ ಇರಬೇಕು ಎಂದು ಸಮಿತಿಗಳನ್ನು ರಚಿಸಿದರೆ ಪ್ರಯೋಜನವೇನು? ಒಂದು ಪಕ್ಷದ ಜನರಿಗೆ ಮಾತ್ರ ಅನುಕೂಲವಾಗಬೇಕೆಂದು ಅನುಸರಿಸುವ ನೀತಿಯನ್ನು ಇನ್ನು ಮುಂದಾದರೂ ತೊರೆದು ಈಗ ನಮ್ಮ ಮುಂದಿರುವ ವರದಿಯನ್ನು ಕಾರ್ಯಗತ ಮಾಡುತ್ತಾರೆಂದು ನಂಬಿದ್ದೇನೆ.

ಟೆನೆನ್ಸಿ ಆಕ್ಟ್ ಜಾರಿಯಾಗಿ ಐದಾರು ವರ್ಷಗಳಾದವು. ವ್ಯವಸಾಯ ಮಾಡುತ್ತಿದ್ದ ರೈತರನ್ನು ಈ ದಿವಸ ಜಮೀನು ಬಿಡಿಸಿ ಓಡಿಸುತ್ತಿದ್ದಾರೆ. ರೈತರು ವಿದ್ಯಾವಂತರಲ್ಲ. ಅವರು ಪಾವತಿ ಮಾಡುವ ಹಣ, ಗುತ್ತಿಗೆ ವಗೈರೆಗೆ ಅವರಲ್ಲಿ ರಸೀತಿಯಿರುವುದಿಲ್ಲ. ದೊಡ್ಡ ದೊಡ್ಡ ಜಮೀನುದಾರರು ತಮ್ಮ ಹಿತ ರಕ್ಷಿಸಿಕೊಳ್ಳಲು ರೈತರಿಗೆ ಕಿರುಕುಳ ಕೊಡುತ್ತಿದ್ದಾರೆ. ರೈತರಿಗೆ ನೀರಿನ ವಸತಿಯನ್ನೊದಗಿಸುತ್ತಿಲ್ಲ, ಕೆರೆ, ಬಾವಿ ರಿಪೇರಿ ಮಾಡಿಸುವುದಿಲ್ಲ, ರಸ್ತೆ ಸೌಕರ್ಯ ಮಾಡಿಕೊಡುವುದಿಲ್ಲ. ಹೀಗೆ ತೊಂದರೆ ಮಾಡಿ ಜಮೀನು ಗೇಣಿಗೆ ಮಾಡುವವರನ್ನು ಬಿಡಿಸುತ್ತಿದ್ದಾರೆ. ಹೀಗಿರುವಾಗ ಈಗಲಾದರೂ ಭೂಸುಧಾರಣಾ ಕಾನೂನನ್ನು ನಿಜವಾಗಿಯೂ ಜಾರಿಗೆ ತರುತ್ತೀರಾ? ಮಾಗೆ ಮಾಡದವರು ಗುಡಾಣ ಮಾಡುವರೆ ಎಂಬಂತೆ ಸರ್ಕಾರದ ನೀತಿಯನ್ನು ನೋಡಿದರೆ ಯಾವುದೂ ಭರವಸೆಯಿಲ್ಲ. ಚಿಕ್ಕದನ್ನೇ ಮಾಡದೆ ದೊಡ್ಡದು ಮಾಡುತ್ತಾರೆಂದು ಹೇಗೆ ನಂಬುವುದು? ಇನಾಂತಿ ರದ್ದು ಮಾಡುವ ಆಕ್ಟನ್ನು ಜಾರಿಗೆ ತಂದು ಐದಾರು ವರ್ಷಗಳಾದರೂ ಸಹ ಇನ್ನೂ ಅದರಂತೆ ಸರಿಯಾಗಿ ಕ್ರಮಕೈಕೊಂಡಿಲ್ಲ. ಇದರಿಂದ ಈ ದಿವಸ ಇನಾಂದಾರರು ತಮ್ಮ ಜಮೀನುಗಳನ್ನು ಐದಾರು ಸಾವಿರ ರೂಪಾಯಿಗಳಿಗೆ ಯಾರಿಗಾದರೂ ಮಾರಿ ರೈತರನ್ನು ಜಮೀನು ಬಿಡಿಸಿ ಓಡಿಸುತ್ತಿದ್ದಾರೆ. ಹಾಗಿರುವಾಗ ಈಗ ನಮ್ಮ ಮುಂದಿರುವ ವರದಿಯಂತೆ ಭೂ ಸುಧಾರಣೆ ಜಾರಿಗೆ ತರುತ್ತೇವೆಂದು ನಂಬುವುದಾದರೂ ಹೇಗೆ? ಭೂಸುಧಾರಣೆ ಜಾರಿಗೆ ತರುತ್ತೇವೆ, ಸಮಾಜವಾದದ ಮಾದರಿ ಸಮಾಜ ರಚಿಸುತ್ತೇವೆ, ಎಲ್ಲ ವರ್ಗಗಳಿಗೂ ಸಮಾನವಾದ ಹಕ್ಕನ್ನು ಕೊಡುತ್ತೇವೆ ಎಂದು ಹೇಳುವಾಗ ಒಬ್ಬನಿಗೆ ಹತ್ತು ರೂಪಾಯಿ ಸಂಬಳ ಇನ್ನೊಬ್ಬನಿಗೆ ಮೂರು ಸಾವಿರ ರೂಪಾಯಿ ಕೊಡುತ್ತಿದ್ದೀರಿ? ಇದು ಸರ್ಕಾರದ ನೀತಿಗನುಗುಣವಾಗಿದೆಯೆ? ತಮ್ಮ ನೀತಿ ಬಂಡವಾಳ ಶಾಹಿಗಳಿಗೆ ಅನುಕೂಲವಾಗಿದೆ. ಆಫೀಸುಗಳ ಹತ್ತಿರ ನೋಡಿದರೆ ತಮ್ಮ ಪಕ್ಷದ ನೂರಾರು ಕಾರುಗಳು ಬಂದು ನಿಂತಿರುತ್ತವೆ. ತಮ್ಮ ನೀತಿಗೆ ಇದೊಂದೇ ನಿದರ್ಶನ ಸಾಕು. ರೈತರಿಗೆ ನಿಜವಾಗಿಯೂ ಉಪಕಾರ ಮಾಡಬೇಕೆಂಬ ಘನೋದ್ದೇಶವಿದ್ದರೆ ಆದಷ್ಟು ಶೀಘ್ರವಾಗಿ ಒಂದು ಸುಲಲಿತವಾದ ಭೂಸುಧಾರಣಾ ಕಾನೂನನ್ನು ಜಾರಿಗೆ ತರುವುದು ಅವಶ್ಯಕ.

ಈಗ ವ್ಯವಸಾಯ ಕ್ಷೇತ್ರದಲ್ಲಿ ಭೂಸುಧಾರಣೆಯನ್ನು ಜಾರಿಗೆ ತಂದು, ಈ ವರದಿಯಲ್ಲಿರುವ ಸಲಹೆಗಳ ಪ್ರಕಾರ ಭೂಮಿಯನ್ನು ಹಂಚಿಕೆ ಮಾಡಿದರೆ ಆಹಾರದ ವಿಷಯದಲ್ಲಿ ಹೆಚ್ಚಿಗೆ ಉತ್ಪತ್ತಿಯಾಗುತ್ತದೆಂದು ತಿಳಿಯುತಕ್ಕದ್ದು ಮೂಢತನ. ಕೆಟ್ಟು ಪಟ್ಟಣ ಸೇರು ಎಂದು ಹೇಳುವಂತೆ ಹಳ್ಳಿಯಲ್ಲಿ ಜೀವನಕ್ಕೆ ಕಷ್ಟ

ವಾದರೆ ಪಟ್ಟಣವನ್ನು ಸೇರಿ ಬೀಡಿ, ಸಿಗರೇಟು ಅಂಗಡಿ ಇಟ್ಟುಕೊಂಡರೆ ಅವನು ಸುಖವಾಗಿ ಜೀವನ ಮಾಡಬಹುದು. ಆದರೆ ಹಳ್ಳಿಯಲ್ಲಿ 25 ಎಕರೆ ಜಮೀನಿರುವ ರೈತನಿಗೆ ಹೊತ್ತಿಗೆ ಊಟಕ್ಕಿಲ್ಲ, ಹಾಕಲು ಬಟ್ಟೆ ಇಲ್ಲ ಎಂಬುದನ್ನು ತಾವೆಲ್ಲ ಮನಗಂಡಿದ್ದೀರಿ. ಈಗ ವ್ಯವಸಾಯಗಾರರ ಮೇಲೆ ಹಾಕಬೇಕೆಂದಿರುವ ಪರಿಮಿತಿಯನ್ನು ಆದಷ್ಟು ಜಾಗ್ರತೆಯಾಗಿ ಎಲ್ಲ ಕ್ಷೇತ್ರಗಳಲ್ಲಿಯೂ ಜಾರಿಗೆ ತಂದು socialistic pattern ಎಂದು ಮಾಡದೆ, ನಿಜವಾದ socialisn ಜಾರಿಗೆ ತರುತ್ತೀರೆಂದು ನಾನು ತಿಳಿದಿದ್ದೇನೆ. ಜಮೀನ್ದಾರನೊಬ್ಬನಿಗೇ ಈ ಪರಿಮಿತಿಯನ್ನು ಹಾಕುವುದರಿಂದ ಏನಾಗುತ್ತದೆಂದರೆ ಈಗ ಯಾರು ಶ್ರೀಮಂತರಾಗಿದ್ದಾರೆ, ಯಾರು ಮನೆಗಳನ್ನು ಹೊಂದಿ ಬಾಡಿಗೆಯನ್ನು ತೆಗೆದುಕೊಳ್ಳುತ್ತಿದ್ದಾರೆ, ಬಸ್ ಮಾಲೀಕರು, ವ್ಯಾಪಾರದಲ್ಲಿರುವವರು, ಉದ್ಯೋಗಗಳಲ್ಲಿರುವವರು, ಇಂಥವರಿಗೆ ಬಹಳ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಇವರುಗಳ ಮಕ್ಕಳೇ ವಿದ್ಯಾವಂತರಾಗಿ ರೈತರ ಮಕ್ಕಳಿಗೆ ಅನಾನುಕೂಲವಾಗದಂತೆ ಕಾನೂನನ್ನು ಮಾಡಬೇಕಾದುದು ಸರ್ಕಾರದ ಕರ್ತವ್ಯ. ನೂರಕ್ಕೆ ಎಂಭತ್ತು ಜನವಿರತಕ್ಕ ರೈತಾಪಿವರ್ಗದವರಿಗೆ ಅನುಕೂಲವಾಗುವಂಥ ಕಾನೂನನ್ನು ಆದಷ್ಟು ಜಾಗ್ರತೆಜಾರಿಗೆ ತರುತ್ತೀರೆಂದು ನಂಬಿ ನನ್ನ ಮಾತುಗಳನ್ನು ಮುಕ್ತಾಯಮಾಡುತ್ತೇನೆ.

ಶ್ರೀಮತಿ ನಾಗರತ್ನಮ್ಮ (ಗಾಂಧಿನಗರ).—ಮಾನ್ಯ ಅಧ್ಯಕ್ಷರೇ, ಎರಡುಕೋಟಿ ಕನ್ನಡಿಗರ ಭವಿತವ್ಯದ ಆಗುಹೋಗುಗಳನ್ನು ನಿರ್ಣಯಿಸುವ ಈ ಭೂಸುಧಾರಣಾ ಕಾನೂನುರಚನೆಯ ಬಗ್ಗೆ ದೇಶಕ್ಕೆ ದೇಶವೇ ಇಂದು ಈ ಸಭೆಯ ನಿರ್ಣಯವನ್ನು ಎಚ್ಚರಿಕೆಯಿಂದ ನೋಡುತ್ತಿದೆ. ಇಂತಹ ರಾಷ್ಟ್ರೀಯ ಪ್ರಶ್ನೆಯನ್ನು ಸುಭದ್ರ ಕಾನೂನಿನಿಂದ, ಜನಹಿತಕರವಾಗಿ ಚಿರಸ್ಥಾಯಿಯಾಗಿರುವಂತೆ ಮಾಡುವ ದೃಷ್ಟಿಯಿಂದ ನಾವು ಇದನ್ನು ನೋಡಬೇಕಾಗಿದೆ. ಈ ದೃಷ್ಟಿಯಿಂದ ನೋಡಿದರೆ ಸಮಸ್ಯೆಯ ಪರಿಹಾರಕ್ಕೆ ನೆರವು ತೋರಿಸಿದೆಯೇ ಹೊರತು ಸಮಿತಿಯು ನಿರ್ಣಯಾತ್ಮಕ ಕಾನೂನಾಗಲು ಸಾಕಷ್ಟು ಸಲಹೆಗಳನ್ನು ಕೊಟ್ಟಿಲ್ಲವೆಂದು ನಾನು ಭಾವಿಸುತ್ತೇನೆ. ಭೂಸುಧಾರಣೆಯಲ್ಲಿ ಎರಡು ತತ್ತ್ವಗಳು ಅಡಕವಾಗಿವೆ; ಒಂದು ಭೂಮಿ ಇಲ್ಲದವರಿಗೆ ಭೂಮಿಯನ್ನು ಒದಗಿಸುವುದು. ಎರಡು ಹೆಚ್ಚುಬೆಳೆ ಬೆಳೆಯುವಂತೆ ಕೃಷಿಕರನ್ನು ನಿರ್ಮಾಣಮಾಡುವುದು, ಹೀಗೆ ಎರಡು ದೃಷ್ಟಿಗಳಿಂದ ನಾವು ಈ ತತ್ತ್ವವನ್ನು ವಿಮರ್ಶಿಸಬೇಕಾಗಿದೆ. ''ಉಳುವವನೇ ಭೂಮಿಯ ಒಡೆಯ'' ಎಂಬ ಆಕರ್ಷಣೀಯ ಶಬ್ದಗಳನ್ನು ಕೇಳಿ ನಾವು ಮೋಸಹೋಗಬೇಕಾಗಿಲ್ಲ. ಈ ಘೋಷಣೆ ಅಂಗೈಯಲ್ಲಿ ವೈಕುಂಠ ತೋರಿಸುವಂತೆ ಬಹಳ ಚಮತ್ಕಾರವಾಗಿದೆಯೇ ಹೊರತು ಕಾರ್ಯಕಾರಿಯಾಗತಕ್ಕದ್ದಲ್ಲ. ಪರಿಣಾಮಕಾರಿಯಾದ್ದಲ್ಲ. ಜತ್ತಿಸಮಿತಿಯವರು ಸೂಚಿಸಿರುವ 1200ರೂಪಾಯಿಗಳ ವಾರ್ಷಿಕಾದಾಯದ ಸ್ವಂತ ವ್ಯವಸಾಯ ಸಲಹೆಯು ಯುಕ್ತವಾಗಿಲ್ಲ. ಒಪ್ಪತಕ್ಕದ್ದಲ್ಲ. ಜೀವನ ಸಮಸ್ಯೆಗಳು ಕಠಿಣವಾಗುತ್ತಿರುವ ಈ ಕಾಲದಲ್ಲಿ ಈ ಕಾನೂನಿನಿಂದ ರೈತನಿಗೆ ಕಷ್ಟನಷ್ಟಗಳು ಹೆಚ್ಚಿ ಬಡತನಕ್ಕೆ ದಾರಿಯಾಗುವುದೇ ಹೊರತು ಮತ್ತೇನೂ ಉಪಯೋಗವಿಲ್ಲ. ಸಮಿತಿಯವರು ಕಷ್ಟನಷ್ಟಗಳ ಆಳವನ್ನು ಅಳೆಯದೆ ಬಡತನದ ಬೆಲೆಯನ್ನು ಕಟ್ಟದೆ, 1200 ರೂಪಾಯಿಗಳ ವಾರ್ಷಿಕಾದಾಯ ಸಾಕೆಂದಿರುವುದು ತುಂಬಾ ಅನ್ಯಾಯ. ಸಮಿತಿಯವರು ಸೂಚಿಸಿರುವ ಈ ಮಿತಿ ಕನಿಷ್ಟ 1500 ರೂಗಳ ಮೇಲ್ಪಟ್ಟು ಎರಡುಸಾವಿರ ರೂಪಾಯಿಗಳವರೆಗೆ ವಾರ್ಷಿಕಾದಾಯವಿದ್ದರೆ ಯುಕ್ತವೆಂದು ನನ್ನ ಭಾವನೆ. ಅವಿಭಕ್ತಕುಟುಂಬಗಳ ಬಗ್ಗೆ ಇತಿಮಿತಿಗಳನ್ನು ನಿರ್ಣಯಿಸುವಾಗ ತುಂಬಾ ಉದಾರತೆ ಇರಬೇಕಾಗುವುದು. ಪಟ್ಟಣದಲ್ಲಿ ತಿಂಗಳಿಗೆ ಸಾವಿರಾರು ರೂಪಾಯಿ ಮನೆಬಾಡಿಗೆ ಬರುವವರಿಗಿರುವ ಸ್ವಾತಂತ್ರ್ಯದ ಭೋಗದಲ್ಲಿ ಹಳ್ಳಿಯವರಿಗೆ ಒಂದಾಣೆ ಭಾಗವನ್ನಾದರೂ ಇರಲೆಂಬ ಕನಿಕರ ತೋರಿಸುವ ಮನಸ್ಸನ್ನು ಸಮಿತಿಯವರು ಮಾಡಿಲ್ಲ. ಐದು-ಆರು ಜನ ಅಣ್ಣ ತಮ್ಮಂದಿರಿರುವ ಸಂಸಾರಕ್ಕೆ ಜಮೀನು ಇಂತಿಷ್ಟೇ ಇರಬೇಕು, ಅವಿಭಕ್ತ ಕುಟುಂಬವು ಸುಖವಾಗಿ ಜೀವಿಸುವುದಕ್ಕೆ ಅವಕಾಶವಿರುವಷ್ಟು ಭೂಮಿಯ ಮಿತಿಯನ್ನು ಗೊತ್ತುಮಾಡಬೇಕು.

ರೈತನನ್ನು ಒಡೆಯನ ಮೇಲೆ, ಒಡೆಯನನ್ನು ರೈತನ ಮೇಲೆ ಎತ್ತಿಕಟ್ಟಿ ವಿಭಾಗಿಸಿ ಆಳುವ ಕಾನೂನು ರಚನೆಗಳನ್ನು ನಾವು ಮಾಡಿದ್ದಾದರೆ ತುಂಬಾ ತೊಡಕಿಗೆ ಸಿಕ್ಕಿಕೊಳ್ಳಬೇಕಾಗುತ್ತದೆ. ಪರಿಮಿತಿಯನ್ನು ಗೊತ್ತುಮಾಡುವಾಗ ತರಿ, ಖುಷ್ಕಿ ಮತ್ತು ಬಾಗಾಯಿತು ಇತ್ಯಾದಿ ದೃಷ್ಟಿಗಳ ಮೇಲೆ ಅನ್ಯಾಯವಾಗದ ರೀತಿಯಲ್ಲಿ ಪರಿಮಿತಿಯನ್ನು ಗೊತ್ತುಮಾಡಬೇಕು. ಈ ಪರಿಮಿತಿಗೆ ಕಾಫಿ ತೋಟಗಳು, ಟೀ ತೋಟಗಳು, ತೆಂಗಿನ ತೋಟಗಳು, ವಗೈರೆ ಎಸ್ಟೇಟುಗಳ ಲೆಖ್ಖಾಚಾರವನ್ನೇ ಸಮಿತಿಯವರು ಗಮನಿಸದಿರುವುದು ತುಂಬಾ ವಿಷಾದಕರ. ಅವರಿಗೇಕೆ ದಯಾದಾಕ್ಷಿಣ್ಯ? ಅವರನ್ನೂ ಭೂಸುಧಾರಣಾ ಕಾನೂನಿಗೆ ಒಳಪಡಿಸಲೇಬೇಕು.

ಸ್ವಂತವ್ಯವಸಾಯ ಮಾಡುವ ಭೂಮಾಲಿಕರಿಗೆ ಸಮಿತಿಯು ಹೆಚ್ಚು ಸಹಾಯಮಾಡಿಲ್ಲ, ಸಮಿತಿಯವರು ಸೂಚಿಸಿರುವ ನಾಲ್ಕನೇ ಒಂದು ಭಾಗ ಗೇಣಿ ನಿರ್ಣಯ ನ್ಯಾಯವಾದ್ದಲ್ಲ. ಖರ್ಚುಕಳೆದು ಉಳಿದದ್ದರಲ್ಲಿ ಸಮಭಾಗ ರೈತನಿಗೂ ಒಡೆಯನಿಗೂ ಬರುವಂತಿರಬೇಕು. ವ್ಯವಸಾಯದಲ್ಲಿ ನಿರ್ಲಕ್ಷ್ಯಮಾಡುವ ಗೇಣಿದಾರನನ್ನು ತಪ್ಪಿಸುವ ಅಧಿಕಾರ ನಿರ್ದಿಷ್ಟವಾಗಬೇಕು. ಐದು ವರ್ಷ ಸರಿಯಾಗಿ ಮಾಡದಿದ್ದರೆ ತಪ್ಪಿಸಿ ಬೇರೆಯವರಿಗೆ ಕೊಡುವಂತಿರಬೇಕು. ''ಕತ್ತಿ ಹಿಡಿದವರೆಲ್ಲ ಸಿಪಾಯಿಗಳಲ್ಲವೆಂಬಂತೆ'' ಜಮೀನಿನಲ್ಲಿ ಕೆಲಸಮಾಡುವವರೆಲ್ಲ ರೈತರಾಗುವುದಿಲ್ಲ. ವ್ಯವಸಾಯದಲ್ಲಿ ಆಸಕ್ತಿ ಇದ್ದು ಹೆಚ್ಚು ಬೆಳೆಯನ್ನು ಬೆಳೆಯಲು ಛಾತಿ ಇರತಕ್ಕವರೇ ಸರಿಯಾದ ರೈತರು. ಇಂಥವರಿಗೆ ಮಾತ್ರ ಗೇಣಿದಾರರಾಗುವ ಅವಕಾಶವಿರಬೇಕು. ಒಂದು ಅವಿಭಕ್ತ ಕುಟುಂಬಕ್ಕೆ ಕನಿಷ್ಟ 25 ಎಕರೆ ತರಿಜಮೀನು 100 ಎಕರೆ ಖುಷ್ಕಿ ಜಮೀನು ಪರಮಾವಧಿ ಮಿತಿಯಾಗಿರಬೇಕೆಂಬುದು ನನ್ನ ಅಭಿಪ್ರಾಯ. ಈ ಪರಿಮಿತಿಯನ್ನು ಎಕರೆಗಳ ಮೇಲೆ ನಿರ್ಣಯಿಸಬೇಕೇ ಹೊರತು ಉತ್ಪನ್ನದ ಮೇಲೆ ಮಾಡಬಾರದು.

ಜಮೀನು ಮಾರಾಟ ಮಾಡುವ ಭೂಮಾಲೀಕನಿಗೆ ಪರಿಹಾರ ಕೊಡುವ ಮತ್ತು ಜಮೀನು ವರ್ಗಾವರ್ಗಿ ಮಾಡುವ ವಿಚಾರಗಳಲ್ಲಿ ಬಹಳ ತೊಡಕಿರುವುದರಿಂದ ಈ ಬಗ್ಗೆ ಸಮಿತಿ ನಿರ್ಣಯಾತ್ಮಕ ಸಲಹೆಗಳನ್ನೇನೂ ಕೊಟ್ಟಿಲ್ಲ. ಪರಿಮಿತಿಗಿಂತ ಹೆಚ್ಚಿಗೆ ಇರುವ ಜಮೀನನ್ನು ಮಾರಾಟಮಾಡಬೇಕಾದರೆ ಆ ಜಮೀನನ್ನು ಮಾಡುವ ರೈತನಿಗೇ ಅದನ್ನು ಕೊಡುವಂತೆ ಇರಬೇಕು. ವಾರ್ಷಿಕ ಉತ್ಪನ್ನದ ಅಂದಾಜಿನ ಮೇಲೆ ಭೂಮಿಯ ಬೆಲೆ ನಿರ್ಣಯಿಸಲ್ಪಡಬೇಕು. ಹೀಗೆ ಐದು ವರ್ಷದ ಅವಧಿಯಲ್ಲಿ ಸರಿಯಾಗಿ ಸಾಗುವಳಿ ಮಾಡದೆಇದ್ದರೆ ಅ ಭೂಮಿಯು ಮಾಲೀಕನಿಗೆ ವಾಪಸು ಹೋಗಬೇಕು. ಹೆಚ್ಚು

(ಶ್ರೀಮತಿ ನಾಗರತ್ನಮ್ಮ)

ಭೂಮಿ ಇದ್ದವರು ಭೂಮಿಯನ್ನು ಮಾರಾಟಮಾಡಿದಾಗ ಅದರ ಬೆಲೆಯು ಅರ್ಧವನ್ನು, ಮುಂಗಡವಾಗಿಯೂ ಮತ್ತು ಉಳಿದರ್ಧವನ್ನು ಕಂತುಗಳ ಮೂಲಕ ಕೊಡುವಂತೆಯೂ ಕಾನೂನು ರಚಿಸಲ್ಪಡಬೇಕು. ಪೂರ್ಣಹಣ ಪಾವತಿಯಾಗಲು ಕಾನೂನಿನ ರಕ್ಷಣೆ ಇರಬೇಕು. ಹೀಗೆ ರೈತ, ಮಾಲಿಕ, ಇವರಲ್ಲಿ ಯಾರಿಗೂ ಕೂಡ ಅನ್ಯಾಯವಾಗದಂತೆ ಕಾನೂನು ರಚಿಸಲ್ಪಡಬೇಕಾಗಿರುವುದರಿಂದ ಸ್ವಲ್ಪ ದಿವಸ ತಡವಾದರೂ ಚಿಂತೆಯಿಲ್ಲ—ಈಗಾಗಲೇ ತಡವಾಗಿದೆ—ದೂರದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ ಯೋಚಿಸಿ ಜನತೆಯ ಅಭಿಪ್ರಾಯಕ್ಕೂ ಮನ್ನಣೆ ಕೊಟ್ಟು ಕಾನೂನು ರಚಿಸಲ್ಪಡಲಿ. ಇದಕ್ಕೆ ಸಮಿತಿಯ ವರದಿಯಲ್ಲಿರುವ ಅಂಗೀಕಾರಾರ್ಹ ವಿಷಯಗಳಿಗೆ ಮಾತ್ರ ವಿಧಾನ ಸಭೆಯ ಒಪ್ಪಿಗೆ ದೊರೆಯಲೆಂದು ಹಾರೈಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜಿ. ಶಿವಪ್ಪ (ಚಿತ್ರದುರ್ಗ).—ಸ್ವಾಮಿ, ಭೂಸುಧಾರಣೆ ವಿಚಾರವಾಗಿ ನಾಲ್ಕು ಮಾತುಗಳನ್ನು ಆಡಬೇಕೆಂದು ಅಪೇಕ್ಷೆ ಪಡುತ್ತೇನೆ. ಭೂಸುಧಾರಣೆ ಆಗಬೇಕು ಎಂದು ಮೊದಲಿನಿಂದಲೂ ಹೇಳುತ್ತಿರುವ ಪೈಕಿ ನಾನೂ ಒಬ್ಬ. ಅದು ನ್ಯಾಯವಾದ ರೀತಿಯಲ್ಲಿ, ಎಲ್ಲರಿಗೂ ಅನುಕೂಲವಾಗತಕ್ಕ ರೀತಿಯಲ್ಲಿ ಆಗಬೇಕಾಗಿದೆ. ಶ್ರೀಮತಿ ನಾಗರತ್ನಮ್ಮನವರು ಈಗ ನಾಲ್ಕು ಮಾತುಗಳನ್ನು ಆಡಿದ್ದಾರೆ. ಅವರಿಂದ ಕೆಲವು ವಿಷಯಗಳು ಬಂದುದನ್ನು ಕೇಳಿ ಬಹಳ ಸಂತೋಷವಾಯಿತು. ಅವರು ಸ್ಥೂಲವಾಗಿ ನಾನು ಹೇಳತಕ್ಕ ಅಂಶಗಳನ್ನೆಲ್ಲ ಹೇಳಿದರು. ಸ್ತ್ರೀಯರಿಂದ ಇಂಥ ಭಾಷಣವನ್ನು ಕೇಳಿದ ಮೇಲೆ ಕುಳಿತುಕೊಂಡಿದ್ದ ನನಗೂ ಸಹ ನಾಲ್ಕು ಮಾತುಗಳನ್ನಾಡಬೇಕೆಂದು ಮನಸ್ಸಾಯಿತು. ಭೂಸುಧಾರಣೆಯನ್ನು ಅನೇಕರು ಅನೇಕ ರೀತಿಯಲ್ಲಿ ಅರ್ಥಮಾಡಿಕೊಳ್ಳುತ್ತಿದ್ದಾರೆ. ಯಾರಾದರೂ ಕೆಲವರು ಮಾತನಾಡಲು ಎದ್ದು ನಿಂತುಕೊಂಡರೆ ಏನೋ ಹಿನ್ನೆಲೆ ಇಟ್ಟುಕೊಂಡು ಮಾತನಾಡುತ್ತಿದ್ದಾರೆಂಬ ಭಾವನೆಯನ್ನು ಮಾಡಿಕೊಳ್ಳಬಹುದು. ಆ ರೀತಿ ಹಿನ್ನೆಲೆ ಏನೂ ಇಲ್ಲದಂತೆ, ಯಾವ ಪಕ್ಷಕ್ಕೂ ಕೂಡ ಅಂಟಿಕೊಳ್ಳದಂತೆ ನಿಷ್ಪಕ್ಷಪಾತವಾದ ದೃಷ್ಟಿಯಿಂದ ಮಾತನಾಡಬೇಕು ಎನ್ನತಕ್ಕದ್ದೇ ನನ್ನ ಇಚ್ಛೆಯಾಗಿದೆ. ಇದಕ್ಕೆ prepare ಮಾಡಿಕೊಂಡು ಬಂದಿದ್ದರೆ ಚೆನ್ನಾಗಿತ್ತೋ ಏನೋ. Prepare ಆಗದೆ ಇಲ್ಲಿ ಮಾತನಾಡತಕ್ಕ ಸಂದರ್ಭವಿರುವುದರಿಂದ ಕೆಲವು ಲೋಪದೋಷಗಳು ಬಂದರೆ ನನ್ನ ಮಾನ್ಯಮಿತ್ರರು ಕ್ಷಮಿಸಬೇಕೆಂದು ಕೇಳುತ್ತೇನೆ. ಈ ಸಭೆಯಲ್ಲಿ ಅನೇಕ ವಿಧವಾದ ಅಭಿಪ್ರಾಯಗಳು ಬಂದಿವೆ. ಭೂಸುಧಾರಣೆ ಆಗಬೇಕು ಎಂಬ ಪ್ರಶ್ನೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ದೊಡ್ಡ ಪ್ರಶ್ನೆ ಆಗಿದೆ. ಸ್ವಾತಂತ್ರ್ಯ ಬಂದಂದಿನಿಂದ ಅನೇಕ ರೀತಿಯ ಭೂಸುಧಾರಣೆಗಳು ನಡೆಯುತ್ತಾ ಬಂದಿವೆ. ನಮ್ಮ ಸ್ಟೇಟ್‌ನಲ್ಲಿಯೂ ಕೂಡ ಭೂಸುಧಾರಣೆ ಆಗಿದೆ. ನಮ್ಮ ದೇಶದಲ್ಲಿ ಐಶ್ವರ್ಯ ಕೇವಲ ಶೇಕಡ ಐದು ಜನಗಳ ಕೈಯಲ್ಲಿದೆ. ಅವರನ್ನು ಕೇಳುವವರೂ ಇಲ್ಲ, ಅವರಿಗೆ ಹೇಳುವವರೂ ಇಲ್ಲ. ಈ ಅಸೆಂಬ್ಲಿಗೆ ಅವರ ಮೇಲೆ ಯಾವ ವಿಧವಾದ ಕಾನೂನುಗಳನ್ನು ಮಾಡತಕ್ಕಂಥ ಅಧಿಕಾರವಿಲ್ಲ. ಅವರು ಸುರಕ್ಷಿತರಾಗಿದ್ದಾರೆ. ಆದರೆ ತಲೆತಲಾಂತರದಿಂದ ವ್ಯವಸಾಯದ ಕಸುಬನ್ನು ಮಾಡಿಕೊಂಡು, ಆ ಕಸುಬನ್ನೇ ನಂಬಿಕೊಂಡು ಜೀವನ ಮಾಡುತ್ತಿರವಂಥ ವಿಚಾರವನ್ನು ಪ್ಲಾನಿಂಗ್ ಕಮಿಷನ್‌ನವರು ಹೇಳಿದ್ದಾರೆ. ನಿಷ್ಪಕ್ಷಪಾತ ದೃಷ್ಟಿಯಿಂದ ಈ ಭೂಸುಧಾರಣೆಯನ್ನು ಮಾಡಬೇಕಾದ್ದು ಅತ್ಯಗತ್ಯ. ಅನೇಕ ಜನರು ಸಿನೀಮಾ ಥಿಯೇಟರುಗಳಿಂದ ಜೀವನ ನಡೆಸುತ್ತಿದ್ದಾರೆ; ಇನ್ನು ಕೆಲವರು ಮನೆಗಳನ್ನು ಕಟ್ಟಿಸಿ, ಅವುಗಳ ಬಾಡಿಗೆಯಿಂದ ಜೀವನ ನಡೆಸುತ್ತಿದ್ದಾರೆ; ಮತ್ತೆ ಕೆಲವರು ಷೇರ್ಸ್ ಇಟ್ಟುಕೊಂಡಿದ್ದಾರೆ. ಇವರುಗಳೆಲ್ಲಾ ಮೋಟಾರು ಕಾರುಗಳಲ್ಲಿ ಕೂತುಕೊಂಡು ಮಜಾಮಾಡಿಕೊಂಡು, ಹಣವನ್ನು ಉಳಿಸಿಕೊಂಡು, ಪುಣ್ಯವಂತರಾಗಿ, ಐಶ್ವರ್ಯವಂತರಾಗಿ ಉತ್ತಮವಾದ ಜೀವನವನ್ನು ನಡೆಸುತ್ತಿದ್ದಾರೆ. ಆದರೆ ಉಡುವುದಕ್ಕೆ ಒಂದು ಜೊತೆ ಪಂಚೆ, ಒಂದು ಕೆಂಪು ರುಮಾಲು ಹೊಂದಿರತಕ್ಕಂಥ ಈ ಬಡ ಪಾಪಿ ತಲೆತಲಾಂತರದಿಂದ ಎಷ್ಟು ತ್ಯಾಗಮಾಡಿದ್ದರೂ, ಅವನ ಮೇಲೆ ನಿಮ್ಮ ಉಗ್ರ ದೃಷ್ಟಿ ಬೀಳುತ್ತಾ ಇದೆ. ಈ ಭೂಸುಧಾರಣೆಯನ್ನು ಮಾಡುವಾಗ ವ್ಯವಸಾಯ ವೃತ್ತಿಯನ್ನು ಅವಲಂಬಿಸಿಕೊಂಡಿರುವವರಿಗೆ ಒಂದು ವಿಧವಾದ ಇನ್‌ಸೆಂಟೀವ್ (ಉತ್ತೇಜನ) ಈ ಕಸಬಿನಲ್ಲಿ ಬರಬೇಕೆಂಬ ದೃಷ್ಟಿ ಇರುವುದು ಅತ್ಯಗತ್ಯ. ಈ ಒಂದು ದೃಷ್ಟಿಯಿಂದ ಯೋಚನೆ ಮಾಡುವಾಗಲೂ ಸಹ, ಜತ್ತಿ ಸಮಿತಿ ವರದಿಯಲ್ಲಿರುವ ಅಂಶಗಳನ್ನು ದೂರದೃಷ್ಟಿಯಿಂದ ನೋಡಬೇಕು.

ಇತ್ತೀಚೆಗೆ ಸಂಸ್ಥಾನಾಮಳೆ ಈ ಜತ್ತಿ ಸಮಿತಿ ವರದಿಯಮೇಲೆ ಈ ಸಭೆಯಲ್ಲಿಯೂ, ಹೊರಗಡೆಯೂ ಟೀಕೆಗಳು ಬಂದಿವೆ. ಬಹುತೇಕ ಈ ಸುಧಾರಣೆಗಳು ಅಗ್ರಿಕಲ್‌ಚರ್ ಸೆಕ್ಟರಿಗೆ ಸಂಬಂಧಪಡದೆ, ಇನ್ನಾವುದಾದರೂ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದರೆ ಎಂತೆಂತಹ ಪ್ಲಾಟ್‌ಫಾರಮ್ ಭಾಷಣಗಳಾಗುತ್ತಿದ್ದುವು, ಪ್ರೆಸ್‌ನಲ್ಲಿ ಎಷ್ಟು ಎಡಿಟೋರಿಯಲ್‌ಗಳು ಬರುತ್ತಿದ್ದುವು; ಬೇಕಾದಷ್ಟು ಆಸಕ್ತಿ ಕಾಣುತ್ತಿತ್ತು. ಮೂಕಪ್ರಾಣಿಗಳ ಹಾಗೆ ಇರತಕ್ಕಂಥ ವ್ಯವಸಾಯಗಾರನಿಗೆ ಒಂದು ರೀತಿಯ ವಿಪತ್ತು ಬಂದಿರತಕ್ಕಂಥ ಕಾಲದಲ್ಲಿ, ಅವನ ಪ್ರಶ್ನೆಯನ್ನು ಒಂದು ತೆರೆದ ಮನಸ್ಸಿನಿಂದ ನೋಡುವ ಧೈರ್ಯ ಇವತ್ತು ಇಲ್ಲ. ಐಶ್ವರ್ಯವಂತರ ತಂಟೆಗೆ ಸರ್ಕಾರ ಹೋಗುತ್ತಾ ಇಲ್ಲ. ನಾನು ಆಗಲೇ ಹೇಳಿದಹಾಗೆ ನಮ್ಮ ಐಶ್ವರ್ಯವೆಲ್ಲಾ ಶೇಕಡ ಐದು ಜನಗಳಲ್ಲಿ ಇದೆ. ಈಗ ಮಾಡುತ್ತಿರುವ ಪ್ರಯತ್ನ ಇನ್ನುಳಿದಿರುವ ಐಶ್ವರ್ಯವನ್ನು ಬಾಕಿ 95 ಜನಗಳಲ್ಲಿ ಹರಿದು ಹಂಚುವುದು. ಇದು ವ್ಯವಸಾಯಗಾರನನ್ನು ಉಳಿಸುವ ಪ್ರಯತ್ನವಲ್ಲ.

ಈಗ ಭೂಸುಧಾರಣೆ ವಿಚಾರದಲ್ಲಿ ಪ್ರತಿಯೊಂದು ಅಂಶವನ್ನೂ ಈ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುವುದಿಲ್ಲ. ಮುಂದೆ ಮಸೂದೆ ಚರ್ಚೆಗೆ ಬಂದಾಗ, ಕಾಲವಿರುತ್ತೆ; ಆಗ ವಿಶದವಾಗಿ ಮಾತನಾಡಬಹುದು.

ಪ್ಲಾನಿಂಗ್ ಕಮಿಷನ್‌ನವರು ಕೂಡ ಹೀಗೇ ಮಾಡಬೇಕೆಂದು ನಿರ್ದಿಷ್ಟವಾಗಿ ಹೇಳಿಲ್ಲ. ಸುಧಾರಣೆ ಎಷ್ಟೆಷ್ಟು ಮಾಡಬೇಕು ಎನ್ನುವುದನ್ನು ಅವರೂ ಸಹ ಕಂಠೋಕ್ತವಾಗಿ ಹೇಳಿಲ್ಲ. ಆದ್ದರಿಂದ, ವ್ಯವಸಾಯಗಾರನಿಗೆ, ರೈತನಿಗೆ ಅನುಕೂಲವಾಗುವ ರೀತಿಯಲ್ಲಿ, ಸರ್ವಸಮಂಜಸವಾದ ಒಂದು ಕಾನೂನು ರಚನೆ ಮಾಡಬೇಕು. ಭೂಸುಧಾರಣೆಯನ್ನು ಯಾರೂ ವಿರೋಧಿಸುತ್ತಿಲ್ಲ. ಹಾಗಿದ್ದರೆ ಟೆನೆನ್ಸಿ ಆಕ್ಟ್, ಅಬಾಲಿಷನ್ ಆಫ್ ಇನಾಮ್ಸ್ ಆಕ್ಟ್ ಮುಂತಾದುವು ಪಾಸ್ ಆಗುತ್ತಿರಲಿಲ್ಲ. Step by step ಭೂಸುಧಾರಣೆ ಆಗುತ್ತಲೇ ಇದೆ. ಭೂಸುಧಾರಣೆ ಮಾಡದೆ ಇರುವಷ್ಟು ಧೈರ್ಯ ಯಾರಿಗೂ ಇಲ್ಲ. ಆದರೆ ನಾನು

ಹೇಳುತ್ತಿರುವುದು: ಇರುವುದನ್ನು ಮುರಿಯಬೇಡಿ, ಬಗ್ಗಿಸಿ. Dont break, bend it. ಮುರಿದು ಹಾಕುವುದಕ್ಕೆ ಪ್ರಯತ್ನಪಟ್ಟರೆ, ಆ ಅಪರಾಧದಿಂದ ಸಂಭವಿಸಬಹುದಾದ ಕಷ್ಟವನ್ನು ನಾವು ಅನುಭವಿಸಲೇಬೇಕಾಗುತ್ತದೆ.

ಶ್ರೀಮತಿ ನಾಗರತ್ನಮ್ಮನವರು ಕೆಲವು ರಬಂಜಮೀನುಗಳಿಗೆ ವರದಿಯಲ್ಲಿ ವಿನಾಯತಿ ಸೂಚಿಸಿದ್ದಾರೆಂದು ಹೇಳಿದರು. ಕಾಫಿ ಮತ್ತು ಟೀ ತೋಟಗಳಿಗೆ ವಿನಾಯತಿ ಕೊಟ್ಟಿರುವುದು ಎಷ್ಟರಮಟ್ಟಿಗೆ ಸರಿ ಅನ್ನುವುದು ಗೊತ್ತಿಲ್ಲ. ನಮ್ಮ ಪ್ರದೇಶದಲ್ಲಿ ಕಾಫಿ, ಟೀ ತೋಟಗಳು ಇಲ್ಲ. ಆದರೆ ಕಾಫಿ ಮತ್ತು ಟೀ ಬೆಳೆಯನ್ನು ಬೆಳೆಯಲು ಎಷ್ಟು ಕಷ್ಟವಾಗುತ್ತದೆಯೋ ಅದಕ್ಕಿಂತಲೂ ಹೆಚ್ಚು ಶ್ರಮವನ್ನು ನಮ್ಮ ಕಡೆಯ ಬೆಳೆಗಳನ್ನು ಬೆಳೆಯಲು ವಹಿಸಬೇಕಾಗುತ್ತದೆ. ತೆಂಗಿನ ತೋಟವನ್ನೂ ವಿನಾಯತಿ ಕೊಡಬೇಕೆಂದು ಮಾನ್ಯ ಸದಸ್ಯರೊಬ್ಬರು ಹೇಳಿದರು. ನಾನು ಅಡಿಕೆ ತೋಟಗಳನ್ನೂ ಈ ವಿನಾಯಿತಿ ಲಿಸ್ಟ್‌ನಲ್ಲಿ ಸೇರಿಸಬೇಕೆಂದು ಹೇಳಲು ಇಚ್ಛೆಪಡುತ್ತೇನೆ. ನಮ್ಮ ದೇಶದಲ್ಲಿ ಒಂದು ವರ್ಷಕ್ಕೆ 12 ಲಕ್ಷ ಮಣದಷ್ಟು ಅಡಿಕೆಯನ್ನು ಹೊರಗಡೆಯಿಂದ ತರಿಸುತ್ತಾ ಇದ್ದೇವೆ. ಅಡಿಕೆಯ ವಿಚಾರದಲ್ಲಿ ನಮಗೆ self-sufficiency ಇಲ್ಲ. ಇಂಡಿಯನ್ ಸೆಂಟ್ರಲ್ ಅರೇಕಾನಟ್ ಕಮಿಟಿಯವರೂ ಸಹ ಈ ಪೈರಿನ ವಿಚಾರವನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ, ಒಂದು ಅಡಿಕೆ ಸಸಿಯನ್ನು ಬೆಳೆಸಿ, ಅದನ್ನು ಸಂಪೂರ್ಣವಾದ ಬೆಳೆ ಕೊಡುವ ಮಟ್ಟಕ್ಕೆ ತರಬೇಕಾದರೆ ಹತ್ತುವರ್ಷಗಳಾಗುತ್ತವೆಂದು ಅಭಿಪ್ರಾಯಪಟ್ಟಿದ್ದಾರೆ. ಅಡಿಕೆಬೆಳೆಗೆ ಅನೇಕ ವೇಳೆ ರೋಗಗಳು ಬರುತ್ತವೆ. ಆ ವಿಷಯ ಶ್ರೀಮಾನ್ ಎಚ್. ಎಸ್. ರುದ್ರಪ್ಪನವರಿಗೆ ಗೊತ್ತು. ಅಡಿಕೆ ಪೈರಿಗೆ ಕೊಳೇರೋಗ ಅನೇಕ ವರ್ಷಗಳಿಂದ ಬರುತ್ತಿದ್ದರೂ, ಆ ವಿಷಯವನ್ನು ಹಿಂದಿದ್ದ ಮಂತ್ರಿಗಳ ಗಮನಕ್ಕೆ ತಂದಿದ್ದರೂ ಕೂಡ, ಆ ರೋಗಕ್ಕೆ ಯಾರೂ ಔಷಧಿ ಕಂಡುಹಿಡಿದಿಲ್ಲ. ಅಡಿಕೆ ಪೈರಿಗೆ ಈ ಕೊಳೆರೋಗ ಬಂದರೆ, ಅಡಿಕೆ ಪೈರು ಸಂಪೂರ್ಣವಾಗಿ ನಾಶವಾಗುತ್ತದೆ.

5 P.M.

ಇದರಲ್ಲಿ cost of cultivation ಎಷ್ಟು ಬರುತ್ತದೆ? 10-12 ವರ್ಷ ಯಾವ ವಿಧವಾದ ಪ್ರತಿಫಲ ಇಲ್ಲದೆ, ಅಡಿಕೆ ಬೆಳೆಸತಕ್ಕವರು ಯಾವ ನಿರೀಕ್ಷಣೆಯೂ ಇಲ್ಲದೇ ಇರಬೇಕಾಗುತ್ತದೆ. ಈ ಒಂದು ದೃಷ್ಟಿಯಿಂದ ಯೋಚನೆ ಮಾಡಿದರೆ ನಮ್ಮ ದೇಶಕ್ಕೆ ಎಷ್ಟು ಬೇಕೋ ಅಷ್ಟು ಸ್ವಯಂ ಪರಿಪೂರ್ಣತೆ ಇಲ್ಲವೆಂದೇ ನನ್ನ ಅಭಿಪ್ರಾಯ. ಕಾನೂನು ಮಾಡಿದರೆ ಶ್ರೀ ವೆಂಕಟೇಗೌಡರಿಗೆ ಅದು, ಇವರಿಗೆ ಇದು ಎಂದು ಮಾಡುವುದಕ್ಕಾಗುವುದಿಲ್ಲ ಸರ್ವೇಸಾಧಾರಣವಾಗಿ ಎಲ್ಲರಿಗೂ ಅನ್ವಯಿಸತಕ್ಕರೀತಿಯಲ್ಲಿ ದೇಶದ ದೃಷ್ಟಿಯಿಂದ ಜನತೆಯ ದೃಷ್ಟಿಯಿಂದ ಅನುಕೂಲವಾಗುವಂಥ ಸಲಹೆ ಮಾಡುವುದು ನನ್ನ ಕರ್ತವ್ಯವಾಗಿದೆ, ಅದನ್ನು ಮಾಡುತ್ತಾ ಇದ್ದೇನೆ. ಈ ಒಂದು ದೃಷ್ಟಿಯಿಂದ ಯಾವರೀತಿ ಕಾಫೀ, ಟೀಗೆ ರಿಯಾಯಿತಿ ಕೊಡಬೇಕೆಂದು ಒಂದು ವಾದ ಇದೆಯೋ ಅದೇ ದೃಷ್ಟಿಯಿಂದ ಅಡಿಕೆಗೂ ರಿಯಾಯಿತಿ ಕೊಡಬೇಕೆಂಬ ವಾದವನ್ನು ಅಂಗೀಕರಿಸುವುದು ಸೂಕ್ತ ಎಂದು ತಿಳಿದುಕೊಂಡಿದ್ದೇನೆ. ಅದನ್ನು ಇಂಡಿಯನ್ ಸೆಂಟ್ರಲ್ ಅರೇಕಾನಟ್ ಕಮಿಟಿಯವರೂ ಸಹ, ಒಳ್ಳೆಯ ಪ್ರವೀಣರು ಮತ್ತು ಪರಿಣಿತರು ಪರಿಶೀಲನೆ ಮಾಡಿ ಸೀಲಿಂಗ್ ವಜಾಮಾಡಬೇಕೆಂದು ಇಂಡಿಯಾ ಸರ್ಕಾರಕ್ಕೂ ಮತ್ತು ಸಂಸ್ಥಾನ ಸರ್ಕಾರಗಳಿಗೂ ಶಿಪಾರಸು ಮಾಡಿದ್ದಾರೆ. ತೆಂಗು, ಅಡಿಕೆ ಎರಡೂ ಒಂದೇ ವಿಧವಾದ ಕಸಬು. ಅವೆರಡಕ್ಕೂ ವಿನಾಯಿತಿ ಕೊಡುವುದು ಸೂಕ್ತ ಎಂದು ನನಗೆ ಕಾಣುತ್ತದೆ. ಇನ್ನು ಹೆಚ್ಚು ಹೇಳಲಿಕ್ಕೆ ನಾನು ಅಪೇಕ್ಷೆಪಡುವುದಿಲ್ಲ ಅನಿರೀಕ್ಷಿತವಾಗಿ ನನಗೆ ಅವಕಾಶ ಬಂದರೂ ಸಹ ತಾವು ಈ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಈ ನಾಲ್ಕಾರು ಮಾತುಗಳನ್ನು ಮುಗಿಸುತ್ತೇನೆ.

Sri C. M. ARUMUGHAM (Kolar Gold Fields).—Sir, I have heard much about the Jatti Committee Report. I neither oppose it nor support it. Because there is nothing either to support or oppose. I appreciate the progressive minds of the members of the Committee and also of the Government for appointing such a committee and also such members, who have been able to produce a report.

An HON'BLE MEMBER.—I suppose you welcome it.

Sri C. M. ARUMUGHAM.—I do not welcome it. So far as the report is concerned, it is of a simple nature and there is high thinking. The Members of the Committee have taken only four months to bring such a big report covering 19 districts. About 47,000 rupees were allotted for the committee. But they used only Rs. 13,000. I should say they were very economic and it is very good of them. I could have appreciated and supported if the Committee had fixed a ceiling on compensation. The Congress Government want to fix a ceiling on land holdings. Any Government will have to do it if not now at least some time latter. I would have appreciated the Jatti Committee Report if they had fixed a ceiling on compensation.

(*Interruption*)

I should like to tell my friend that the American Constitution was written 115 years ago. So far they have not made any alterations.

A VOICE.—They have made three alterations.

Sri C. M. ARUMUGHAM.—All right. But our Constitution has been written seven years ago and so far we have made seven amendments. I think if I am in the Congress, I can also bring an amendment.

(SRI C. M. ARUMUGHAM)

I want to bring to the notice of the members and the Government that the Committee has failed in its fundamental duty, *i.e.*, they have not found out the origin of land. You may say 'I have got ten thousand acres'. But how did he get the ten thousand acres, when there are thousands of persons who have not got even one acre ? How is it possible for anybody to get ten thousand acres ? Our forefathers were there. They were not able to get one acre. If anybody now says that they have ten thousand acres, I would say that that land should have been given to them or to their ancestors by Maharajas or Nawabs for serving in their governments or in their houses or by the Britishers or by some of the relations of the Maharajas. During the Britishers' time, many of the Indians, who are now in the forefront, by good offices to the Britishers, got thousands of acres. For these thousands of acres, are you going to pay compensation ? There is one instance, Sir, and I suppose most of the members know. In South Karara in Gundur, a document had been executed to Kamath by Wellington. He gave 500 acres for Rs. 18. Now he demands lakhs of rupees of compensation. Do you want to pay lakhs of rupees as compensation to him ? All these years, he not only exploited the landless people, he not only exploited the Government, he not only exploited the country, but now he wants compensation. And now my friends say that he should be paid compensation, not only at the market rates, but it must be paid immediately. Ceiling of compensation should have been fixed. So far as other people are concerned, I am not saying anything. Sri Channabasappa wants more land. Give it to him as he will cultivate and produce more. In Bellary, I was told that one person possesses ten thousand acres of land. The whole of Dharwar district is in the hands of a few individuals. In Tanjore—of course I have visited that place—the whole of Tanjore district belongs to one man. I am a Tamilian and I know. I would therefore say that while fixing the compensation, the committee has failed in its duty to find out the origin of land. I had been thinking that the Congress was conservative hitherto and that they are progressive now. But now they have proved themselves and have come out in their true colours. From the beginning they were conservative. They are going to be conservative and hereafter also, they will be conservative.

I think members will agree with me that it is something like a report written by an expert committee comprising of members beloning to a foreign country. Supposing you ask some English people to come to the state and make a report. They will visit some places and will make some report. Mr. Jatti comes from Bombay and other friends belong to these parts. They know the people and feel their pulse, whether slow or fast or in which direction it beats. I do not know why they made such a report which is good for nothing. The Committee has faild to solve the problem of the tenants or the land problem satisfactorily. You must be able to find out ways and means for solving the unemployment problem too.

In the Mysore State there are 5 to 6 lakhs of unemployees in organised industry. 40 per cent of them are in rural areas. Every year, 10 to 15 thousand students pass out S. S. L. C. and a good number become degree-holders. All these seek for employment. When the report is published, everybody has started crying. It reminds me of a story. Three persons were coming from a Shandy-one with a bag of rice, another with a basket of betel leaves and the third person with a bag of salt. They were caught in the rain. The man with the bag of rice started crying and shouting Oh! my bag of rice is gone." The man carrying the basket of betel leaves also started crying and shouting 'My betel leaves are damaged.' The third man with the bag of salt also began crying that he was losing the salt. But one can understand whose cry was a genuine one. When the report is published, persons owning thousands of acres are crying; also persons having 10-20 acres are crying and persons who have no lands also cry.

I do not know why all those big landlords cry. Our Revenue Minister from Bombay knows whose cry is genuine. The landlords are agitating a lot, bringing pressure upon the Government to bring in a Bill and pass it. If you go on shouting and shouting, for a thing, it is taken to be proper and justifiable. Therefore, they are crying like that. The Minister for Revenue may bring in the Bill and have it passed by this House. The Congress party are in a majority. If there is to be a democratic Government, a well represented and recognised Government, there must be a very strong opposition also and that. Opposition must be an alternative Government. Whatever Bill you bring in, the strong opposition must be able to oppose it if it were not to be a measure in the interests of the public at large and if the Government lose by one or two votes, then the Opposition must form the alternative Government. But now you are in a brute majority.

Sri J. B. MALLARADHYA (Nanjangud).—You know what happened in connection with the Sales Tax (Amendment) Bill.

Sri C. M. ARUMUGHAM.—My friend now and then disturbs. I may lose my chain of argument. After all, I am not a congressman trained in the art of speaking. You are in a brute majority. Therefore, whatever Bill you bring in, you are quite confident that it will be passed; whether a seniormost member like Sri. Mallaradhya opposes or I oppose, it makes no difference. But it is your duty to do anything which will help the entire State and the entire community. But this Committee has failed to give a satisfactory report. They have taken pains in collecting statistics. I do not know in what way they will be helpful and useful to the common man. It must be known that the real cry, the genuine cry comes from the persons who are landless. I emphatically assert that this report is not going to help the landless persons. If I say that, I should not be mistaken. We are all demanding for the formation of States on linguistic basis. Here linguism means nothing but communalism. With the formation of a linguistic State, you are handing over the string of administration to the majority community of the State. this State also is run by one single community. If there are quarrels they are communal quarrels. Where is land for distribution? All the land is in the hands of caste Hindus. I am surprised to see that the Jatti Committee has not mentioned about the plight of the Scheduled Castes and Tribes. Most of them are landless. The Committee has made much of basic holding, family hoding, ceiling and all that. We are not going to bother ourselves to study these things. I would like to pointout, that the Jatti Committee mentioned as to what is going to happen to the landless persons. Suppose I am a landlord; I lose my land in favour ofmy relatives or my community man. That is what actually happens. No cast Hindu will prefer any Scheduled caste to be his tenant. The peasant's ownership of landleads to the ruination of the country. They say there are 260.78 lakhs of cultivable land. For argument sake, you take all these lands as garden lands. As per the Report, you fix a ceiling for family consisting of more than 5 persons; then there will be 9,88,138 landholders. Suppose you treat all the lands as wet lands, fixing a ceiling for a family consisting of more than 5 persons then there will be only 2,47,222 landholders.

Now, suppose all the lands are dry. Then there will be only 99,185 landholders. If you want Rs. 400 net income, you have one acre of garden land, four acres of paddy land and likewise 10 acres of dry land for the basic holding. If you are going to calculate like this, where is land and how are you going to distribute it. As I said, Sir, the Committee have not understood this land problem at all. After distributing this land, what will happen is, where we have about 24,000 landholders, we may have about a few lakhs of people. What is the good? Suppose Sri Rajaiah Setty has got 10,000 acres. There must be some restriction in your report that no land must be sold. If you allow this thing to go on, then I tell you, Sir, this land problem will remain for ever. To avoid this, I am suggesting that no

(SRI C. M. ARUMUGHAM)

person who owns land which yields more than Rs. 5,400 should be allowed for personal cultivation. Even if it is absentee landlord, it may be allowed. Nobody should get more than 5,400 and less than Rs. 1,200. There must be compulsory co-operative farming. Anybody who holds lands which yields less than 1,200, must be asked to give his land; that land must be taken by the Government and it must be made into a collective farm. Though I am not a communist, I like the Russian system of land reform. I want collective farm. None should sell land and if anybody sells land, it must be sold to the Government. Our objective should be nationalisation of the land. Now, we have already nationalised rivers. Water is nationalised. You have nationalised everything. Of course, the PSP Members' policy also is the same. They want that there should be nationalisation of industries. I am saying that there should be nationalisation of the land. I must also say that there should be no exemption even for religious institutions. There must be ceiling so far as religious institutions. God is there to protect us. We need not protect God. God is everywhere. You cannot allow thousands of acres in the name of God for religious institutions. Sir, in Bellary District, there is a temple called Kumaraswamy temple in Sandoor. For that temple, there are land of 18,000 acres. In Udipi, my friend, Sri Setty knows, that Krishna Temple has got 14,000 acres of wet land and 3,000 acres of garden land. All are saying that we are Harijans. I do not agree with that word 'Harijans'. If you ask the meaning of that word, they say 'you are children of the God'. When they say that we are children of the God, I say, well the son has got the right to take the father's property'! (*Laughter*) Therefore, we must get all the lands which now belong to religious institutions. All these lands must be given to scheduled caste people and we are the only proper persons who can inherit this property.

SRI J. B. MALLARADHYA.—Why did not the Jatti Committee recommend this, Sir?

SRI C. M. ARUMUGHAM.—This is one fault of the committee to have exempted religious institutions.

SRI B. D. JATTI.—Henceforward, all the lands belonging to religious institutions will be valued and the compensation will be given to them either in cash or national bonds, and the land will be taken away. They will no longer be the owners.

SRI C. M. ARUMUGHAM.—In conclusion, I want to say that this report is not going to help the scheduled caste people, who are really the landless persons. I want to say—if you agree, you must form a committee consisting of both the Opposition and the Ruling Party. In that Committee, you must have members belonging to different groups.

5-30 P.M.

They must form a committee consisting of different shades of opinion. A Committee representing the landlords, tenants and the landless. Though Scotland and England form one country, still in the Parliament they have formed a committee which consists of representatives of England and representatives of Scotland. Supposing the U.K. Government want to bring in any reform, they will consult the committee first. The committee must agree that it is good and then it will go to the Parliament. Similarly, to look after the interests of the landless and the landlords there must be one office not connected with the Revenue Department or the Agricultural Department. There must be a separate office to study and implement the reforms suggested by a Land Committee. Very soon I hope the Government will bring in a Bill based on this report, but before bringing in such a Bill my only request to them is to form a Committee consisting of members of the Opposition and members of the ruling party which should draft a Bill and place it before the House. I have made these few remarks so that what the committee

has omitted to do can be rectified when the Government bring in a Bill based on that report. With these remarks, I thank the Speaker for having allowed me to speak for some time on this report.

ಶ್ರೀ ಡಿ. ಟಿ. ಸೀತಾರಾಮರಾವ್ (ಭದ್ರಾವತಿ).—ಸ್ವಾಮಿ, ಭೂಸುಧಾರಣಾ ಸಮಿತಿಯವರು ನಮ್ಮ ಮುಂದೆ ಇಟ್ಟಿರತಕ್ಕಂಥ ವರದಿಯನ್ನು ಸ್ವಾಗತಿಸುತ್ತಾ ನಾನು ಕೆಲವು ಸಲಹೆಗಳನ್ನು ಸರ್ಕಾರದ ಮುಂದೆ ಇಡಬಯಸುತ್ತೇನೆ. ಈ ಸುಧಾರಣೆ ಜಾರಿಗೆ ಬಂದರೂ ಕನಿಷ್ಟವರ್ಗದವರಿಗೆ ಅಂದರೆ ಬಡವರಿಗೆ ಜಮೀನು ಸಿಕ್ಕುತ್ತದೆಂದು ನನಗೇನೂ ಭರವಸೆಯಿಲ್ಲ. ಮುಖ್ಯವಾಗಿ ಇದೊಂದು ಕ್ರಾಂತಿಯನ್ನುಂಟು ಮಾಡುವ ಒಳ್ಳೆಯ ವರದಿಯಾಗಿದೆ. ನಮ್ಮ ದೇಶದಲ್ಲಿ ಈಗ ಸಾಗುವಳಿ ಮಾಡಲು ಯೋಗ್ಯವಾಗಿರುವ ಭೂಮಿ ಈ ವರದಿಯ ಆಧಾರದಮೇಲೆ 267.8 ಲಕ್ಷ ಎಕರೆಗಳು, ಅದನ್ನು ಸಾಗುಮಾಡತಕ್ಕಂಥ ಜನ ಶೇಕಡ 24.6 ಎಂದು ಕಂಡುಬಂದಿದೆ. ಶೇಕಡ 99.4 ನೂರು ಎಕರೆಗಳಿಗಿಂತ ಕಡಮೆ ಹಿಡುವಳಿಗಳಿವೆ. ಹತ್ತು ಎಕರೆಗಳಿಗಿಂತ ಕಡಮೆ ಭೂಮಿ ಹೊಂದಿರುವವರು 2/3 ಭಾಗದಷ್ಟಿದ್ದಾರೆ. ಹತ್ತರಿಂದ 100 ಎಕರೆಗಳವರೆಗೆ ಸಾಗುಮಾಡುವವರು ಶೇಕಡ 30ರಷ್ಟು, 0.44 ನೂರು ಎಕರೆಗಳಿಂದ ಇನ್ನೂರು ಎಕರೆಗಳವರೆಗೆ, 200 ಎಕರೆಗಳಿಗಿಂತ ಹೆಚ್ಚು ಜಮೀನು ಇರುವ ಮಾಲೀಕರು 0.12 ಹಿಡುವಳಿಯವರು ಆಗಿದ್ದಾರೆ. ಇದನ್ನು ಹೋಲಿಕೆ ಮಾಡಿ ನೋಡಿದರೆ ಹೆಚ್ಚು ಜಮೀನಿರುವವರು, ನೂರು ಎಕರೆಗಳಿಗೆ ಮೇಲ್ಪಟ್ಟಿರುವವರು, ಇನ್ನೂರು ಎಕರೆಗಳಿಗೆ ಮೇಲ್ಪಟ್ಟಿರುವವರು ತುಂಬಾ ಕಡಮೆ ಇದ್ದಾರೆ. ಅವರ ಜಮೀನನ್ನು ಹಂಚಿಕೆಮಾಡತಕ್ಕದ್ದು ನಮ್ಮ ಮುಂದೆ ಬರುವುದಾಗಿದೆ. ಇವತ್ತು ಎಲ್ಲರಿಗೂ ಕೂಡ ಸಮಾನವಾಗಿ ಹಂಚಿದರೆ ವರದಿಯಲ್ಲಿ ಹೇಳಿರುವಂತೆ 2.47 ಎಕರೆ ಪ್ರದೇಶ ಒಬ್ಬೊಬ್ಬ ಮನುಷ್ಯನಿಗೆ ಸಿಕ್ಕುತ್ತದೆ. 71.2 ಜನ ನಮ್ಮ ದೇಶದಲ್ಲಿ ಜಮೀನಿನಮೇಲೆ ಅವಲಂಬನಮಾಡಿಕೊಂಡಿದ್ದಾರೆ. ಹಿಡುವಳಿದಾರರು, ಗೇಣಿದಾರರು ಮತ್ತು ವ್ಯವಸಾಯವೇ ಕಸಬಾಗಿರುವ ಕೂಲಿಗಾರರು ಇವರೆಲ್ಲಾ ಸೇರಿದರೆ 71.2ರಷ್ಟು ಜನ ವ್ಯವಸಾಯವನ್ನೇ ಅವಲಂಬಿಸಿದ್ದಾರೆಂದು ತಿಳಿಯುತ್ತದೆ. 47.6 ಭೂಮಾಲೀಕ ಬೇಸಾಯಗಾರರು 10.9 ಬೇಸಾಯದ ಉದ್ಯೋಗಿಗಳು, ಕೇವಲ 3.4 ಜನ ಗೇಣಿದಾರರು ಇದ್ದಾರೆ. ಶೇಕಡ 67 ಭಾಗ ಜಮೀನನ್ನು ಭೂಮಾಲೀಕರು, ಶೇಕಡ 13 ಭಾಗವನ್ನು ಗೇಣಿದಾರರು, 13 ಭಾಗವನ್ನು ವ್ಯವಸಾಯ ಉದ್ಯೋಗಿಗಳು ವ್ಯವಸಾಯಮಾಡುತ್ತಾರೆ. ಭೂಮಿ ಇಲ್ಲದಿರುವವರು ಶೇಕಡ 28 ಮಂದಿ ಇದ್ದಾರೆ. ಇರುವ ಜಮೀನನ್ನು ಅವರಿಗೆ ಹಂಚಿದರೆ ಈ ದಿವಸ ಎಕನಾಮಿಕ್ ಹೋಲ್ಡಿಂಗ್ ಆಗುವುದಿಲ್ಲ. ಹಾಗಿರುವಾಗ ಈ 28 ಜನರಿಗೆ ಭೂಮಿ ಹೇಗೆ ಒದಗಿಸಬೇಕೆಂಬ ಪ್ರಶ್ನೆ ಸ್ವಾಭಾವಿಕವಾಗಿ ಉದ್ಭವವಾಗುತ್ತದೆ. ನಮ್ಮ ಮಾನ್ಯ ಮಿತ್ರರು ಎಲೆಕ್ಷನ್ ಮ್ಯಾನಿಫೆಸ್ಟೋನಲ್ಲಿ ರೈತರ ಹೆಗ್ಗುರುತನ್ನು ಹಾಕುತ್ತಾರೆ, ಸಮಾಜವಾದ, ಸಮತಾವಾದ ಪ್ರಸ್ತಾಪಮಾಡುತ್ತಾರೆ ಎಂದು ಹೇಳಿದರು. ಆದರೆ ಸಾಕಾದಷ್ಟು ಭೂಮಿಯಿಲ್ಲದಿರುವಾಗ ಯಾವ ಮಾರ್ಗದಲ್ಲಿ ಸಮಾಜಕಟ್ಟಬೇಕೆಂಬುದನ್ನು ಅವರು ತಿಳಿಸಲಿಲ್ಲ. ಶೇಕಡ 28ರಷ್ಟು ಜನರಿಗೆ ಸಾಕಷ್ಟು ಭೂಮಿಯನ್ನು ಹಂಚಲು ಏನುಮಾಡಬೇಕು, ಭೂಮಿ ಸಾಕಷ್ಟಿಲ್ಲದಿರುವಾಗ ಅವರಿಗೆ ಕೈಗಾರಿಕೆ ಏರ್ಪಡಿಸಬೇಕೆ, ಇರುವ ಭೂಮಿಯನ್ನು ಹಂಚಿದರೆ ಪರಿಪೂರ್ಣತೆಯುಂಟಾಗುತ್ತದೆಯೆ, ಆಗ ಯಾವ ಮಾದರಿಯಾಗುತ್ತದೆ ಎಂಬುದನ್ನು ಮಾನ್ಯ ಸ್ನೇಹಿತರು ಹೇಳಿದ್ದರೆ ಸಂತೋಷವಾಗುತ್ತಿತ್ತು. ಶ್ರೀ ಮಲ್ಲಾರಾಧ್ಯರು ಭಾಷಣಮಾಡುವಾಗ ಅಮೇರಿಕಾದ ವ್ಯವಸಾಯ ಪದ್ಧತಿ ಹೇಳುತ್ತಾ ಅಲ್ಲಿ ಶೇಕಡ 25 ಮಂದಿ ವ್ಯವಸಾಯವನ್ನು ಅವಲಂಬಿಸಿದ್ದಾರೆಂದು ಹೇಳಿದರು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಾನು ಹಾಗೆ ಹೇಳಲಿಲ್ಲ. ಈಗ ಅಮೇರಿಕಾದಲ್ಲಿ ಇತ್ತೀಚಿನ ವರದಿಯ ಪ್ರಕಾರ ಶೇಕಡ 8 ಮಂದಿ ಮಾತ್ರ ವ್ಯವಸಾಯ ಮಾಡುತ್ತಾ ಇದ್ದಾರೆ.

ಶ್ರೀ ಡಿ. ಟಿ. ಸೀತಾರಾಮರಾವ್.—ನಮ್ಮ ದೇಶದ ಪರಿಸ್ಥಿತಿಯೇ ಬೇರೆ, ಹೊರಗಡೆದೇಶದ ಪರಿಸ್ಥಿತಿಯೇ ಬೇರೆ. ಅಮೇರಿಕಾದಲ್ಲಿರುವ ವಿಸ್ತಾರಕ್ಕೂ ನಮ್ಮಲ್ಲಿರುವುದಕ್ಕೂ ವ್ಯತ್ಯಾಸ ಕಂಡುಬರುತ್ತದೆ. ಚೀನದಲ್ಲಿ 50 ಕೋಟಿ ಜನರಿದ್ದರೆ ನಮಗಿಂತ ನಾಲ್ಕೈದರಷ್ಟು ಭೂಮಿ ಅಲ್ಲಿ ವಿಸ್ತಾರವಿದೆ; ನಮ್ಮಲ್ಲಿ ಕಡಮೆ ಇದೆ. ಇರುವುದನ್ನು ಎಲ್ಲರಿಗೂ ಹಂಚಿದರೆ ಎಕನಾಮಿಕ್ ಹೋಲ್ಡಿಂಗ್ ಆಗುವುದಿಲ್ಲ. ತುಂಡು ತುಂಡು ಭೂಮಿಯಾದಾಗ ಜನರಲ್ಲಿ ಜಿಗುಪ್ಸೆ ಬೆಳೆದು ಒಳ್ಳೆಯಮನೋಭಾವನೆ, ಉತ್ಸಾಹ ಇಲ್ಲದೆಹೋಗುವ ಸನ್ನಿವೇಶ ಬರುತ್ತದೆ. ಮನುಷ್ಯನಿಗಿರುವ ಹುಮ್ಮಸ್ಸು ಬುದ್ಧಿಶಕ್ತಿ ಕಡಮೆಯಾಗಲು ಅವಕಾಶಕೊಡದಂತೆ, ಅವನಿಗೆ ಚೈತನ್ಯವುಂಟಾಗುವಂತೆ ಉತ್ಪಾದನೆಗೆ ಧಕ್ಕೆ ತರದಂತೆ ಭೂಮಿಯನ್ನು ಹಂಚಬೇಕು. ಸರಿಯಾದ ಮನೋಭಾವನೆ ಜಮೀನು ಪಡೆದವನಲ್ಲಿ ಬೆಳೆಯಲು ಅವಕಾಶವುಂಟಾಗದಿದ್ದರೆ ಸಮಾಜ ಸರಿಹೋಗುವುದಿಲ್ಲ. ಶ್ರೀ ರಾಜಯ್ಯಶೆಟ್ಟರು ಸಾಕಷ್ಟು ಸರಕಾರದ ಭೂಮಿಯಿದೆಯೆಂದು ಹೇಳಿದರು. ಮಲೆನಾಡಿನಲ್ಲಿ ಸಾಗುವಳಿಗೆ ಯೋಗ್ಯವಾದ 7 ಲಕ್ಷ ಎಕರೆ ಭೂಮಿಯಿದೆ. ಅದನ್ನು ಬಡವರಿಗೆ ಉಚಿತವಾಗಿ ಕೊಡಿ. ಭೂಮಾಲೀಕರಿಗೆ ಪರಿಹಾರ ಕೊಡಬೇಕೆಂದು ಸರ್ಕಾರ ಹೇಳುವಾಗ ಬಡವರಿಗೆ ಸರ್ಕಾರದ ಭೂಮಿಯನ್ನಾದರೂ ಉಚಿತವಾಗಿ ಕೊಡುವ ನಿರ್ಧಾರ ಮಾಡುವುದು ಬಹಳ ಮುಖ್ಯವಾದುದು. ಇದಕ್ಕೆ 7 ಲಕ್ಷ ಎಕರೆ ಮಲೆನಾಡಿನಲ್ಲಿ ಇದೆ.

[MR. SPEAKER in the Chair]

ವಿಶಾಲ ಕರ್ಣಾಟಕದಲ್ಲಿ ಸರ್ಕಾರದ ವಶ ಹೀಗೆ ಕೊಡುವ ಒಟ್ಟು ಭೂಮಿ 50 ಲಕ್ಷ ಎಕರೆ ಇದೆ ಎಂದು ನಾನು ಕೇಳಿದ್ದೇನೆ. ನಾವು ಸುಧಾರಣೆ ಮಾಡುವಾಗ ಭೂ ಮಾಲೀಕರಿಂದ ಭೂಮಿಯನ್ನು ಪಡೆದು ಜನರಿಗೆ ಹಂಚತಕ್ಕ ಪರಿಸ್ಥಿತಿಯಲ್ಲಿ ಎಲ್ಲರಿಗೂ ಹಂಚುತ್ತೇವೆಂದರೆ ತಪ್ಪಾಗುತ್ತದೆ.

1200 ರೂಪಾಯಿಗಳ ನಿವ್ವಳ ಉತ್ಪತ್ತಿಬರುವಷ್ಟು ಭೂಮಿ ಒಂದು ಕುಟುಂಬ ಹಿಡುವಳಿ ಎಂದು ನಿಗದಿ ಮಾಡಿದ್ದಾರೆ. ಅದು ಸಾಲದು. 5,400 ರೂಪಾಯಿಗಳ ನಿವ್ವಳ ಉತ್ಪತ್ತಿ ಬರುವಷ್ಟು ಜಮೀನು ಪರಮಾವಧಿ ಎಂದು ಗೊತ್ತು ಮಾಡಿದ್ದಾರೆ. ಇದು ಐದು ಜನರಿರುವ ಒಂದು ಕುಟುಂಬಕ್ಕೆ ಮಾತ್ರ. ಕೆಲವು ಕುಟುಂಬಗಳಲ್ಲಿ ನೂರು ಜನರು ಇರತಕ್ಕ ಸಂದರ್ಭಗಳೂ ಉಂಟು. ಅಂಥ ಕುಟುಂಬಗಳಿಗೆ ಇದರ ಎರಡರಷ್ಟು ಎಂದರೆ 10,800 ರೂಪಾಯಿಗಳ ಪರಮಾವಧಿಯನ್ನೂ ನಿಗದಿ ಮಾಡಿದ್ದಾರೆ. ನನ್ನ ಭಾವನೆಯಲ್ಲಿ, ಒಂದು ಕುಟುಂಬದಲ್ಲಿ ಐದಕಿಂತ ಜಾಸ್ತಿ ಜನರಿದ್ದರೆ ಎಷ್ಟು ಜನ ಜಾಸ್ತಿಯಾಗಿರುತ್ತಾರೆಯೋ ಅದರ ದಾಮಾಷಾ ಪ್ರಕಾರ

(ಶ್ರೀ ಡಿ. ಟಿ. ಸೀತಾರಾಮರಾವ್)

ಜಮೀನನ್ನೂ ಬೇಸಾಯ ಮಾಡತಕ್ಕ ವ್ಯವಸ್ಥೆ ಅವರಿಗೆ ಇರಬೇಕು. ಆದರೆ ನಾನು ಸಾವಿರ ಎಕರೆ, ಎರಡು ಸಾವಿರ ಎಕರೆ ಜಮೀನುಳ್ಳ ಭೂಮಾಲೀಕರಿರಬೇಕೆಂದು ಹೇಳುತ್ತಿಲ್ಲ. ಯಾರು ಉತ್ಸಾಹದಿಂದ ಭೂಮಿಯಲ್ಲಿ ಕೆಲಸಮಾಡುತ್ತಾರೆಂದು ಉದ್ದೇಶ ಪಟ್ಟಿರುತ್ತೇವೆಯೋ ಅವರಿಗೆ ಮುಂದೆ ಉತ್ಸಾಹವು ಕಡಮೆಯಾಗಬಹುದು. ಅದರಿಂದ ಉತ್ಪತ್ತಿ ಖಂಡಿತವಾಗಿಯೂ ಕುಂಠಿತವಾಗಿ ದೇಶಕ್ಕೆ ನಷ್ಟವಾಗುತ್ತದೆ. ಮುಂದೆ ಸುಧಾರಣೆಗಳು ಜಾರಿಗೆ ಬಂದನಂತರ, ಈಗ ಗೇಣೀದಾರರಾಗಿರುವವರೆಲ್ಲರೂ ಭೂಮಾಲೀಕರಾಗುತ್ತಾರೆ. ಭೂಮಾಲೀಕತ್ವ ಬಂದನಂತರ ಎಲ್ಲರೂ ಅದೇರೀತಿಯಲ್ಲಿಯೇ ಇರುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಅವರು ಇನ್ನೊಂದು ಉದ್ಯೋಗವನ್ನು ಮಾಡಬಹುದು. ಆಗ ಅವರು ಭೂಮಿಯನ್ನು ಬೇರೆಯವರಿಗೆ ಬೇಸಾಯ ಮಾಡಲು ಕೊಡುವ ಸಂದರ್ಭ ಬರುತ್ತದೆ. ಮತ್ತೆ ಇನ್ನೊಬ್ಬ ಗೇಣೀದಾರನಾಗುತ್ತಾನೆ. ಆದುದರಿಂದ ಭೂಮಿಯ ಒಡೆತನವನ್ನೂ ಖಾಯಂಪಡಿಸುತ್ತೇವೆಂದು ಏನು ಹೇಳುತ್ತಾರೆ, ಅದರಿಂದ ನಾಳೆಯದಿನ ಒಡೆತನ ಬಂದಕೂಡಲೆ ನಾನು ಏಕೆ ಸಾಗುವಳಿ ಮಾಡಲಿ, ಇನ್ನೊಬ್ಬನಿಗೆ ಸಾಗುವಳಿ ಮಾಡಲು ಕೊಡೋಣವೆನ್ನುವ ಭಾವನೆ ಬರುತ್ತದೆ.

ವ್ಯವಸಾಯ ಕ್ಷೇತ್ರದಲ್ಲಿ ಮಾತ್ರ ಸಮಾಜ ಸುಧಾರಣೆ ಮಾಡುವ ಮನೋಭಾವ ಇದೆ. ಮಾನ್ಯಮಿತ್ರರಾದ ಶ್ರೀ ರೇವಣಸಿದ್ದಪ್ಪನವರು socialistic pattern ಎಂದು ಹೇಳಿದರು. ನನ್ನ ಅಭಿಪ್ರಾಯದಲ್ಲಿ, ಒಟ್ಟಿನಲ್ಲಿ ಸರಿಹೋಗಬೇಕು ಎಂದರೆ ಎಲ್ಲ ಕ್ಷೇತ್ರಗಳಲ್ಲಿಯೂ ಕೂಡ ಸಾಮಾಜಿಕವಾಗಿ ಜಾರಿಗೆ ತರಬೇಕು. ಇಡೀ ದೇಶ, ಇಡೀ ಜನತೆ ಎಲ್ಲವರ್ಗಗಳಿಗೂ ಅನ್ವಯಿಸುವಂತೆ ಸಂಯುಕ್ತವಾಗಿ ಸಮಾಜ ಸುಧಾರಣೆಯನ್ನು ಜಾರಿಗೆ ತಂದರೆಮಾತ್ರ ಸರಿಹೋಗುತ್ತದೆ. ಕಮ್ಯುನಿಸ್ಟ್ ರೀತಿಯ ಸಮಾಜ ರಚನೆಮಾಡಿದರೆ ಇದೆಲ್ಲ ಸರಿಹೋಗುತ್ತದೆ. ಎಲ್ಲಿಯತನಕ ಒಡೆತನವನ್ನು ಉಳಿಸಿಕೊಳ್ಳಬೇಕೆನ್ನುವ ಮನೋಭಾವನೆ ನಮ್ಮಲ್ಲಿರುತ್ತದೆಯೋ ಅಲ್ಲಿಯತನಕ ಭಿನ್ನಭಾವನೆಗಳು ಇದ್ದೇ ಇರುತ್ತವೆ. ಭೂಹಿಡುವಳಿಯ ವಿಚಾರದಲ್ಲಿ ಪರಮಾವಧಿಯನ್ನು ನಿಗದಿ ಮಾಡುವುದಕ್ಕೆ ಮೊದಲು ಇತರ ಎಲ್ಲ ಕ್ಷೇತ್ರಗಳಲ್ಲಿಯೂ ಮೊದಲು ಸುಧಾರಣೆ ಪ್ರಾರಂಭವಾಗಿ ನಂತರ ಜಮೀನು ವಿಷಯದಲ್ಲಿ ಕೈಕೊಂಡರೆ ಮಾತ್ರ socialistic pattern ಆಗುತ್ತದೆ. ಇವೊತ್ತು reforms ತೆಗೆದುಕೊಂಡುಬಂದು ಅದನ್ನು ಎಲ್ಲ ಕ್ಷೇತ್ರಗಳಿಗೂ ಅನ್ವಯಿಸಿದರೆ ಮಾತ್ರ ಸರಿಸಮಾನಿಕ ಸಮಾಜವುಂಟಾಗುತ್ತದೆನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಲೆನಾಡಿನಲ್ಲಿ ಅಡಿಕೆ ತೋಟಗಳು ಮುಖ್ಯವಾಗಿ ಬಾಗಾಯಿತು ಬೆಳೆ, ಇವಕ್ಕೆ ವಿನಾಯಿತಿ ಕೊಟ್ಟಿಲ್ಲ. ಇದರಲ್ಲಿ ಯಾವಾಗಲೂ ಇಷ್ಟೇ ಉತ್ಪತ್ತಿ ಪ್ರತಿ ವರ್ಷವೂ ಬರುತ್ತದೆಂದು ನಿಗದಿ ಮಾಡುವುದಕ್ಕಾಗುವುದಿಲ್ಲ. ಒಮ್ಮೆ ವಿಪರೀತ ಮಳೆ ಬಂದರೆ ನೀರು ಹೆಚ್ಚಾಗಿ ಹರಿದು ನೆಲವೆಲ್ಲ ಕೊರಕಲಾಗಿ ತೋಟಗಳಿಗೆ ಬಹಳ ನಷ್ಟವಾಗುತ್ತದೆ. ಇದರಿಂದ ನಿರ್ದಿಷ್ಟವಾಗಿ ಎಷ್ಟು ಉತ್ಪತ್ತಿ ಬರುತ್ತದೆಂದು ಹೇಳಲು ಸಾಧ್ಯವಾಗುವುದಿಲ್ಲ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ತಿಳಿಸುತ್ತೇನೆ. ನಾವು ಹೆಚ್ಚಿಗೆ ಗಿಡಗಳನ್ನು ಬೆಳೆಸಬೇಕು, ಅರಣ್ಯಸಂಪತ್ತನ್ನೂ ಬೆಳೆಸಬೇಕು, ಎಂದು ನಮ್ಮ ವ್ಯವಸಾಯ ಮಂತ್ರಿಗಳು ಹೇಳುತ್ತಿದ್ದಾರೆ. ನಮ್ಮದೇಶದೊಳಗೆ ಅಡಿಕೆ ತೋಟ, ತೆಂಗಿನ ತೋಟ, ಕಾಫಿ ತೋಟ, ಎಲ್ಲಸೇರಿ 70 ಸಾವಿರ ಎಕರೆಗಳಿವೆ ಎಂದು ಕೇಳಿದ್ದೇನೆ. ಕೇಂದ್ರ ಸರ್ಕಾರದವರು, ತಮ್ಮ ಯೋಜನೆಗಳಲ್ಲಿ ಅಡಿಕೆ ಫಸಲನ್ನು ಮತ್ತು ತೆಂಗಿನ ಫಸಲನ್ನು ಹೆಚ್ಚುವರಿ ಮಾಡಬೇಕು; ಹಾಗೆ ಮಾಡದಿದ್ದರೆ ನಮ್ಮದೇಶಕ್ಕೆ ಆ ಭಾಗದಲ್ಲಿ ಕೊರತೆಯುಂಟಾಗುತ್ತದೆ ಎಂದು ಹೇಳಿದ್ದಾರೆ. ಅದಕ್ಕೆ ಸಾಕಷ್ಟು ಹಣವನ್ನೂ ಖರ್ಚುಮಾಡುವ ಉದ್ದೇಶವುಳ್ಳವರಾಗಿದ್ದಾರೆ. ಒಂದು ಕಡೆ ಈ ತೋಟಗಳನ್ನೂ ಬೆಳೆಸಬೇಕೆಂದು ಹೇಳುತ್ತಾರೆ, ಇನ್ನೊಂದು ಕಡೆ ಇವುಗಳಿಗೆ ceiling ಹಾಕುತ್ತೇವೆಂದು ಹೇಳುತ್ತಾರೆ. ಇದರಿಂದ ಅಡಿಕೆ ಬೆಳೆಯನ್ನು ಬೆಳೆಯತಕ್ಕವನಿಗೆ, ಮತ್ತು ಅಡಿಕೆಯನ್ನು ರಫ್ತುಮಾಡಬೇಕೆಂಬ ಉದ್ದೇಶಕ್ಕೆ ಅಡಚಣೆಯಾಗುತ್ತದೆ. ಅಡಿಕೆ ಮತ್ತು ತೆಂಗಿನ ಬೆಳೆಗಳಿಗೆ ಯಾವ ರೀತಿಯ ಸೀಲಿಂಗನ್ನೂ ಮಾಡಬೇಕಾಗಿಲ್ಲ. ಇವೆರಡು ಬೆಳೆಗಳಿಗೂ ವಿನಾಯಿತಿ ಕೊಡಬೇಕು. ಇವು ದೇಶಕ್ಕೆ ಸಮೃದ್ಧಿಯನ್ನುಂಟುಮಾಡತಕ್ಕದ್ದಾಗಿವೆ ಎಂದು ದೇಶದ ಹತ್ತಾರು ಜನ ತಜ್ಞರು ಹೇಳಿದ್ದಾರೆ. ಆದುದರಿಂದ ಅಡಿಕೆ ಮತ್ತು ತೆಂಗಿನ ತೋಟಗಳನ್ನು ಬೆಳೆಸುವುದಕ್ಕೆ ಉತ್ತೇಜನ ಕೊಡಬೇಕು. ಯಾವ ರೀತಿಯಲ್ಲಿಯೂ discourage ಮಾಡಬಾರದು. ಈ ಸಲಹೆಯನ್ನು ಸಮಿತಿಯವರು ಒಪ್ಪಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ವರದಿಯಲ್ಲಿ ಕಾಂಪೆನ್ಸೇಷನ್ ಕೊಡುವ ವಿಷಯವನ್ನು ಹೇಳಿದ್ದಾರೆ. ಮೂಲ ಗೇಣಿದಾರರ ಅಥವ ಖಾಯಂ ಗೇಣಿದಾರರಾಗಿದ್ದರೆ, ಅವರಿಗೆ ಗೇಣಿಯ ಎಂಟುಪಟ್ಟು ಎಂದೂ, ಖಾಯಂ ಗೇಣಿದಾರರಲ್ಲದವರಿಗೆ 15 ಪಟ್ಟು ಎಂದೂ ಹೇಳಿದ್ದಾರೆ. ನಮ್ಮಲ್ಲಿ ಸಾಮಾನ್ಯವಾಗಿ ಎಲ್ಲಿಯೂಕೂಡ ಖಾಯಂ ಗೇಣಿದಾರರೆಂದೇ ಭಾವಿಸಬೇಕಾಗುತ್ತದೆ. ಈ ವರದಿಯಲ್ಲಿರುವ ವ್ಯತ್ಯಾಸವನ್ನು ನೋಡಿದರೆ ವಿಚಿತ್ರವಾಗಿ ಕಾಣುತ್ತದೆ. ಕಾಂಪೆನ್ಸೇಷನ್ ಗೇಣಿಯ 15 ಪಟ್ಟು ಸಿಕ್ಕುತ್ತದೆಂದು ನಾವೆಲ್ಲರೂ ಕೂಡ ತಿಳಿದಿದ್ದೆವು. ಜಮೀನುಮಾಲೀಕ ಎಷ್ಟೋ ವರ್ಷಗಳಿಂದ, ಈ ಹೊತ್ತಿಗೂ ಆ ಜಮೀನಿನ ಮೇಲೆಯೇ ಅವಲಂಬನೆ ಮಾಡಿಕೊಂಡಿದ್ದಾನೆ. ಗೇಣಿಯ ಎಂಟು ಪಟ್ಟು ಕಾಂಪೆನ್ಸೇಷನ್ ಕೊಟ್ಟರೆ ಬಹಳ ತೊಂದರೆಯಾಗುತ್ತದೆ. ಎಲ್ಲರಿಗೂ 15 ಪಟ್ಟು ಹಣ ಕೊಡುತ್ತಾರೆಂಬ ಭಾವನೆ ಬಂದಿದೆ. ಆದುದರಿಂದ ಖಾಯಂ ಗೇಣಿದಾರರ ವಿಷಯದಲ್ಲಿ ಎಂಟು ಪಟ್ಟು ಎಂದು ಸೂಚಿಸುವುದನ್ನು ತೆಗೆದುಹಾಕಿ ವಿಮರ್ಶೆಮಾಡಿ ಎಲ್ಲರಿಗೂಸಹ 15 ಪಟ್ಟು ಹಣ ಕೊಡುವಂತೆಮಾಡಬೇಕು. ಇದರಿಂದ ಭೂಮಿಯನ್ನು ಕೊಡತಕ್ಕವನಿಗೂ ಕೂಡ ಮುಂದಿನ ವ್ಯವಹಾರಕ್ಕೆ ಒಂದು ದಾರಿಯಾಗುತ್ತದೆ. ಹಣವನ್ನು ಕೊಡುವಾಗ 20 ವರ್ಷಗಳ ಕಂತುಗಳಲ್ಲಿ ಕೊಡಬೇಕು. ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳಲ್ಲಿ ಕೊಡಬೇಕು ಎಂದು ಉದ್ದೇಶಿಸಲಾಗಿದೆ. ಎಲ್ಲರೂ ದೇಶಕ್ಕೋಸ್ಕರ ದುಡಿದವರು. ಜಮೀನನ್ನು ಕೊಡುವವರೂ ಮುಂದೆ ಜೀವನ ನಡೆಸುವಂತಾಗಿ, ನಾನು ಮಾಡಿರುವ ಕೆಲಸ ದೇಶಕ್ಕೋಸ್ಕರ ಎನ್ನುವ ಭಾವನೆ ಬರಬೇಕು. ಪರಿಹಾರ ರೂಪದಲ್ಲಿ ಕೊಡತಕ್ಕ ಹಣವೇನಿದೆ ಅದನ್ನು ಅವನು ಬೇರೆ ಉದ್ಯಮಗಳಲ್ಲಿ ವಿನಿಯೋಗಿಸಲು ಅನುಕೂಲವಾಗುವಂತಿರಬೇಕು. ಈಗ ವಿಶ್ವೇಶ್ವರಯ್ಯ ಸ್ಕೀಂ ತರಬೇಕು ಎಂದು ಏನೇನೋ ಮಾಡುತ್ತಾ ಇದ್ದಾರೆ. ಈ ಯೋಜನೆಗಳನ್ನು ಜಾರಿಗೆ ತಂದು ಜಮೀನು ಮಾಲೀಕನು ಬೇರೆ ಉಪಕಸುಬನ್ನು ಅದೇ ಗ್ರಾಮದಲ್ಲಿಯೇ ಮಾಡುವಂಥ

ವ್ಯವಸ್ಥೆಮಾಡಿ, ಅವನಿಗೆ ತಕ್ಷಣವೇ ಇನ್ನೊಂದು ಉದ್ಯೋಗವನ್ನು ಕಲ್ಪಿಸುವ ಮನೋಭಾವದಿಂದ ಕೆಲಸಮಾಡಬೇಕು. ಈಗಲೇ ದೇಶದಲ್ಲಿ ಸೇಕಡ 28-30 ಜನ ನಿರುದ್ಯೋಗಿಗಳಿದ್ದಾರೆ. ಅದು 40-50ಕ್ಕೆ ಏರ ಬಹುದು. ನಮ್ಮ ದೇಶದ ಪರಿಸ್ಥಿತಿ ಎಲ್ಲರಿಗೂ ಗೊತ್ತಿದೆ. ಇನ್ನೊಂದುಕಡೆ family planning ಹೇಳಿಕೊಡುತ್ತಿದ್ದಾರೆ. ನಮ್ಮ ದೇಶದಲ್ಲಿ ಇಂಥ ಯೋಜನೆಗಳನ್ನು ತಯಾರುಮಾಡಿದ್ದರೂಕೂಡ ವರ್ಷೇ ವರ್ಷೇ ಕೋಟಿಗಟ್ಟಲೆ ಜನಸಂಖ್ಯೆಯು ಉತ್ಪತ್ತಿಯಾಗು ತ್ತಿರಬೇಕಾದರೆ ನಮ್ಮ ದಾರಿದ್ರ್ಯದ ಮಟ್ಟ ಇನ್ನೂ ಜಾಸ್ತಿಯಾಗುತ್ತದೆ. ಜಮೀನು ಮಾಲೀಕರಿಗೆ 20 ವರ್ಷದ ಕಂತುಗಳಲ್ಲಿ ಪರಿಹಾರ ದ್ರವ್ಯವನ್ನು ಕೊಡುತ್ತೇವೆಂದರೆ ಅವರು ಆ ಹಣವನ್ನು ಯಾವ ಉದ್ಯೋಗದಲ್ಲಿಯೂ ವಿನಿಯೋಗಮಾಡಲು ಆಗದೆ ನಿರುದ್ಯೋಗಿಗಳಸಂಖ್ಯೆ ಹೆಚ್ಚುವುದು. ಇದು ಸಾಧು ವಾದ ಮಾರ್ಗವಲ್ಲ. ಪರಿಹಾರ ಹಣವನ್ನೆಲ್ಲ ಒಂದೇ ಗಂಟಿನಲ್ಲಿ ಆದಷ್ಟುಬೇಗ ಕೊಡಬೇಕು. ಇದು ಸಾಧ್ಯ ವಿಲ್ಲದಿದ್ದರೆ, ಅದರಲ್ಲಿ ಅರ್ಧಭಾಗವನ್ನಾದರೂ ತಕ್ಷಣ ಪಾವತಿಮಾಡಿ ಗ್ರಾಮದಲ್ಲಿಯೇ ಏನಾದರೂ ಒಂದು ಉದ್ಯಮವನ್ನು ಮಾಡುವುದಕ್ಕೆ ಅನುಕೂಲ ಮಾಡಿದರೆ ಅದರಿಂದ ಅಲ್ಲಿನ ನಿರುದ್ಯೋಗಿ ಜನಗಳಿಗೂ ಒಂದು ಉದ್ಯೋಗವನ್ನು ಕಲ್ಪಿಸಿದಂತಾಗುತ್ತದೆ. ಒಟ್ಟಿನಲ್ಲಿ ಸಮಾಜದಲ್ಲಿ ಕೆಲಸ ಹೆಚ್ಚುವಂತೆ ಒಂದು ಭಾವನೆಯನ್ನು ಮಾತ್ರ ವ್ಯಕ್ತಪಡಿಸಿದರೆ ಸಮಾಜಕ್ಕೆ ಒಳ್ಳೆಯದಾಗು ತ್ತದೆ ಎಂದು ನಾನು ಭಾವಿಸುತ್ತೇನೆ. ಎರಡನೆಯ ದಾಗಿ ಸಕ್ಕರೆ ಕಾರ್ಖಾನೆಗಳವರಿಗೆ ಬೇಕಾ ಗುವ ಜಮೀನಿನ ವಿಸ್ತೀರ್ಣದಲ್ಲಿ $\frac{1}{6}$ ಭಾಗ ಭೂಮಿ ಯನ್ನು ಕೊಡಬಹುದು ಎಂದು ಈ ವರದಿಯಲ್ಲಿ ಯೋಚಿ ಸಿದೆ. ಈ ಸಮಿತಿಯ ಅಭಿಪ್ರಾಯವನ್ನು ನಾನು ತುಂಬ ಸಂತೋಷದಿಂದ ಸ್ವಾಗತಿಸುತ್ತೇನೆ. ನಮ್ಮ ಈಗಿನ ಸರ್ಕಾರ ನಮ್ಮ ಜಿಲ್ಲೆಯಲ್ಲಿ ಇತ್ತೀಚೆಗೆ ಒಂದು ಸಕ್ಕರೆ ಕಾರ್ಖಾನೆಯವರಿಗೆ ಐದಾರು ಸಾವಿರ ಎಕರೆ ಜಮೀನು ಕೊಟ್ಟಿರುವ ಸಂದರ್ಭ ಇದೆ. ಸಮಿತಿ ಯವರು ಬಹಳ ದೂರದೃಷ್ಟಿಯಿಂದ $\frac{1}{6}$ ಭಾಗದಷ್ಟು ಭೂಮಿ ಎಂದು ಈ ಸಕ್ಕರೆ ಕಾರ್ಖಾನೆಗಳಿಗೆ ನಿಗದಿ ಮಾಡಿರುವಂಥಾದ್ದು ಸ್ವಾಗತಾರ್ಹವಾಗಿದೆ.

ಒಟ್ಟಿನಲ್ಲಿ ಜತ್ತಿ ಸಮಿತಿಯವರು ಸಾಕಷ್ಟು ವಿಚಾರ ಮಾಡಿ ಕ್ರಾಂತಿಕಾರಕ ರೂಪದ ಒಂದು ಮಾದರಿಯಲ್ಲಿ ವಿಚಾರ ಭಾವನೆ ಇರುವಹಾಗೆ ಮಾಡಿದ್ದಾರೆ. ನಮ್ಮ ರೆವಿನ್ಯೂಸಚಿವರು ಸ್ವಲ್ಪ ಜಾಸ್ತಿ ಜಮೀನು ಹೊಂದಿರ ತಕ್ಕಂಥವರು ಎಂದು ಕೇಳಿದ್ದೇನೆ. ಅಂಥವರು ಈ ವರದಿಗೆ ಬೆಂಬಲ ಕೊಟ್ಟಿರುವುದು ಸ್ವಾಗತಾರ್ಹ ವಾದುದು ಮತ್ತು ಸಾಧುವಾದುದು.

ಈ ವರದಿಯಲ್ಲಿ ಇನ್ನೊಂದು ಕೊರತೆ ನನ್ನ ಭಾವನೆ ಯಲ್ಲಿ ಕಂಡುಬಂದಿದೆ. ಜನಗಳಿಂದ ಬಂದ ಆಕ್ಷೇಪಣೆ ಗಳು ಈ ವರದಿಯಲ್ಲಿ ಒಂದುಕಡೆ ಕೊಟ್ಟಿದ್ದರೆ, ಭೂ ಸುಧಾರಣೆ ವಿಷಯದಲ್ಲಿ ಸಾಕಷ್ಟು ಯೋಚನೆಮಾಡು ವುದಕ್ಕೆ ಮತ್ತು ವಿಮರ್ಶೆ ಮಾಡುವುದಕ್ಕೆ ಅವಕಾಶ ವಾಗುತ್ತಿತ್ತು. ಜನರಿಂದ ಸಾಮಾನ್ಯವಾಗಿ ಬಂದ ಅಭಿಪ್ರಾಯಗಳು ಇದರಲ್ಲಿ ಅಡಕವಾಗಿಲ್ಲ. ಅವು ಗಳನ್ನು ಈ ವರದಿಯಲ್ಲಿ ಸೇರಿಸಿದ್ದರೆ ಚೆನ್ನಾಗಿತ್ತು.

ಒಟ್ಟಿನಲ್ಲಿ, ಈ ಸುಧಾರಣೆ ಕೂಡಲೆ ಬರಬೇಕು. ನಾವೇನು ಜನತೆಗೆ ಹೇಳಿಕೊಳ್ಳುತ್ತಾ ಇದ್ದೇವು, ಅದನ್ನು ಕಾರ್ಯರೂಪಕ್ಕೆ ತರಬೇಕು. ಜಮೀನು ಎಲ್ಲರಿಗೂ ಸಿಗುತ್ತದೆ ಎಂದು ನನಗನಿಸುವುದಿಲ್ಲ. ಆದರೆ ಜನಗಳ ಜೀವನಮಟ್ಟದಮೇಲೆ, ಜಮೀನು ಹಂಚಿಕೆಯಾಗ ಬೇಕು. ಶ್ರೀ ಆರ್ಮುಗಮ್‌ರವರು ರಿಲಿಜಿಯಸ್ ಇನ್ಸಿಟಿಟ್ಯೂಷನ್ ಲ್ಯಾಂಡ್ಸ್ ಹರಿಜನರಿಗೆ ಹಂಚಿಕೆ ಯಾಗಬೇಕೆಂದು ಹೇಳಿದರು. ಪಲ್ಲಕ್ಕಿಯಲ್ಲಿ ದೇವರನ್ನು ಹೊತ್ತುಕೊಂಡು ಹೋಗ ವ ಜನಗಳಿಗೆ ಮತ ಸಂಬಂಧ ವಾದ ಸಂಸ್ಥೆಗಳ ಅಧೀನದಲ್ಲಿರುವ ಜಮೀನುಗಳನ್ನು ಹಂಚಬೇಕು. ಆವಾಗ ದೇವರು ಸಂತುಷ್ಟನಾಗು ತ್ತಾನೆ. ಇದುವರೆಗೆ ಅಂಥಹ ಜಮೀನುಗಳಿಂದ ಬಂದ ಉತ್ಪತ್ತಿ ನಮ್ಮಂಥವರು ಅನುಭವಿಸಿದ್ದಾರೆ. ದೇವ ರಿಗೆ ಅರ್ಪಿಸಿದ ನೈವೇದ್ಯವನ್ನು ಊಟಮಾಡಿದವರು ನಾವು. ದೇವರನ್ನು ಹೊತ್ತವರು ಆಚೆ ಇರುತ್ತಾರೆ. ಯಾರು ದೇವರನ್ನು ಹೊತ್ತು ಕಷ್ಟಪಟ್ಟಿದ್ದಾರೋ, ಅಂಥವರಿಗೆ ಈ ದೇವಾಲಯಗಳ ಭೂಮಿ ಸೇರಬೇಕು ಎಂಬ ಸಲಹೆಯನ್ನುಮಾಡಿ, ಈ ವರದಿಯ ಮೇಲಿನ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಪಿ. ಜಿ. ಸಿದ್ಧಾಂತಿ (ಮುದ್ದೆಬಿಹಾಳ್).—ಸ್ವಾಮಿ, ಈ ಸಮಿತಿ ವರದಿ ಬಗ್ಗೆ ನಾಲ್ಕು ಮಾತು ಗಳನ್ನು ಹೇಳಬೇಕೆಂದಿದ್ದೇನೆ. ಸಮಿತಿಯವರು ಅವರ ವರದಿಯ ಮೊದಲನೆಯ ಪುಟದಲ್ಲಿ ಹೇಳಿದಂತೆ, ಸಮಿತಿಗೆ ಇರುವ ಆದೇಶ. "ಯೋಜನಾ ಆಯೋಗದ ಶಿಫಾರಸುಗಳಿಗೆ ಅನುಗುಣವಾಗಿ ಭೂಮಿ ಗೇಣಿದಾರಿ ಗಳನ್ನು ವಿನಿಯಮನಗೊಳಿಸುವ ಸಲುವಾಗಿ ಸೂಕ್ತ ವಾದ ವ್ಯವಸ್ಥೆಗಳನ್ನು ಸೂಚಿಸತಕ್ಕದ್ದು." ಆದ ಕಾರಣ ಮಿತಿ ಹಾಕುವುದಕ್ಕೆ ಸಮಿತಿಯವರಿಗೆ ಮನ ಸ್ಸಿದೆಯೋ, ಇಲ್ಲವೋ! ಅದರೂ ಅವರು ಯೋಜನಾ ಆಯೋಗದ ಶಿಫಾರಸುಗಳಿಗೆ ಅನುಗುಣವಾಗಿ ಬರೆಯ ತಕ್ಕಂಥಾದ್ದು ಎಂದು ಇದರ ಅರ್ಥವಾಗುತ್ತದೆ. ಪುನಃ 92ನೆಯ ಪುಟದಲ್ಲಿ ಸಮಿತಿಯವರು ಈ ರೀತಿ ಹೇಳಿದ್ದಾರೆ. "ಇತರ ಭಾಗಗಳಲ್ಲಿ ಪರಮಾವಧಿ ಗಳನ್ನು ಸಲಹೆ ಮಾಡಿಲ್ಲವಾಗಿ, ನಾವು ಪ್ರಾರಂಭದಲ್ಲಿ ಬೊಂಬಾಯಿ ರಾಜ್ಯದಲ್ಲಿನ ಪದ್ಧತಿಯನ್ನು ಅಂಗೀ ಕರಿಸಿ, ಸ್ವತಃ ಬೇಸಾಯವಾಗುತ್ತಿರುವ ಈಗಿನ ಹಿಡುವಳಿಗಳ ಮೇಲೆ ಯಾವ ಪರಮಾವಧಿಯನ್ನೂ ಸಲಹೆ ಮಾಡಬಾರದೆಂಬ ಮನಸ್ಸುಳ್ಳವರಾಗಿದ್ದೇವೆ. ಆದರೆ, ಈ ವಿಷಯವನ್ನು ಜಾಗರೂಕತೆಯಿಂದ ಪರಿ ಶೀಲಿಸಿ, ಈಗಿರತಕ್ಕ ಹಿಡುವಳಿಗಳಮೇಲೆ ಸಹ ಪರಮಾವಧಿಯನ್ನು ವಿಧಿಸಬೇಕೆಂಬ ನಿರ್ಧಾರಕ್ಕೆ ಬಂದಿ ದ್ದೇವೆ." ಸಮಿತಿ ಸದಸ್ಯರಿಗೆ ಮನಸ್ಸಿರಲಿ, ಇಲ್ಲ ದಿರಲಿ, ಅವರು ಶಿಫಾರಸುಗಳನ್ನು ಅಂಗೀಕರಿಸಿದ್ದಾರೆ. ಯೋಜನಾ ಆಯೋಗದ ಶಿಫಾರಸುಗಳಲ್ಲಿ ಎಷ್ಟು ಹೆಚ್ಚು ಕಡಿಮೆ ಮಾಡುವುದಕ್ಕೆ ಸಮಿತಿಯವರಿಗೆ ಇಷ್ಟವಿತ್ತು ಮತ್ತು ತಮ್ಮ ಸ್ವಂತ ಅಭಿಪ್ರಾಯವೇನು ಎಂದು ಈ ವರದಿಯಿಂದ ತಿಳಿಯುವುದಕ್ಕೆ ಕಠಿಣವಾಗಿದೆ.

ಈ ವರದಿ ಮಾಡಿದವರು ಏನು ಪುರಾವಿ ಸಮಿತಿ ಮುಂದೆ ಬಂದಿತ್ತು, ಸಾಕ್ಷಿಗಾರರು ಬಂದವರು ಏನು ಹೇಳಿದರು, ಭೂ ಒಡೆಯರು ಮತ್ತು ಗೇಣಿದಾರರು ಈ ಸುಧಾರಣೆ ಸಂಬಂಧದಲ್ಲಿ ಏನು ಹೇಳಿದರು ಎನ್ನು ವುದನ್ನು ಈ ವರದಿಯಲ್ಲಿ ತಿಳಿಸಿದ್ದರೆ, ನಾವು ಚರ್ಚೆ ಮಾಡುವ ಕಾಲಕ್ಕೆ ಅನುಕೂಲವಾಗುತ್ತಿತ್ತು. ಈ ವರದಿಯಲ್ಲಿ ಇಂತಿಂಥವರು ಇಂತಿಂಥದನ್ನು ಹೇಳಿದರು ಎಂದು ಎಲ್ಲಿಯೂ ಹೇಳಿಲ್ಲ. ಮೊದಲನೆ ಅಧ್ಯಾಯದಲ್ಲಿ ಬರೆದಿದ್ದಾರೆ. "ಈ ಅಧ್ಯಾಯವನ್ನು ಯೋಜನಾ ಆಯೋಗದವರ ಬಳಿ ದೊರೆತ ವಿಷಯ ಸಾಮಗ್ರಿ ಯನ್ನು ಆಧಾರವಾಗಿಟ್ಟುಕೊಂಡು ಬರೆಯಲಾಗಿದೆ." ಎರಡನೆಯ ಅಧ್ಯಾಯದಲ್ಲಿ ಗೇಣೀದಾರಿಯ ಇತಿಹಾಸ ವನ್ನು ಕೊಟ್ಟಿದ್ದಾರೆ. ಮೂರನೆಯ ಅಧ್ಯಾಯ ದೊಳಗೆ ಮೂಲೋದ್ದೇಶಗಳೇನೆಂಬುದನ್ನು ತಯಾರು ಮಾಡಿಕೊಂಡಿದ್ದಾರೆ.

(ಶ್ರೀ ಪಿ. ಜಿ. ಸಿದ್ಧಾಂತಿ)

ವರದಿಯ 55ನೆಯ ಪುಟದಲ್ಲಿ ಹೀಗೆ ಹೇಳಿದ್ದಾರೆ:

"ಮುಂದಿನ ಅಧ್ಯಾಯಗಳಲ್ಲಿರುವ ನಮ್ಮ ಶಿಫಾರಸುಗಳಿಗೆ, ಮುಖ್ಯವಾಗಿ ಎರಡು ಉದ್ದೇಶಗಳು ಪ್ರೇರಕವಾಗಿವೆ: ಅವೆಂದರೆ,—(1) ಭೂಮಾಲಿಕ ಗೇಣೀದಾರರ ಸಂಬಂಧವನ್ನು ನಿರ್ಮೂಲನ ಮಾಡುವುದು ಮತ್ತು (2) ಭೂಮಿ ಇಲ್ಲದವರ ಆಶಯಗಳನ್ನು ಈಡೇರಿಸುವುದಕ್ಕಾಗಿ ಭೂಮಿಗಳನ್ನು ಪುನಃ ಹಂಚುವುದು."

ಸಮಿತಿಯವರು ಎರಡು ಉದ್ದೇಶಗಳನ್ನು ಇಟ್ಟುಕೊಂಡಿದ್ದಾರೆ. ಭೂಮಿಯೊಳಗೆ ಬೆಳೆ ಜಾಸ್ತಿ ಮಾಡುವ ಉದ್ದೇಶವೇನೂ ಇದರಲ್ಲಿ ಇಲ್ಲ. ಗೇಣೀದಾರೀ ಸುಧಾರಣೆಗಳ ಮೂಲೋದ್ದೇಶಗಳಲ್ಲೇನೋ ಇದನ್ನು ಇಟ್ಟುಕೊಂಡಿದ್ದಾರೆ. ಈ ವರದಿಯಲ್ಲಿ ಗೇಣೀದಾರಿ ನಿರ್ಮೂಲ ಮಾಡುವುದು ಉದ್ದೇಶ ಎಂದು ಹೇಳಿ, ಕೆಲವು ಜಮೀನುಗಳಿಗೆ ವಿನಾಯಿತಿ ಕೊಟ್ಟಿದೆ.

ಎರಡನೆಯ ಉದ್ದೇಶದಲ್ಲಿ, ಭೂಮಿ ಇಲ್ಲದವರ ಆಶಯಗಳನ್ನು ಈಡೇರಿಸುವುದಕ್ಕಾಗಿ ಭೂಮಿಗಳನ್ನು ಪುನಃ ಹಂಚುವುದು ಎಂದು ಹೇಳಿದೆ. ಆದರೆ ಎಷ್ಟು ಭೂಮಿ ಹಂಚುವುದಕ್ಕೆ ಶಕ್ಯ, ಹಂಚಿದಮೇಲೆ ಎಷ್ಟು ಉಳಿಯುತ್ತದೆ ಎಂಬ ಲೆಕ್ಕಪತ್ರ ಇಲ್ಲ. ಮತ್ತೆ ಏನು ಈಡೇರಿಸುತ್ತೀರಿ? ಆದ್ದರಿಂದ ಈ ಎರಡು ಅಂಶಗಳನ್ನು ವಿಚಾರ ಮಾಡಬೇಕಾಗಿದೆ.

ಸ್ವಂತ ಸಾಗುವಳಿ ವಿಚಾರ ಹೇಳುವಾಗ ಅಲ್ಪ ವಯಸ್ಕರು, ವಿಧವೆಯರು, ಮಾನಸಿಕ ಅನರ್ಹತೆ ಉಳ್ಳವರು, ಇಂಥವರಿಗೆಲ್ಲಾ ಈ ಸುಧಾರಣೆಯ ಹರಿಕತ್ತು ಇಲ್ಲದಂತೆ ಸಮಿತಿಯವರು ಮಾಡಿದ್ದಾರೆ.

6 P.M.

ಇದೂ ಇಲ್ಲದೆ ಇನ್ನೂ ಕೆಲವು ಜಮೀನುಗಳನ್ನು ಬಿಟ್ಟಿದ್ದಾರೆ. ಅದನ್ನು 108ನೇ ಪೇಜಿನಲ್ಲಿ ಬರೆದಿದ್ದಾರೆ. ಆದ್ದರಿಂದ ಅದನ್ನು ಓದುವುದಕ್ಕೆ ನಾನು ಹೋಗುವುದಿಲ್ಲ.

ಇನ್ನು ಗೇಣಿ ಸಂಬಂಧಿ, ಇನ್ನು ಮುಂದೆ ಯಾವ ರೀತಿ ನಿರ್ಧಾರ ಮಾಡಬೇಕು ಎನ್ನುವುದಕ್ಕೆ ಮೂರು ವಿಧ ಹೇಳಿದ್ದಾರೆ. ಏನೆಂದರೆ (1) ಗೇಣಿದಾರನಿಂದ ಗೇಣಿಯನ್ನು ವಸೂಲು ಮಾಡಿಕೊಂಡು ಅವನ್ನು ಜಮೀನುದಾರನಿಗೆ ಪಾವತಿ ಮಾಡಬಹುದು. ಎರಡನೆಯದು ಎಂದರೆ ಭೂಮಾಲೀಕನಿಗೆ ಪರಿಹಾರದ್ರವ್ಯವನ್ನು ಪಾವತಿ ಮಾಡಿ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು. ಪರಿಹಾರ ಕೊಡುವುದೂ ಸಹಿತ ಯಾವ ಗೇಣಿ ಇರುತ್ತದೆ, ಅದರ 15 ಪಟ್ಟು ಠರಾವು ಮಾಡುವುದು, ಮೂರನೆಯದು ಎಂದರೆ ಪರಮಾವಧಿ ಹಣ ಕೊಡುವುದು ಎಷ್ಟಿರಬೇಕೆಂಬುದು. ಈಗ ನಾನು ಖುಷ್ಕಿ ಜಮೀನು ಸಂಬಂಧವಾಗಿ ಹೇಳುತ್ತೇನೆ. ಸಾಗುವಳಿ ಮಾಡಲು ಏನು ಖರ್ಚು ಬರುತ್ತದೆ ಅದನ್ನು ಬಿಟ್ಟು ಉಳಿದದ್ದರಲ್ಲಿ ಅರ್ಧ ಮಾಲೀಕನಿಗೆ ಅರ್ಧ ರೈತನಿಗೆ ಹೋಗಬೇಕೆಂದು ಮಾಡಿದ್ದಾರೆ. ಇದವರೆಗೂ ಆ ರೀತಿ ಜಾರಿಗೆ ಕೊಟ್ಟಿದ್ದಾರೆ. ಗೇಣಿದಾರ ಸಾಗುವಳಿ ಮಾಡಬೇಕಾದರೆ ಖರ್ಚು ಮಾಡಬೇಕಾಗುತ್ತದೆ ಖರ್ಚು ಮಾಡದೇ ಸಾಗುವಳಿ ಆಗುವುದಿಲ್ಲ. ಇವತ್ತಿನ ದಿವಸ ನಮ್ಮ ಪ್ರದೇಶದಲ್ಲಿ ಹೋಗಿ ನೋಡಿದ್ರೇ ಆದರೆ ಆತ ಎಷ್ಟು ಖರ್ಚುಮಾಡುತ್ತಾನೆ, ಎಷ್ಟು ಖರ್ಚು ಬೀಳುತ್ತದೆ ಎಂಬುದು ಗೊತ್ತಾಗುತ್ತದೆ. ಆ ಲೆಕ್ಕ ಇದೆ. 20 ವರ್ಷದಿಂದ ತಾನೇ ಸಾಗುವಳಿ ಮಾಡಿಕೊಂಡು ಬಂದರೂ ಸಹ ಅವನಿಗೆ ವರ್ಷೇ ವರ್ಷೇ ಖರ್ಚು ಬೀಳುತ್ತಲೇ ಇರುತ್ತದೆ. ಈಗ ಪರಮಾವಧಿ ಹಣ 5,400 ರೂಪಾಯಿ ಬರುತ್ತದೆ ಎಂದು ಹೇಳುತ್ತಾರೆ. ಇದರಿಂದ ಯಾರಿಗೂ ಫಾಯಿದೆ ಇಲ್ಲ. ಪರಿಹಾರ ಕೊಡುವುದರಲ್ಲೂ ಸಹ ಉತ್ಪನ್ನ ಎಷ್ಟು ಬರುತ್ತದೆಯೋ ಅಷ್ಟು ಕೊಡೋಣ, ಜೀವನಾಂಶ ಎಂದು ಹೇಳಬಹುದು ಸಣ್ಣ ಸಣ್ಣ ಹಿಡವಳಿದಾರರಿಗೆ ಇದರಿಂದ ಪರಿಣಾಮವೇನಾಗುತ್ತದೆ ಎಂಬುದನ್ನು ನೋಡಬೇಕು. ಏಕೆಂದರೆ 500 ರೂಪಾಯಿ ವರಮಾನ ಇರುವ ಹಿಡುವಳಿ ಇದ್ದವರಿಗೆ ಎಷ್ಟು ಬರುತ್ತದೆ? 15 ಪಟ್ಟು ಎಂದರೆ ಪರವಾಗಿಲ್ಲ. 1,000, 2,000 ಎಕರೆ ಇರುವ ಇನಾಂದಾರರಿದ್ದರೆ ಅವರಿಗೆ ಅನುಕೂಲ 6,000 8,000, 10,000 ರೂಪಾಯಿ ಬರುತ್ತದೆ. ಅವರಿಗೆ ಫಾಯ್ದೆ ಆಗುತ್ತದೆ. ಆದರೆ ಸಣ್ಣ ಸಣ್ಣ ಹಿಡುವಳಿದಾರರಿಗೆ ಇದರಿಂದ ಲುಕ್ಸಾನಾಗುತ್ತದೆ.

ಇನ್ನೊಂದು ವಿಷಯ ಹೇಳುವಂಥಾದ್ದು ಏನೆಂದರೆ ಗೇಣಿ ಜಾಸ್ತಿಯಾಗುತ್ತಿದೆ ಎಂದು ಸೂಚಿಸಿರುತ್ತಾರೆ. ಅವರು ಲೆಕ್ಕ ಪರಿಶೀಲನೆ ಮಾಡಿಲ್ಲ. 20 ವರ್ಷ ಲೆಕ್ಕ ಇಟ್ಟವರು ಹೇಳಲಿ. ಕಮಿಟಿಯ ಮುಂದೆ ಯಾವ ಪುರಾವೆ ಇದೆ ಇದನ್ನು ಸಮರ್ಥಿಸುವುದಕ್ಕೆ ಎಂಬುದನ್ನು ಅವರು ಹೇಳಿಲ್ಲ. ಇದರಿಂದ ಗೇಣಿದಾರರಿಗೆ ಫಾಯ್ದೆ ಆಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ.

ಆದ್ದರಿಂದ ಎಷ್ಟೇ ಕಮ್ಮಿಯೇ ಆದರೂ ಪರವಾಯಿಲ್ಲ, ಆದರೆ ಒಂದು ಆಖೈರು ನಿರ್ಧಾರಮಾಡಿ. ಆಮೇಲೆ 2,000 ರೂಪಾಯಿಗಳಷ್ಟು ಒಟ್ಟು ಉತ್ಪನ್ನವಿರುವವರ ವಿಷಯದಲ್ಲಿಯೂ ತಾವು ಸ್ವಲ್ಪ ವಿನಾಯಿತಿ ತೋರಿಸಬೇಕು. ಬೊಂಬಾಯಿನಲ್ಲಿ ಇದೇ ರೀತಿ ಇದೆ. ಹಾಗಿದ್ದರೂ ಈ ವರದಿಯಲ್ಲೇಕೆ ಕೊಟ್ಟಿಲ್ಲವೋ ಗೊತ್ತಿಲ್ಲ. ಪಿ. ಎಸ್. ಪಿ. ಯವರಾದರೂ ಇದನ್ನು ಹೇಳುತ್ತಾರೆಂದು ನಾನು ಭಾವಿಸಿದ್ದೆ. ಇದಕ್ಕೆ ನನ್ನ ಸಮರ್ಥನೆ ಇಷ್ಟೆ. ಕೇವಲ ನೂರುರೂಪಾಯಿ ತೆಗೆದುಕೊಂಡು ಗಿರಣಿಗಳಲ್ಲಿ, ನಾನಾ ಕೈಗಾರಿಕೆಗಳಲ್ಲಿ ಕೆಲಸಮಾಡಿಕೊಂಡಿರುವ ಅನೇಕ ನೌಕರಮಾನೆಯರಿರುತ್ತಾರೆ. ಅಂಥವರ ವಾರ್ಷಿಕ ಉತ್ಪತ್ತಿ ಕೇವಲ 1,200 ರೂಪಾಯಿಗಳಾಯಿತು. ಇಷ್ಟರಿಂದಲೇ ಅವರ ಜೀವನ ಸಾಗದೆ ಜಮೀನಿನಮೇಲೆಯೂ ಸ್ವಲ್ಪಮಟ್ಟಿಗೆ ಅವಲಂಬಿಸಿರುತ್ತಾರೆ. ಆದ್ದರಿಂದ ಕೊನೆಯಪಕ್ಷ 2,000 ರೂಪಾಯಿಗಳ ಒಟ್ಟು ಉತ್ಪನ್ನವಿರುವವರ ವಿಷಯದಲ್ಲಿಯೂ ಈ ರೀತಿಯ ವಿನಾಯಿತಿಯನ್ನು ಕೊಡಬೇಕೆಂದು ನಾನು ಸೂಚಿಸುತ್ತೇನೆ.

ಇನ್ನು ನಾನು ಹೆಚ್ಚಿಗೆ ಹೇಳಬಯಸುವುದಿಲ್ಲ. ಎರಡು ಮೂರು ವಿಷಯಗಳನ್ನು ಮಾತ್ರ ಹೇಳಿ ಮುಗಿಸುತ್ತೇನೆ.

ಈ ವರದಿಯಲ್ಲಿ ಪರಿಹಾರದ್ರವ್ಯವನ್ನು ಗೇಣಿಯ 15 ರಷ್ಟು ಎಂಬುದಾಗಿ ನಿರ್ಧರಿಸಿದ್ದಾರೆ. ಪರಿಹಾರ ಕೊಡುವುದರಲ್ಲೂ ಒಂದು ನ್ಯಾಯರೀತಿ ಇರಬೇಕು. ಎಲ್ಲರಿಗೂ ಒಂದೇ ವಿಧವಾಗಿ ಪರಿಹಾರ ಕೊಡುವುದು ಸರಿಯಲ್ಲ. ಇದರಲ್ಲೂ ಒಂದು gradation ಇಟ್ಟುಕೊಳ್ಳಿ. ತೀರಾ ಕಡಮೆ ಜಮೀನಿನವರಿಗೆ ಪೂರಾ ಮಾರ್ಕೆಟ್ ದರವನ್ನು ಕೊಡಿ. ಅವರಿಗಿಂತ ಸ್ವಲ್ಪ ಜಾಸ್ತಿಯಿರುವವರಿಗೆ ಮಾರ್ಕೆಟ್ ದರದ ಶೇಕಡ 75 ರಷ್ಟು ಕೊಡಿ. ಸಾವಿರ ಎಕರೆಗಳಿಗಿಂತ ಜಾಸ್ತಿಯಿರುವವರಿಗೆ ಮಾರ್ಕೆಟ್ ದರದ ಶೇಕಡ 75 ರಷ್ಟನ್ನು ಮಾತ್ರ ಕೊಡಿ, ಸ್ವಲ್ಪ ಉತ್ಪನ್ನವಿರುವವರಿಗೂ ಜಾಸ್ತಿ ಉತ್ಪನ್ನವಿರುವವರಿಗೂ ವ್ಯತ್ಯಾಸ ಮಾಡ

ಬೇಡವೇ ? ಸೋಷಿಯಲಿಸ್ಟ್ ಸೊಸೈಟಿಯಲ್ಲಿ ದೊಡ್ಡ ದೊಡ್ಡ ಆದಾಯ ಬರುವವರನ್ನೂ ಕಡಮೆ ಆದಾಯ ಬರುವವರನ್ನೂ ಸಮಗೊಳಿಸುವ ದೃಷ್ಟಿಯಿಂದ ಒಂದು Slab System ತರಬೇಕಾದ್ದು ಧರ್ಮ. ಆಗ ಎಲ್ಲರಿಗೂ ಸರಿಹೋಗುತ್ತದೆ. ಹಾಗಿಲ್ಲದೆ ಎಲ್ಲರಿಗೂ ಒಂದೇರೀತಿ ಯಿರುವಂತೆ ಮಾಡುವುದರಿಂದ ಪ್ರಯೋಜನವಿಲ್ಲ. ಕೇರಳದಲ್ಲಿ ಒಂದು ಕಾಯಿದೆಯಿದೆ, ಹೈದರಾಬಾದಿನಲ್ಲೂ ಒಂದು ಬಿಲ್ ಇದೆ. ಅವರು ಇದೇ ತತ್ವವನ್ನು ಅನುಸರಿಸಿದ್ದಾರೆ. ಆದರೆ ನೀವು ಮಾಡಿರುವ ರೀತಿಯಿಂದ ಸಣ್ಣ ಸಣ್ಣ ಹಿಡುವಳಿದಾರರನ್ನು ಹಾಳುಮಾಡುತ್ತಿದ್ದೀರಿ. ಸಣ್ಣ ಸಣ್ಣ ಹಿಡುವಳಿದಾರರನ್ನೂ ದೃಷ್ಟಿಯಲ್ಲಿಟ್ಟುಕೊಂಡು ತಾವು ನನ್ನ ಈ ಸಲಹೆಯನ್ನು ಯೋಚನೆ ಮಾಡಬೇಕೆಂದು ಹೇಳುತ್ತೇನೆ; ಪಿ.ಎಸ್.ಪಿ. ಯವರೇ ಈ ಅಂಶವನ್ನು ಎತ್ತುತ್ತಿದ್ದರೆಂದು ನಾನು ಭಾವಿಸಿದ್ದೆ, ಆದರೆ.........

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಪಿ.ಎಸ್.ಪಿ. ಯವರು ತಾವು ಏನು ಮಾಡಬೇಕೆಂದಿರುವುದಾಗಿ ಖಚಿತವಾಗಿ ಹೇಳಿಬಿಟ್ಟಿದ್ದಾರೆ. ಈಗ ಕಾಂಗ್ರೆಸ್‌ನವರು ಏನು ಮಾಡಬೇಕೆಂದಿದ್ದಾರೆಂಬುದನ್ನು ಹೇಳಬೇಕು. ಅಷ್ಟೆ.

ಶ್ರೀ ಪಿ. ಜಿ. ಸಿದ್ಧಾಂತಿ.—ಆಮೇಲೆ ಮೂಲ ಗೇಣಿದಾರರ ವಿಷಯದಲ್ಲಿ ಈಗ ನಮ್ಮಲ್ಲಿರುವುದಕ್ಕಿಂತ ಜಾಸ್ತಿ ಮಾಡಿದ್ದೀರಿ. ಮುಂಚೆ 6ರಷ್ಟು ಕೊಡಬೇಕೆಂದಿದ್ದುದನ್ನು ಈಗ 80 ರಷ್ಟು ಕೊಡಬೇಕೆಂದು ಮಾಡಿದ್ದೀರಿ. ನಮ್ಮಲ್ಲಿ 80,000 ಮೂಲ ಗೇಣಿದಾರರುಗಳಿದ್ದಾರೆ. ಇವರುಗಳು ಈಗ ಹೆಚ್ಚಿಗೆ ಕೊಡಬೇಕೆಂದು ಮಾಡಿರುವುದರಿಂದ ಇಷ್ಟೊಂದು ಬಡಜನರಿಗೆ ಲುಕ್ಸಾನು ಮಾಡಿದಂತಾಗುತ್ತದೆ. ಇವರಿಗೆ ಆರರಷ್ಟಕ್ಕಿಂತ ಜಾಸ್ತಿ ಮಾಡಲೇಕೂಡದೆಂದು ನಾನು ಹೇಳುತ್ತೇನೆ.

ಆಮೇಲೆ Family Holding ಎಂಬುದು ಎಷ್ಟಿರಬೇಕು ಎಂಬುದು. ಈ ಬಗ್ಗೆ ಹೈಕೋರ್ಟ್ ಜಡ್ಜಿಗಳೊಬ್ಬರನ್ನು ನಿರ್ಧರ ಮಾಡುವುದಾಗಿ ಹೇಳಿದ್ದೀರಿ. ಈಗ ನೀವು ಮಾಡಿರುವ ರೀತ್ಯಾ, ಯಾವನು ತನ್ನ ಜಮೀನಿಟ್ಟುಕೊಂಡು ಚೆನ್ನಾಗಿ ಉತ್ಪನ್ನ ಬರುವಂತೆ ಮಾಡಿಕೊಂಡು ಬಂದಿದ್ದಾನೋ ಅವನಿಗೆ ಕಡಮೆ ಬರುವಂತಾಗುತ್ತದೆ. ಯಾವನು ಹೆಚ್ಚಿಗೆ ಖರಾಬು ಬಿಟ್ಟುಕೊಂಡಿದ್ದನೋ ಅವನಿಗೆ ಈಗ ಫಾಯಿದೆಯಾಯಿತು. ಆದ್ದರಿಂದ ಕನಿಷ್ಠಪಕ್ಷ ಇಷ್ಟು ಎಕರೆ, ಇಷ್ಟು ಭೂಗಂದಾಯ ಎಂದು ಗೊತ್ತುಮಾಡಿ ವಿಸ್ತೀರ್ಣ, ಭೂ ಕಂದಾಯ ಎರಡನ್ನೂ ಸೇರಿಸಿಕೊಂಡು ನಿರ್ಧರ ಮಾಡಿದರೆ ಅನುಕೂಲವಾಗುತ್ತದೆ. ಈ ವಿಷಯವನ್ನು ಪರ್ಯಾಲೋಚಿಸಬೇಕೆಂದು ಹೇಳುತ್ತೇವೆ.

ಇನ್ನು ಒಂದೇ ಒಂದು ವಿಚಾರ. ಇಲ್ಲಿ ತಾವು ವಿಶ್ವವಿದ್ಯಾಲಯಗಳೇ ಮುಂತಾದ ಶಿಕ್ಷಣ ಸಂಸ್ಥೆಗಳವರಿಗೆ ಬಾಂಡುಗಳನ್ನು ಕೊಡುವ ಶಿಫಾರಸು ಮಾಡಿದ್ದೀರಿ. ಇದನ್ನು ನಾನು ಖಂಡಿತ ಒಪ್ಪುವುದಿಲ್ಲ. ಆ ಸಂಸ್ಥೆಗಳನ್ನೂ ಹಾಳುಮಾಡುವುದಕ್ಕೆ ನೀವು ಕಾರಣರಾಗುತ್ತೀರಿ. ಇದನ್ನು ನೋಡಿದರೆ ಇನ್ನು ಮುಂದೆ ಯಾರೂ ಶಿಕ್ಷಣ ಸಂಸ್ಥೆಗೆ ಸಹಾಯ ಮಾಡುವುದಕ್ಕೆ ಮುಂದೆ ಬರುವುದಿಲ್ಲ. ಸಾರ್ವಜನಿಕರು ಮುಂದೆ ಬಂದು ಶಿಕ್ಷಣ ಸಂಸ್ಥೆಗಳಿಗೆ ಸಹಾಯ ಮಾಡಬೇಕೆಂದು ಹೇಳುತ್ತಿದ್ದರೂ ಇನ್ನು ಮುಂದೆ ಯಾರೂ ಬರುವುದಿಲ್ಲ. ಮಾರಾಟ ಮಾಡುವುದಕ್ಕೆ ಅವಕಾಶವಿಲ್ಲವೆಂದರೆ ಇನ್ನು ಮುಂದೆ ಯಾರು ಕೊಡುತ್ತಾರೆ ಶಿಕ್ಷಣ ಸಂಸ್ಥೆಗಳಿಗೆ ? ಆದ್ದರಿಂದ ಸರ್ಕಾರದವರು ಈ ರೀತಿಯ ಕಾಯಿದೆಮಾಡಿ ದಾನಿಗಳನ್ನು ಬಂದು ಮಾಡುವುದು ಸರಿಯಲ್ಲ. ಇದರ ಬಗ್ಗೆ ಸಮಿತಿಯವರು ಮೇಲಿಂದ ಮೇಲೆ ಒತ್ತಿ ಹೇಳಿದ್ದಾರೆ. ವರದಿಯಲ್ಲಿ ಉನ್ನತವಟ್ಟದ ಸಾಗುವಳಿಮಾಡುವ ವಿಚಾರವಾಗಿ ಒಂದು ಪೂರ್ತಿ ಪ್ಯಾರಾಗ್ರಾಫ್ ಬರೆದಿದ್ದಾರೆ. ಅದು 125–126ನೇ ಪುಟದಲ್ಲಿ ಈ ರೀತಿ ಇದೆ :

" ಸಾಗುವಳಿದಾರನು, ಅವನು ಮಾಲೀಕನೇ ಆಗಿರಲಿ ಅಥವಾ ಗೇಣೀದಾರನೇ ಆಗಲಿ, ಪೂರ್ಣ ಶ್ರದ್ಧೆಯಿಂದ ಕೆಲಸಮಾಡದಿರುವುದರಿಂದ ಪ್ರತಿಫಲವು ಅಂದರೆ ಉತ್ಪತ್ತಿಯಲ್ಲಿ ಬಹಳ ಕಡಮೆಯಾಗಿರುತ್ತದೆಂಬ ನಮ್ಮ ಪ್ರವಾಸಗಳಕಾಲದಲ್ಲಿ ನಮ್ಮ ಗಮನಕ್ಕೆ ತರಲಾಯಿತು. ಗೇಣಿದಾರರು ಸರಿಯಾದ ರೀತಿಯಲ್ಲಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿಲ್ಲವೆಂದು ಕಂಡುಬರುತ್ತದೆ. ಅಸಡ್ಡೆಯಿಂದ ಜಮೀನಿಗೂ ಸಹ ನಷ್ಟ ಉಂಟಾಗುತ್ತದೆ. ಅನೇಕ ಸಂದರ್ಭಗಳಲ್ಲಿ, ಅದರಲ್ಲಿ ದೊಡ್ಡ ದೊಡ್ಡ ಹಿಡುವಳಿಗಳ ಸಂದರ್ಭಗಳಲ್ಲಿ ಜಮೀನು ನಾಶವಾಗುವುದನ್ನು ತಡೆಗಟ್ಟಲು ಸಂರಕ್ಷಣೆಯ ಕ್ರಮಗಳನ್ನಾಗಲಿ ಅಥವಾ ಗೊಬ್ಬರವನ್ನು ಹಾಕಿ ಭೂಮಿಯು ಫಲವತ್ತಾಗಿರುವಂತೆ ಮಾಡುವ ಕ್ರಮಗಳನ್ನಾಗಲಿ ಕೈಕೊಂಡಿಲ್ಲ, ಯಾವ ಸಾಗುವಳಿಯಿಂದಲೇ ಆಗಲಿ, ಅದರಿಂದ ಉತ್ಪತ್ತಿಯಾಗುವ ಫಸಲಿನ ಕನಿಷ್ಟ ಪರಿಮಿತಿಯನ್ನು ಗೊತ್ತುಮಾಡಬೇಕೆಂದೂ ಮತ್ತು ಆ ನಿಯಮವು ಮಾಲೀಕ, ಸಾಗುವಳಿದಾರನಿಗೂ ಮತ್ತು ಗೇಣಿದಾರನಿಗೂ ಅನ್ವಯಿಸುವಂತೆ ಒತ್ತಾಯಪಡಿಸಬೇಕೆಂದೂ ನಾವು ಸಲಹೆಮಾಡುತ್ತೇವೆ."

ನಮ್ಮ ಜಿಲ್ಲೆಯ ಧವಳೇಶ್ವರ ಎಂಬ ಗ್ರಾಮದಲ್ಲಿ ಬೇಕಾದಷ್ಟು ಸಾಗುವಳಿ ಮಾಡಲು ಭೂಮಿ ಇದೆ ವ್ಯವಸಾಯಕ್ಕೆ ನೀರನ್ನು ಪೂರೈಸಲು ಭಾವಿಗಳೂ ಸಹ ಇವೆ. ಆದರೆ ಭಾವಿಯ ನೀರನ್ನು ಯಾರೂ ಉಪಯೋಗಿಸುವುದಿಲ್ಲ. ದುರ್ದೈವದಿಂದ ನೀರಿನ ಸೌಲಭ್ಯವಿದ್ದರೂ ನೀರನ್ನು ಉಪಯೋಗಿಸಿ ಸರಿಯಾಗಿ ಉತ್ಪತ್ತಿ ಮಾಡುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ ವ್ಯವಸಾಯಗಾರರ ಮೇಲೆ ಜೋರಾವರಿ ಮಾಡುವುದು ಹೇಗೆ ? ಭಾವಿಯ ನೀರನ್ನು ಉಪಯೋಗಿಸಿ ಹೆಚ್ಚು ಬೆಳೆ ಬೆಳೆಯುವಂತಾಗಬೇಕು. ಈ ರೀತಿ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿರಬೇಕೆಂದು ಸಮಿತಿಯವರು ಸಲಹೆಮಾಡಿದ್ದಾರೆ. ಇದು ಮಹತ್ವದ ವಿಷಯ. ಇದು ಗೇಣಿದಾರರಿಗೂ ಭೂ ಮಾಲೀಕರಿಗೂ ಸಂಬಂಧಪಟ್ಟಂತೆ ಇರುವಹಾಗೆ ಇನ್ನು ಮುಂದೆ ತರಬೇಕಾಗಿರುವ ಕಾನೂನಿನಲ್ಲಿ ನಿರ್ಬಂಧ ಹಾಕಬೇಕು. ಈ ರೀತಿ ಮಾಡುವದಾದರೆ ವ್ಯವಸಾಯದ ಪ್ರಗತಿಯಾಗುತ್ತದೆ. ಹೆಚ್ಚು ಭೂಮಿಯು ಸಾಗವಳಿಗೆ ಬರುತ್ತದೆ. ಸರ್ಕಾರದವರು ನನ್ನ ಸೂಚನೆಗಳನ್ನು ಗಮನಿಸುತ್ತಾರೆಂದು ನಾನು ನಂಬಿದ್ದೇನೆ.

ಇನ್ನು ಕೊನೆಯದಾಗಿ, ನನಗೆ ಮಾತನಾಡಲು ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕೆ ಅವರನ್ನು ಬಹಳ ವಿನಯಪೂರ್ವಕವಾಗಿ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.